


"VARTHA JANAPADA" Monthly - October 2018
"ವಾರ್ತಾ ಜನಪದ" ಮಾಸಿಕ – ಅಕ್ಟೋಬರ್ 2018
Page No. -52
RNI No. KAR/KAN/2017/75029
Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26





"ಸಭ್ಯತೆಯ ಮಾರ್ಗದಿಂದ
ನೀನು ಜಗತ್ತನ್ನು
ಪರಿವರ್ತಿಸಬಹುದು."

– ಮಹಾತ್ಮ ಗಾಂಧೀಜಿ









ಶ್ರೀ ಹೆಚ್. ಡಿ. ಕುಮಾರಸ್ವಾಮಿ
ಮುಖ್ಯಮಂತ್ರಿ


'**ಮುಂ**ಬರುವ ತಲೆಮಾರುಗಳ ಜನ, ಮಾಂಸ – ಮಜ್ಜೆಗಳಿಂದಾದ ಇಂತಹ ವ್ಯಕ್ತಿಯೊಬ್ಬ ಭೂಮಿಯ ಮೇಲೆ ಬದುಕಿದ್ದ ಎನ್ನುವುದನ್ನು ನಂಬಲಾರರು' ಎಂದು ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಮಹಾತ್ಮ ಗಾಂಧಿ ಅವರ ಕುರಿತು ಹೇಳಿದ್ದರು. ಇದು ನಿಜ. ಗಾಂಧಿ ಅವರ ಜೀವನವೇ ಒಂದು ಸಂದೇಶ ಎಂಬುವುದರಲ್ಲಿ ಲವಶೇಷವೂ ಅನುಮಾನವಿಲ್ಲ. ಬದುಕಿದ್ದಾಗ ಗಾಂಧೀಜಿ ಎಷ್ಟು ಪ್ರಸ್ತುತರಾಗಿದ್ದರೋ, ಇಂದಿಗೂ ಅಷ್ಟೇ ಪ್ರಸ್ತುತ ಎಂಬುದಾಗಿ ಬಲವಾಗಿ ನಂಬಿದವನು ನಾನು. ಈ ಜಗತ್ತು ಎದುರಿಸುತ್ತಿರುವ ಎಲ್ಲ ಸಮಸ್ಯೆಗಳಿಗೂ ಉತ್ತರವನ್ನು ಅವರ ಬದುಕು ಮತ್ತು ತತ್ವಗಳಲ್ಲಿ ಕಂಡುಕೊಳ್ಳಬಹುದಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಹತತ್ವದ ಪ್ರಕಟಣೆ 'ವಾರ್ತಾ ಜನಪದ' ಮಾಸಿಕದ ಅಕ್ಟೋಬರ್ ಸಂಚಿಕೆಯನ್ನು ಹೊಸ ತಲೆಮಾರಿಗೆ ಗಾಂಧೀಜಿ ಅವರ ತತ್ವ ಸಂದೇಶಗಳನ್ನು ಪರಿಚಯಿಸಲೆಂದು ವಿಶೇಷ ಸಂಚಿಕೆಯಾಗಿ ಹೊರತರುತ್ತಿರುವುದು ಸಂತಸದ ವಿಚಾರ. ಗಾಂಧಿ ಜಯಂತಿಯ ತಿಂಗಳಿನಲ್ಲಿ ಇದು ನಿಜಕ್ಕೂ ಅರ್ಥಪೂರ್ಣ ಪ್ರಯತ್ನ.

ರಾಜ್ಯದಾದ್ಯಂತ ಗಾಂಧಿ ಜಯಂತಿ ಆಚರಣೆಯ ಹಾಗೂ ಗಾಂಧಿ ತತ್ವಗಳ ಪ್ರಸಾರದ ಹೊಣೆ ಹೊತ್ತಿರುವ ವಾರ್ತಾ ಮತ್ತು ಸಾರ್ವಜನಿಕ ಇಲಾಖೆಯ ಈ ಕಾರ್ಯ ಎಲ್ಲ ರೀತಿಯಲ್ಲಿ ಯಶ ಕಾಣಲೆಂದು ನನ್ನ ಹಾರೈಕೆ. ನವ ಪೀಳಿಗೆಗೆ ಈ ಸಂಚಿಕೆ ಗಾಂಧೀಜಿಯ ಕುರಿತು ಅರಿವನ್ನು ಮೂಡಿಸುವ ಸಾರ್ಥಕ ಸಾಧನವಾಗಲಿ ಎಂದು ಹಾರೈಸುತ್ತೇನೆ.

(ಹೆಚ್. ಡಿ. ಕುಮಾರಸ್ವಾಮಿ)

ವಾರ್ತಾ
# ಜನಪದ
ಸಂಪುಟ–02 • ಸಂಚಿಕೆ–1 • ಅಕ್ಟೋಬರ್ 2018



ಗಾಂಧೀ ಜಯಂತಿ
ವಿಶೇಷ ಸಂಚಿಕೆ

06 ಗಾಂಧಿ ವಿಚಾರಗಳಿಗಿಂತ ಆಚಾರಗಳ ಅನುಷ್ಠಾನ ಮುಖ್ಯ – ಪ್ರಸನ್ನ ಹೆಗ್ಗೋಡು
• ಡಾ. ಎನ್. ಜಗದೀಶ್ ಕೊಪ್ಪ

11 ಗಾಂಧಿ ಮತ್ತು ಮುಖ್ಯಮಂತ್ರಿ
• ರಮೇಶ ಕೆಂಗೇರಿ

16 ಯಂತ್ರ ಮತ್ತು ನಾಗರಿಕತೆಗೆ
• ಮಹದೇವ ದೇಸಾಯಿ

20 ಗಾಂಧಿ ಹತ್ಯೆಯ ಆ ದಿನ
• ಕುಲದೀಪ್ ನಯ್ಯರ್

25 ಲೋಹಿಯಾ ಕಂಡ ಮಹಾತ್ಮ
• ಬಿ ಎಂ ಸನದಿ

33 ಇಂದೂ ಇರುವ ಗಾಂಧಿ
• ಡಾ. ಯು. ಆರ್. ಅನಂತಮೂರ್ತಿ

39 ಗಾಂಧಿ ಅಂಬೇಡ್ಕರ್ – ಒಂದಿಷ್ಟು ಮಾತು
• ದೇವನೂರು ಮಹಾದೇವ

42 ಗಾಂಧಿ ಮತ್ತು ನಾಸ್ತಿಕ ಗೊ.ರಾ. – ಮುಖಾಮುಖಿಯ ಮಾತುಗಳು
• ವೆಂಕಟೇಶ್ ಮಾಚಕನೂರು

46 ಮಹಾತ್ಮಾ ಗಾಂಧೀಜಿ ಮತ್ತು ಸಿನಿಮಾ
• ಡಾ. ಕೆ. ಪುಟ್ಟಸ್ವಾಮಿ

ಪ್ರಧಾನ ಸಂಪಾದಕರು
ಎನ್. ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ವಿಶೇಷ ಸಂಚಿಕೆ ಸಂಪಾದಕರು
ಡಾ. ಎನ್. ಜಗದೀಶ್ ಕೊಪ್ಪ

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
emagazine : karnatakajanapada.com | www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

150 YEARS OF CELEBRATING THE MAHATMA

# ಸಂಪಾದಕರ ನುಡಿ


ಎನ್. ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ



ಅಕ್ಟೋಬರ್ 2 1869 ಭಾರತದ ಇತಿಹಾಸದಲ್ಲಿ ಸ್ಮರಣೀಯ ದಿನ. ಅಂದು ಗುಜರಾತ್ ರಾಜ್ಯದ ಪೋರ್‌ಬಂದರ್ ಪಟ್ಟಣದಲ್ಲಿ ಜನಿಸಿದ ಮಗುವೊಂದು ಮೋಹನದಾಸ ಕರಮ ಚಂದ್ ಗಾಂಧಿ ಹೆಸರಿನಲ್ಲಿ ಬೆಳೆದು ಮಹಾತ್ಮಗಾಂಧಿ ಎನ್ನುವ ಮಹಾನಾಮದಲ್ಲಿ ಜಗದ್ವಿಖ್ಯಾತರಾದ ಪರಿಯೇ ಒಂದು ಅಚ್ಚರಿ. ಇಂತಹ ಮಹಾನ್ ಚೇತನ ಜನಿಸಿದ ನಾಡಿನಲ್ಲಿ ಹುಟ್ಟಿರುವ ನಾವೆಲ್ಲರೂ ಧನ್ಯರು.

ಈ ಮಹಾತ್ಮರ 150 ನೇ ಜನ್ಮ ವರ್ಷಾಚರಣೆಯನ್ನು ಸಂಭ್ರಮ ಸಡಗರದಿಂದ ಆಚರಿಸಲು ಇಡೀ ದೇಶವೇ ಸಜ್ಜಾಗುತ್ತಿದೆ. ಭಾರತ ಸರ್ಕಾರವು 2018 ರ ಅಕ್ಟೋಬರ್ 2 ರಿಂದ ಆರಂಭಿಸಿ 2020 ರ ಅಕ್ಟೋಬರ್ 2 ರವರೆಗೆ ರಾಷ್ಟ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಸ್ಮರಣೀಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಕಾರ್ಯಕ್ರಮಗಳ ರೂಪುರೇಷೆ ರಚಿಸಲು ರಾಷ್ಟ್ರಪತಿಗಳ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸಮಿತಿ ಮತ್ತು ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ರಚನೆಯಾಗಿದೆ.

ಕರ್ನಾಟಕ ಹಿಂದಿನಿಂದಲೂ ಗಾಂಧೀಜಿ ವಿಚಾರಧಾರೆಗಳಿಗೆ ತೆರೆದ ಹೃದಯ ಹೊಂದಿರುವ ರಾಜ್ಯ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಗಾಂಧೀ ವಿಚಾರಧಾರೆ ಪ್ರಸಾರಕ್ಕಾಗಿ ಸಮನ್ವಯ ಇಲಾಖೆಯಾಗಿ ನೇಮಿಸಲಾಗಿರುವ ವಾರ್ತಾ ಇಲಾಖೆಯ ನೇತೃತ್ವದಲ್ಲಿ ಕರ್ನಾಟಕದಲ್ಲಿಯೂ ವಿನೂತನ ಕಾರ್ಯಕ್ರಮಗಳು ರೂಪಿತವಾಗಿ ಅನುಷ್ಠಾನಗೊಳ್ಳುತ್ತಿವೆ. ಇಡೀ ದೇಶದಲ್ಲಿಯೇ ಗಾಂಧೀ ಪ್ರಣೀತ ಕಾರ್ಯಕ್ರಮಗಳಿಗೆ ಮಾದರಿಯಾಗಿರುವ ಕರ್ನಾಟಕದಲ್ಲಿ ಈಗಾಗಲೆ 'ಗಾಂಧಿ–150–ಒಂದು ರಂಗಪಯಣ' ಹೆಸರಿನ ಕಾರ್ಯಕ್ರಮ ಆಗಸ್ಟ್ 8 ರಿಂದ ಆರಂಭವಾಗಿ ಶಾಲಾ ಕಾಲೇಜುಗಳಲ್ಲಿ ರಂಗ ಪ್ರದರ್ಶನ ನೀಡುತ್ತಿದೆ. ಇದಕ್ಕಾಗಿಯೇ ಸಿದ್ಧವಾಗಿರುವ ಗಾಂಧಿ ರಂಗ ಯೋಧರು ಒಂದು ಸಾವಿರ ರಂಗ ಪ್ರದರ್ಶನ ನೀಡಲು ಸಜ್ಜಾಗಿದ್ದಾರೆ.



**ಅಕ್ಟೋಬರ್ 2, 2018, ಅಂದು ಇಡೀ ದಿನ ವಾರ್ತಾ ಇಲಾಖೆಯಲ್ಲಿ ಗಾಂಧೀ ಸಂಭ್ರಮ–ಸಡಗರ. ಬೆಳಿಗ್ಗೆ: ವಾರ್ತಾ ಇಲಾಖೆಯ 'ಗಾಂಧಿ ಅಂಗಳ' ದಲ್ಲಿ ಗಾಂಧೀ ಪ್ರಣೀತ ಗೀತೆಗಳ ಗಾಯನ. ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ಗಾಂಧಿ 150 ರಥಯಾತ್ರೆಗೆ ಚಾಲನೆ ಮತ್ತು ಮಹಾತ್ಮಗಾಂಧಿ ಸೇವಾ ಪ್ರಶಸ್ತಿ–2018 ರ ಪ್ರದಾನ ಸಮಾರಂಭ. ರಾತ್ರಿ; "ಗಾಂಧಿ–150 ರಂಗ ಪಯಣ"ದ ನಾಟಕ "ಪಾಪು ಗಾಂಧಿ ಬಾಪೂ ಗಾಂಧಿ ಆದ ಕತೆ" ಪ್ರದರ್ಶನ. ಈ ಕಾರ್ಯಕ್ರಮಗಳಲ್ಲಿ ನಾಡಿನ ಮುಖ್ಯಮಂತ್ರಿಗಳು ನಮ್ಮ ಜೊತೆಯಲ್ಲಿರುತ್ತಾರೆ ಎನ್ನುವುದು ನಮಗೆ ಅಭಿಮಾನದ ಸಂಗತಿ.**


ಮಹಾತ್ಮಗಾಂಧಿಯವರ 150 ನೇ ವರ್ಷಾಚರಣೆಯ ಹೊಸ್ತಿಲಿನಲ್ಲಿ ನಿಂತು ನೋಡುವಾಗ ಗಾಂಧಿ ಎನ್ನುವುದು ವ್ಯಕ್ತಿಯೇ ? ಶಕ್ತಿಯೇ ? ವಿಚಾರವೆ ? ಆಚಾರವೆ ? ಎನ್ನುವ ಚಿಂತನೆ ಸುರುಳಿ ಸುರುಳಿಯಾಗಿ ಸಾಗಿ ಕಡೆಗೆ ಗಾಂಧಿ ಒಂದು ವಿಸ್ಮಯವಾಗಿ ಕಂಗೊಳಿಸುತ್ತಾರೆ. ಇದೇ ನಿಜವಿರಬೇಕು– **"ಗಾಂಧಿ– ಒಂದು ವಿಸ್ಮಯ".**

## ಗಾಂಧಿವಾದಿಯೊಂದಿಗೆ ಮಾತುಕತೆ

# ಗಾಂಧಿ ವಿಚಾರಗಳಿಗಿಂತ ಆಚಾರಗಳ ಅನುಷ್ಠಾನ ಮುಖ್ಯ

## – ಪ್ರಸನ್ನ ಹೆಗ್ಗೋಡು

ಸಂದರ್ಶನ
**ಡಾ. ಎನ್.ಜಗದೀಶ್ ಕೊಪ್ಪ**



> ಕಳೆದ ಎರಡೂವರೆ ದಶಕಗಳಿಂದ ಪ್ರಸನ್ನ ಹೆಗ್ಗೋಡು ಎಂದು ಚಿರಪರಿಚಿತರಾಗಿರುವ ರಂಗಕರ್ಮಿ ಪ್ರಸನ್ನರವರು ದೇಶಕಂಡ ಅತ್ಯುತ್ತಮ ರಂಗಕರ್ಮಿಗಳಲ್ಲಿ ಒಬ್ಬರು. ಲೇಖಕರಾಗಿ, ನಾಟಕಕಾರರಾಗಿ ಎಡಪಂಥೀಯ ಚಿಂತನೆಗಳೊಂದಿಗೆ ಗುರುತಿಸಿಕೊಂಡು ಸಮುದಾಯ ತಂಡದ ಮೂಲಕ ನೂರಾರು ನಾಟಕಗಳನ್ನು ಈ ನಾಡಿಗೆ ನೀಡಿದ್ದಾರೆ.

**ಕ**ರ್ನಾಟಕದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೆಗ್ಗೋಡು ಎಂಬ ಗ್ರಾಮ ಭೌಗೂಳಿಕ ನಕ್ಷೆಯಲ್ಲಿ ಒಂದು ಪುಟ್ಟ ಹಳ್ಳಿ. ಆದರೆ, ಇಂದು ಈ ಗ್ರಾಮವು ರಂಗಭೂಮಿ ಚಟುವಟಿಕೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಚಟುವಟಿಕೆಗಳು ಮತ್ತು ಗಾಂಧೀಜಿಯ ಪರಿಕಲ್ಪನೆಗಳ ಅನುಷ್ಠಾನಗಳ ಕೇಂದ್ರ ಬಿಂದುವಾಗಿ ಇಡೀ ಭಾರತವನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ. ಇದಕ್ಕೆ ಕಾರಣರಾದವರು ನಾಡಿನ ಸುಪ್ರಸಿದ್ಧ ಸಾಂಸ್ಕೃತಿಕ ಚಿಂತಕರಾಗಿದ್ದ ಕೆ.ವಿ. ಸುಬ್ಬಣ್ಣನವರು. ಅವರು ಹುಟ್ಟು ಹಾಕಿದ ಈ ಭವ್ಯ ಪರಂಪರೆಯನ್ನು ರಂಗಭೂಮಿ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಅವರ ಪುತ್ರ ಕೆ.ವಿ. ಅಕ್ಷರ ಮುಂದುವರಿಸಿದ್ದಾರೆ. ಅದೇ ರೀತಿ ಹೆಗ್ಗೋಡಿನ ಈಚೆಗಿನ ಭೀಮನಕೋಣೆ ಗ್ರಾಮದಲ್ಲಿ ಚರಕ ಸಂಸ್ಥೆಯನ್ನು ಮತ್ತು ಆಚೆಗಿನ ಊರಾದ ಹೊನ್ನೆಸರದಲ್ಲಿ ಶ್ರಮಜೀವಿಗಳ ಆಶ್ರಮವನ್ನು ಸ್ಥಾಪಿಸುವುದರ ಮೂಲಕ ಸುಪ್ರಸಿದ್ಧ ರಂಗಕರ್ಮಿ ಪ್ರಸನ್ನ ಅವರು ಗಾಂಧಿಯವರ ಸಿದ್ಧಾಂತಗಳನ್ನು ಪ್ರಯೋಗದ ಮೂಲಕ ಆಚರಣೆಗೆ ತರುವುದರ ಮೂಲಕ ಮಹಾತ್ಮನ ಚಿಂತನೆಗಳನ್ನು ಜೀವಂತವಾಗಿರಿಸಿದ್ದಾರೆ.

ತಮ್ಮ ವೈಶಿಷ್ಟಪೂರ್ಣ ಚಿಂತನೆಗಳ ಮೂಲಕ ನಾಡಿನ ಗಮನ ಸೆಳೆದಿದ್ದ ಕೆ.ವಿ.ಸುಬ್ಬಣ್ಣನವರು "ಹಳ್ಳಿಯೆಂಬುದು ಮೂಲಭೂತವಾಗಿ ಒಂದು ವಿಶ್ವ" ಎಂಬುದನ್ನು ತಮ್ಮ ಕ್ರಿಯೆಗಳ ಮೂಲಕ ಮಾಡಿ ತೋರಿಸಿಕೊಟ್ಟವರು. ಮುಂಬೈ ಮೂಲದ ಖ್ಯಾತ ರಂಗಕರ್ಮಿ ಅತುಲ್ ತಿವಾರಿಯವರು ಸುಬ್ಬಣ್ಣನವರ ಹೆಗ್ಗೋಡು ಗ್ರಾಮವನ್ನು ಹೀಗೆ ಬಣ್ಣಿಸಿದ್ದಾರೆ. " ನಾವು ಒಂದಷ್ಟು ಗೆಳೆಯರು ಪ್ರಥಮ ಬಾರಿಗೆ ಹೆಗ್ಗೋಡಿಗೆ ಹೊರಟಾಗ ಮುಂಬೈನಿಂದ ಬೆಂಗಳೂರಿಗೆ ವಿಮಾನ ಪ್ರಯಾಣ ಮಾಡಿದೆವು. ನಂತರ ಬೆಂಗಳೂರಿನಿಂದ ಶಿವಮೊಗ್ಗಕ್ಕೆ ರೈಲಿನಲ್ಲಿ ಸಂಚರಿಸಿ, ಅಲ್ಲಿಂದ ಸಾಗರಕ್ಕೆ ಬಸ್‌ನಲ್ಲಿ ಪ್ರಯಾಣಿಸಿದೆವು. ಸಾಗರದಿಂದ ಹೆಗ್ಗೋಡಿಗೆ ಎತ್ತಿನ ಬಂಡಿಯಲ್ಲಿ ಪ್ರಯಾಣ ಮಾಡಿ ಆ ಊರು ತಲುಪಿದಾಗ " ಗ್ಲೋಬಲ್ ವಿಲೇಜ್" ಎಂಬ ಪರಿಕಲ್ಪನೆಯನ್ನು ಸುಬ್ಬಣ್ಣನವರು ಅಕ್ಷರಶಃ ಆಚರಣೆಗೆ ತಂದಿದ್ದಾರೆ ಎನಿಸಿತು". ತಿವಾರಿಯವರ ಈ ಮಾತು ರೂಪಕದ ಭಾಷೆಯಂತೆ ಕಂಡು ಬಂದರೂ ಸಹ, ಕೆ.ವಿ.ಸುಬ್ಬಣ್ಣ ಮತ್ತು ಪ್ರಸನ್ನರಂತಹ ರಂಗಭೂಮಿಯ ಚಿಂತಕರಿಂದಾಗಿ ಗಾಂಧೀಜಿಯವರು ಕನಸು ಕಂಡಿದ್ದ "ಗ್ರಾಮಭಾರತ" ಹೆಗ್ಗೋಡು ಗ್ರಾಮದಲ್ಲಿ ಸಾಕ್ಷಾತ್ಕಾರಗೊಂಡಿದೆ ಎನ್ನಬಹುದು.

ಕಳೆದ ಎರಡೂವರೆ ದಶಕಗಳಿಂದ ಪ್ರಸನ್ನ ಹೆಗ್ಗೊಡು





ಎಂದು ಚಿರಪರಿಚಿತರಾಗಿರುವ ರಂಗಕರ್ಮಿ ಪ್ರಸನ್ನರವರು ದೇಶಕಂಡ ಅತ್ಯುತ್ತಮ ರಂಗಕರ್ಮಿಗಳಲ್ಲಿ ಒಬ್ಬರು. ಲೇಖಕರಾಗಿ, ನಾಟಕಕಾರರಾಗಿ ಎಡಪಂಥೀಯ ಚಿಂತನೆಗಳೊಂದಿಗೆ ಗುರುತಿಸಿಕೊಂಡು ಸಮುದಾಯ ತಂಡದ ಮೂಲಕ ನೂರಾರು ನಾಟಕಗಳನ್ನು ಈ ನಾಡಿಗೆ ನೀಡಿದ್ದಾರೆ. ತಮ್ಮ ರಂಗಚಟುವಟಿಕೆಯ ನಡುವೆ ಇಪ್ಪತ್ತೈದು ವರ್ಷಗಳ ಹಿಂದೆ ಹೆಗ್ಗೋಡಿನ ಬಳಿ ಚರಕ ಸಂಸ್ಥೆಯನ್ನು ಆರಂಭಿಸಿ ಕೈ ಮಗ್ಗದ ಉತ್ಪನ್ನಗಳಿಗೆ ಚಾಲನೆ ನೀಡುವುದರ ಮೂಲಕ ಮಹಿಳಾ ಸಬಲೀಕರಣ, ದೇಶಿವಾದ ಹಾಗೂ ಗ್ರಾಮೋದ್ಯೋಗ ಚಟುವಟಿಕೆಗಳಿಗೆ ಒತ್ತು ನೀಡುವುದರೊಂದಿಗೆ ಗಾಂಧಿಯವರ ಚಿಂತನೆಗಳಿಗೆ ಮರುಜೀವ ನೀಡಿದ್ದಾರೆ.

ಮಾತು ಮತ್ತು ಕೃತಿಯ ನಡುವೆ ಕಂದಕವಿರಬಾರದೆಂದು ಬಲವಾಗಿ ನಂಬಿರುವ ಪ್ರಸನ್ನರವರು ಸರಳವಾದ ಬದುಕಿಗೆ ತಮ್ಮನ್ನು ಒಗ್ಗಿಸಿಕೊಂಡು ಅಪ್ಪಟ ಗಾಂಧೀಜಿಯ ವಾರಸುದಾರರಂತೆ ಸರಳವಾದ ಮಾರ್ಗದಲ್ಲಿ ಬದುಕುತ್ತಿರುವವರಲ್ಲಿ ಮುಖ್ಯರಾದವರು. ಗಾಂಧಿ ಚಿಂತನೆಗಳೊಂದಿಗೆ ನಿರಂತರ ಅನುಸಂಧಾನ ಮಾಡುತ್ತಿರುವ ಪ್ರಸನ್ನರವರು ತಮ್ಮ ಪ್ರಯೋಗ ಹಾಗೂ ತಾವು ನಡೆದು ಬಂದ ಹಾದಿಯ ಹೆಜ್ಜೆಯ ಗುರುತುಗಳನ್ನು ಇಲ್ಲಿ ಮಾತುಗಳ ಮೂಲಕ ಹಂಚಿಕೊಂಡಿದ್ದಾರೆ.

**ಪ್ರಶ್ನೆ– ನೀವು ಎಡಪಂಥೀಯ ಚಿಂತಕರಾಗಿ ಗುರುತಿಸಿಕೊಂಡಿದ್ದವರು. ತಟ್ಟನೆ ಗಾಂಧಿಮಾರ್ಗದತ್ತ ಹೊರಳಿದ್ದು ಏಕೆ? ಟರ್ನಿಂಗ್ ಪಾಯಿಂಟ್ ಎನ್ನಬಹುದಾದ ಈ ಅನಿರೀಕ್ಷಿತ ತಿರುವಿಗೆ ಪ್ರೇರಣೆಯಾದ ಅಂಶಗಳು ಯಾವುವು?**


**ಪ್ರಸನ್ನ–** ನನ್ನ ಪಾಲಿಗೆ ಇದು ಅನಿರೀಕ್ಷಿತ ತಿರುವೇನಲ್ಲ. ನಾನು ಭಾಗಿಯಾಗಿದ್ದ ಸಮುದಾಯ ನಾಟಕ ಚಳುವಳಿಯಲ್ಲಿ ಇಂತಹ ಅಂಶಗಳು ಒಳಗೊಂಡಿದ್ದವು. ಅಲ್ಲಿ ಎಡಪಂಥೀಯ ಚಿಂತನೆಗಳೊಂದಿಗೆ ಸಮತಾವಾದ, ಸಮಾಜವಾದ ಮತ್ತು ಗಾಂಧಿವಾದದ ತಿರುಳುಗಳು ಮಿಳಿತಗೊಂಡಿದ್ದವು. ಹಾಗಾಗಿ ಗಾಂಧೀಜಿಯವರ ಚಿಂತನೆಗಳ ಕುರಿತಾದ ಒಲವು ನನಗೆ ಮೊದಲಿನಿಂದಲೂ ಇತ್ತು. ಅದೇ ರೀತಿಯಲ್ಲಿ ನನ್ನ ಎಡಪಂಥೀಯ ಚಿಂತಕ ಗೆಳೆಯರೊಂದಿಗಿನ ನನ್ನ ಕೆಲವು ತಕರಾರುಗಳು ಸಹ ಇದ್ದವು.

ನನಗೆ ಮೂರು ವಿಷಯಗಳಲ್ಲಿ ಎಡಪಂಥೀಯ ಸಿದ್ಧಾಂತಗಳೊಂದಿಗೆ ಭಿನ್ನಾಭಿಪ್ರಾಯವಿದೆ. ಒಂದು ದೇವರು, ಎರಡನೆಯದಾಗಿ ಯಂತ್ರ ಮತ್ತು ಮೂರನೆಯದಾಗಿ ಹಿಂಸೆ. ಇವುಗಳ ಕುರಿತಾಗಿ ಅವರು ಸ್ಪಷ್ಟವಾಗಿಲ್ಲ.


ದೇವರ ಕುರಿತಂತೆ ಅವರಿಗೆ ಖಚಿತ ನಿಲುವುಗಳಿಲ್ಲ. ಅದೇ ರೀತಿ ಯಂತ್ರ ನಾಗರೀಕತೆ ಕುರಿತಂತೆ ಅವರ ಚಿಂತನೆಗಳಲ್ಲಿ ಗೊಂದಲವಿದೆ. ಅವರ ದೃಷ್ಟಿಕೋನ ಬಂಡವಾಳಶಾಹಿ ಜಗತ್ತು ನಶಿಸಿ, ಕಾರ್ಮಿಕರ ಕೈಗೆ ಪ್ರಭುತ್ವ ದೊರಕಬೇಕೆಂಬುದೇ ಆಗಿದೆ. ಆದರೆ, ಬದಲಾದ ಕಾಲಘಟ್ಟದಲ್ಲಿ ಯಂತ್ರನಾಗರೀಕತೆ ದುಡಿಯುವ ಕೈಗಳಿಂದ ಅನ್ನದ ಬಟ್ಟಲನ್ನು ಕಸಿದುಕೊಳ್ಳುತ್ತಿದೆ ಎಂಬುದನ್ನು ಅವರು ಗಮನಿಸಿಲ್ಲ. ಇವುಗಳ ಜೊತೆಗೆ ಈ ದೇಶದ ಅತಿ ದೊಡ್ಡ ಸಮಸ್ಯೆಯಾಗಿ ಕಾಡುತ್ತಿರುವ ಹಿಂಸೆಯ ಕುರಿತಾಗಿ ದೇಶದ ಯಾವುದೇ ಎಡರಂಗದ ಸಂಘಟನೆಗಳಿಂದ ಸ್ಪಷ್ಟೀಕರಣ ಬಹಿರಂಗಗೊಂಡಿಲ್ಲ. ನಕ್ಸಲರು ನಡೆಸುತ್ತಿರುವ ಹಿಂಸಾತ್ಮಕ ಚಟುವಟಿಕೆಗಳ ಕುರಿತು ಮೌನ ವಹಿಸಿರುವುದು



> ತಮ್ಮ ರಂಗಚಟುವಟಿಕೆಯ ನಡುವೆ ಇಪ್ಪತ್ತೈದು ವರ್ಷಗಳ ಹಿಂದೆ ಹೆಗ್ಗೋಡಿನ ಬಳಿ ಚರಕ ಸಂಸ್ಥೆಯನ್ನು ಆರಂಭಿಸಿ ಕೈ ಮಗ್ಗದ ಉತ್ಪನ್ನಗಳಿಗೆ ಚಾಲನೆ ನೀಡುವುದರ ಮೂಲಕ ಮಹಿಳಾ ಸಬಲೀಕರಣ, ದೇಶಿವಾದ ಹಾಗೂ ಗ್ರಾಮೋದ್ಯೋಗ ಚಟುವಟಿಕೆಗಳಿಗೆ ಒತ್ತು ನೀಡುವುದರೊಂದಿಗೆ ಗಾಂಧಿಯವರ ಚಿಂತನೆಗಳಿಗೆ ಮರುಜೀವ ನೀಡಿದ್ದಾರೆ.



ನಾವು ಯಂತ್ರಗಳ ತಾತ್ವಿಕತೆ ಮತ್ತು ಅವುಗಳ ಉಪಯೋಗದ ಸಾಧ್ಯತೆಗಳನ್ನು ಸರಿಯಾದ ನೆಲೆಯಲ್ಲಿ ಗ್ರಹಿಸುವುದರ ಮೂಲಕ ಅರ್ಥಮಾಡಿಕೊಳ್ಳಬೇಕು. ತಾತ್ವಿಕ ದೃಷ್ಟಿಯಿಂದ ನೋಡಿದಾಗ ಯಂತ್ರಗಳಿಗೆ ಜಾತಿ,ಧರ್ಮ, ಮೇಲು, ಕೀಳು ಎಂಬ ಹಂಗಿಲ್ಲ ಅಥವಾ ಅರಿವಿಲ್ಲ. ಈ ವಿಷಯದಲ್ಲಿ ಅವುಗಳು ಮುಕ್ತವಾಗಿವೆ. ಆದರೆ, ಮನುಷ್ಯನ ಲಾಭಕೋರತನದಿಂದಾಗಿ ಅವುಗಳು ದುರುಪಯೋಗವಾಗುತ್ತಿವೆ.



ನನ್ನ ತಕರಾರಿಗೆ ಮೂಲಕಾರಣವಾಗಿತ್ತು. ಇವಿಷ್ಟನ್ನು ಹೊರತುಪಡಿಸಿದರೆ, ನಾನು ಸಂಪೂರ್ಣವಾಗಿ ಬದಲಾಗಿಲ್ಲ. ಎಲ್ಲಾ ಪ್ರಗತಿಪರ ಸಂಘಟನೆಗಳೊಂದಿಗೆ ನನ್ನ ಬಾಂಧವ್ಯ ಇಂದಿಗೂ ಮುಂದುವರಿದಿದೆ.

**ಪ್ರಶ್ನೆ– ನಿಮ್ಮ ಮೇಲೆ ಪ್ರಭಾವಿಸಿದ ಗಾಂಧೀಜಿಯವರ ಚಿಂತನೆಗಳು ಯಾವುವು?**

**ಪ್ರಸನ್ನ–** ಕ್ರೈಸ್ತ ಧರ್ಮದಲ್ಲಿ ನೋವಾ ಎಂಬ ಸಂತನೊಬ್ಬನ ಕಥೆಯೊಂದಿದೆ. ಒಮ್ಮೆ ಜಗತ್ತಿನಲ್ಲಿ ಪ್ರಳಯವಾಗಲು ಆರಂಭಿಸಿತು. ನೋವಾ ದೇವರನ್ನು ಪ್ರಾರ್ಥಿಸತೊಡಗಿದ. ದೇವರು ಪ್ರತ್ಯಕ್ಷನಾಗಿ ಪ್ರಳಯ ಮತ್ತು ಪ್ರವಾಹದಿಂದ ಪಾರಾಗಲು ಅವನಿಗೆ ಮುಳುಗದ ದೋಣಿಯೊಂದನ್ನು ವರವಾಗಿ ನೀಡಿದನಂತೆ. ನೋವಾ ತಾನೊಬ್ಬನೇ ದೋಣಿಯಲ್ಲಿ ಕುಳಿತು ಪ್ರಯಾಣಿಸದೆ, ತನ್ನ ಸುತ್ತ ಮುತ್ತ ಇದ್ದ ಸಕಲೆಂಟು ಜೀವರಾಶಿಗಳನ್ನು ದೋಣಿಯಲ್ಲಿ ಹಾಕಿಕೊಂಡು ಪ್ರಳಯದಿಂದ ಪಾರಾದನು ಎಂಬ ಈ ಕಥೆ ನನಗೆ ಯಾವಾಗಲೂ ಮಹಾತ್ಮರನ್ನು ನೆನಪಿಸುತ್ತದೆ. ಗಾಂಧಿ ತಾವು ಬದುಕಿದ್ದ ಕಾಲಘಟ್ಟದಲ್ಲಿ ತಮ್ಮೊಬ್ಬರ ಬಗ್ಗೆ ಅಥವಾ ತಮ್ಮ ಕುಟುಂಬದ ಕುರಿತಾಗಿ ಚಿಂತಿಸಲಿಲ್ಲ. ತಮ್ಮ ಕಣ್ಣೆದುರುಗಿನ ಎಲ್ಲಾ ಸಂಕಟ, ನೋವುಗಳನ್ನು ತನ್ನ ನೋವು ಎಂದು ಪರಿಭಾವಿಸಿದರು. ಅದೇ ರೀತಿ ಅಸಮಾನತೆಯನ್ನು ತನಗಾಗುತ್ತಿರುವ ಅಪಮಾನವೆಂದು ಪರಿಗಣಿಸಿ ಹೋರಾಡಿದರು. ಇದು ನನಗೆ ಬಹಳವಾಗಿ ಕಾಡಿದ ಮತ್ತು ಇಂದಿಗೂ ಕಾಡುತ್ತಿರುವ ಮಹಾತ್ಮನ ಗುಣ.

**ಪ್ರಶ್ನೆ– ಗಾಂಧೀಜಿಯವರ ಯಂತ್ರನಾಗರೀಕತೆಯ ವಿರೋಧವನ್ನು ತಪ್ಪಾಗಿ ಗ್ರಹಿಸಿದವರು ಹೆಚ್ಚು ಮಂದಿ ಇದ್ದಾರೆ. ನೀವು " ಯಂತ್ರಗಳನ್ನು ಕಳಚೋಣ ಬನ್ನಿ" ಎಂಬ ಕೃತಿ ರಚಿಸಿದಾಗ ಅದೇ ವಿರೋಧಾಭಾಸಗಳನ್ನು ಎದುರಿಸಬೇಕಾಯಿತು. ಸಿಂಗರ್ ತನ್ನ ಮಡದಿ ಬಟ್ಟೆಗೆ ಹೊಲಿಗೆ ಹಾಕಲು ಕಷ್ಟಪಡುವುದನ್ನು ನೋಡಲಾರದೆ ಹೊಲಿಗೆ ಯಂತ್ರವನ್ನು ಅವಿಷ್ಕರಿಸಿದ. ಇದನ್ನು ಸ್ವತಃ ಗಾಂಧಿಯವರು ಪ್ರಸ್ತಾಪಿಸಿ ಸಿಂಗರ್‌ನನ್ನು ಕೊಂಡಾಡಿದ್ದಾರೆ. ಹಾಗಾಗಿ ಗಾಂಧೀಜಿಯವರ ಯಂತ್ರಗಳ ಕುರಿತಾದ ಚಿಂತನೆಗಳನ್ನು ಈ ಕಾಲಘಟ್ಟದಲ್ಲಿ ಸಮಾಜಕ್ಕೆ ಮನದಟ್ಟು ಮಾಡಿಕೊಡುವ ಬಗೆ ಹೇಗೆ?**

**ಪ್ರಸನ್ನ–** ನಾವು ಯಂತ್ರಗಳ ತಾತ್ವಿಕತೆ ಮತ್ತು ಅವುಗಳ ಉಪಯೋಗದ ಸಾಧ್ಯತೆಗಳನ್ನು ಸರಿಯಾದ ನೆಲೆಯಲ್ಲಿ ಗ್ರಹಿಸುವುದರ ಮೂಲಕ ಅರ್ಥಮಾಡಿಕೊಳ್ಳಬೇಕು. ತಾತ್ವಿಕ ದೃಷ್ಟಿಯಿಂದ ನೋಡಿದಾಗ ಯಂತ್ರಗಳಿಗೆ ಜಾತಿ,ಧರ್ಮ, ಮೇಲು, ಕೀಳು ಎಂಬ ಹಂಗಿಲ್ಲ ಅಥವಾ ಅರಿವಿಲ್ಲ. ಈ ವಿಷಯದಲ್ಲಿ ಅವುಗಳು ಮುಕ್ತವಾಗಿವೆ. ಆದರೆ, ಮನುಷ್ಯನ ಲಾಭಕೋರತನದಿಂದಾಗಿ ಅವುಗಳು ದುರುಪಯೋಗವಾಗುತ್ತಿವೆ. ಕಮ್ಯುನಿಷ್ಟರಿಗೂ ಸಹ ಈ ವಿಷಯದಲ್ಲಿ ತಪ್ಪು ಗ್ರಹಿಕೆಗಳಿವೆ. ಬಂಡವಾಳಶಾಹಿಗಳ ಕಪಿಮುಷ್ಟಿಯಿಂದ ಯಂತ್ರಗಳನ್ನು ಬಿಡಿಸಿ ಅವುಗಳನ್ನು ಕಾರ್ಮಿಕರ ಕೈಗೆ ಒಪ್ಪಿಸಬೇಕೆಂದು ಅವರು ಬಯಸುತ್ತಾರೆ. ಆದರೆ, ಇದೇ ಯಂತ್ರಗಳು ದುಡಿಯುವ ಕೈಗಳಿಂದ ಕೆಲಸವನ್ನು ಕಿತ್ತುಕೊಳ್ಳುತ್ತವೆ ಎಂಬುವುದನ್ನು ಅವರು ಯೋಚಿಸುವುದಿಲ್ಲ. ಬಸವಣ್ಣನವರು ಕಾಯಕಕ್ಕೆ ಮಹತ್ವ ನೀಡಿದ ಹಿನ್ನಲೆ ಅಥವಾ ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯ ಹಿನ್ನಲೆಯನ್ನು ನಾವು ಸ್ಪಷ್ಟವಾಗಿ ಗ್ರಹಿಸಬೇಕು.

ಮನುಷ್ಯನ ಅಗತ್ಯತೆಗೆ ಎಂತಹ ಯಂತ್ರಗಳು ಬೇಕು ಎಂಬುದನ್ನು ನಾವು ಅರಿತುಕೊಳ್ಳಬೇಕು. ಇಂದು ಯಾವುದೇ ಆಸ್ಪತ್ರೆಗೆ ಹೋಗಿ ನೋಡಿ ಅತ್ಯಾಧುನಿಕ ಯಂತ್ರಗಳು ಕಾಣುತ್ತವೆ. ನೋವಿಲ್ಲದೆ ಶಸ್ತ್ರಚಿಕಿತ್ಸೆ ಮಾಡುವುದರಿಂದ ಹಿಡಿದು ನಮ್ಮ ಅಂಗಾಂಗಗಳನ್ನು ಪರೀಕ್ಷಿಸಿ ಫಲಿತಾಂಶ ನೀಡುವ ಯಂತ್ರಗಳು, ರಕ್ತವನ್ನು ಹೀರಿ ಬೇರ್ಪಡಿಸುವ ಯಂತ್ರಗಳು ಹೀಗೆ ತರಾವರಿ ಯಂತ್ರಗಳು ಕಾಣಸಿಗುತ್ತವೆ. ಆದರೆ, ಇದರ ಅಂತಿಮ ಫಲಿತಾಂಶ ಏನು ಎಂದರೆ, ಇವುಗಳು ಮನುಷ್ಯನ ಸಾವನ್ನು ಮುಂದೂಡಬಲ್ಲ ಯಂತ್ರಗಳೇ ಹೊರತು ಅವನ ಆರೋಗ್ಯವನ್ನು ಕಾಪಾಡುವ ಅಥವಾ ಸದಾ ಸುಸ್ಥಿತಿಯಲ್ಲಿಡುವ ಯಂತ್ರಗಳಲ್ಲ. ಮನುಷ್ಯನ ಆರೋಗ್ಯವನ್ನು ಸುಸ್ಥಿತಿಯಲ್ಲಿಡುವುದು ದೈಹಿಕ ಶ್ರಮ. ಅಂದರೆ, ಕಾಯಕವೇ ಹೊರತು ಯಂತ್ರಗಳಲ್ಲ. ಹಿತಮಿತವಾದ ಆಹಾರ ಸೇವನೆಯಿಂದ ಹಿಡಿದು ಎಲ್ಲಾ ವಿಷಯಗಳಲ್ಲಿ ಮಿತವಾದ ಹಾಗೂ ಸರಳವಾದ ಬದುಕು ಮಾತ್ರ ಮನುಷ್ಯನನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಸುಸ್ಥಿತಿಯಲ್ಲಿ ಇಡಬಲ್ಲವು.

ಉದಾಹರಣೆಗೆ ಹೇಳುವುದಾರೆ, ನಾವೀಗ ಕುಳಿತಿರುವ ಈ ಶ್ರಮಜೀವಿ ಆಶ್ರಮದಿಂದ ಹೆಗ್ಗೋಡಿಗೆ ಕೇವಲ ಒಂದು ಕಿಲೋಮೀಟರ್ ಅಂತರವಿದೆ. ಸಾಗರಕ್ಕೆ ಬಸ್ ಹಿಡಿಯಲು ನಾವು ಇಲ್ಲಿಂದ ಹೆಗ್ಗೋಡಿಗೆ ಹೋಗಲು ದ್ವಿಚಕ್ರ ವಾಹನ ಅಥವಾ ಕಾರು ಬೇಕೆ? ಕಾಲ್ನಡಿಗೆಯಲ್ಲಿ ಕೇವಲ ಐದಾರು ನಿಮಿಷದ ದೂರದ ಪ್ರಯಾಣಕ್ಕೆ ನಾವು ಯಂತ್ರಗಳ ಮೊರೆ ಹೋಗುತ್ತೇವೆ. ಗಾಂಧೀಜಿಯವರಿಗೆ ಇಂತಹ ವಿಷಯಗಳಲ್ಲಿ ವಿರೋಧವಿತ್ತು. ಅವರ ದೃಷ್ಟಿಯಲ್ಲಿ ಚರಕ, ರಾಟೆ, ಕುಡುಗೋಲು, ನೇಗಿಲು, ಕೈ ಮಗ್ಗ, ಕಂಬಾರಿಕೆಯ ಚಕ್ರ ಇವೆಲ್ಲವೂ ಮನುಷ್ಯನ ಬಹುಪಯೋಗಿ ಯಂತ್ರಗಳಾಗಿದ್ದವು. ಬೃಹತ್ ಯಂತ್ರನಾಗರೀಕತೆ ಮನುಷ್ಯನಿಗಷ್ಟೇ ಅಲ್ಲದೆ, ನಿಸರ್ಗಕ್ಕೆ ಮತ್ತು ಜೀವಸಂಕುಲಕ್ಕೆ ಅಪಾಯಕಾರಿಯಾದುದು ಎಂಬುದು ಅವರ ನಿಲುವಾಗಿತ್ತು.

**ಪ್ರಶ್ನೆ– ಗಾಂಧೀಜಿಯವರು ಪ್ರತಿಪಾದಿಸಿದ ಸಹಕಾರಿ ತತ್ವ ಮನುಷ್ಯನ ಒಳಿತು ಮತ್ತು ಅಭಿವೃದ್ಧಿಗೆ ಮಾತ್ರವಲ್ಲದೆ, ಸಾಮಾಜಿಕ ಅಭಿವೃದ್ಧಿ ಹಾಗೂ ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಮೂಲಾಧಾರ ಎಂಬಂತಿತ್ತು. ಆದರೆ, ಈಗಿನ ಸಹಕಾರ ಸಂಘಗಳು ರಾಜಕೀಯ ಪುಡಾರಿಗಳನ್ನು ಹುಟ್ಟುಹಾಕುವ ಸಂಸ್ಥೆಗಳಾಗಿವೆ. ಈ ಕುರಿತು ನಿಮ್ಮ ಅಭಿಪ್ರಾಯ ಏನು?**

**ಪ್ರಸನ್ನ–** ಸಹಕಾರ ತತ್ವ ಹೊಸದೇನಲ್ಲ. ಅದು ಗಾಂಧೀಜಿಯವರಿಗಿಂತ ಮೊದಲು ಹಲವು ರೂಪಗಳಲ್ಲಿ ಯುರೋಪ್ ರಾಷ್ಟ್ರಗಳಲ್ಲಿ ಜಾರಿಯಲ್ಲಿತ್ತು. ಸಮತಾವಾದ, ಸಮಾಜವಾದ ಚಿಂತನೆಯ ಬೇರುಗಳು ಇದರಲ್ಲಿ ಅಡಕವಾಗಿವೆ. ನಿಮ್ಮ ಮಾತು ನಿಜ; ಸರ್ಕಾರದ ಮಧ್ಯ ಪ್ರವೇಶದಿಂದಾಗಿ ಸಹಕಾರಿ ತತ್ವದ ಮೂಲ ಆಶಯಗಳು ಮಣ್ಣು ಪಾಲಾಗಿವೆ. 1947 ರ ನಂತರದ ಭಾರತದಲ್ಲಿ ರೂಪಿತವಾಗಿರುವ ಕಾನೂನುಗಳು ಬಹಳಷ್ಟು ಗಟ್ಟಿಯಾಗಿವೆ. ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದಿದ್ದರೆ,ಇಂದು ನಾವು ಎದುರಿಸುತ್ತಿರುವ ಲಿಂಗ ಅಸಮಾನತೆ, ಅಸ್ಪೃಶ್ಯತೆ ಅಥವಾ ಭ್ರಷ್ಟಾಚಾರ ಇಂತಹವುಗಳು ಇರುತ್ತಿರಲಿಲ್ಲ. ಗಾಂಧೀಜಿಯವರ ಶಿಷ್ಯ ಹಾಗೂ ಭಾರತ ಕಂಡ ನೈಜ ಅರ್ಥಶಾಸ್ತ್ರಜ್ಞ ಜೆ.ಸಿ. ಕುಮಾರಪ್ಪನವರು ಭಾರತದ ಸಂವಿಧಾನ ಕುರಿತಂತೆ ಒಂದು ಕಡೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅವರ ಪ್ರಕಾರ, ನಾಗರೀಕ ಹಕ್ಕುಗಳ ಕುರಿತಾಗಿ ಒತ್ತಿ ಹೇಳಿದ ಸಂವಿಧಾನವು, ಅದೇ ರೀತಿಯಲ್ಲಿ ನಾಗರೀಕರ ಜವಾಬ್ದಾರಿಗಳ ಕುರಿತಾಗಿ ಒತ್ತಿ ಹೇಳಬೇಕಿತ್ತು ಎಂಬುದು ಅವರ ಅಭಿಪ್ರಾಯವಾಗಿತ್ತು.

ಸರ್ಕಾರದ ಹಸ್ತಕ್ಷೇಪವಿಲ್ಲದ ಜಾಗದಲ್ಲಿ ಅನೇಕ ಸಹಕಾರಿ ಸಂಘ ಸಂಸ್ಥೆಗಳು ಇಂದಿಗೂ ಅಸ್ತಿತ್ವದಲ್ಲಿದ್ದು ಮಾದರಿಯಾಗಿವೆ. ಆದರೆ, ಅವುಗಳು ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಿ ಕಂಡು ಬರುತ್ತವೆ.



ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆ ಹಾಗೂ ಮಲೆನಾಡಿನ ಪ್ರದೇಶಗಳಲ್ಲಿ ಗಾಂಧೀಜಿಯವರ ಆಶಯದಂತೆ ಸಹಕಾರದ ತತ್ವವನ್ನು ಪಾಲಿಸುತ್ತಾ ಯಶಸ್ವಿನ ಮಾರ್ಗದಲ್ಲಿ ಮುಂದುವರಿದಿವೆ.

**ಪ್ರಶ್ನೆ– ಇಂದಿನ ಈ ಇಪ್ಪತ್ತೊಂದನೆಯ ಜಾಗತೀಕರಣದ ಭರಾಟೆಯ ಮಾರುಕಟ್ಟೆಯ ಪ್ರಭುತ್ವದಲ್ಲಿ ಗಾಂಧೀಜಿಯವರ ವಿಚಾರಧಾರೆಗಳನ್ನು ಕಾಪಾಡಿಕೊಳ್ಳುವುದು ಹೇಗೆ? ಮತ್ತು ಅವುಗಳನ್ನು ಯುವ ತಲೆಮಾರಿಗೆ ದಾಟಿಸುವ ಬಗೆ ಹೇಗೆ?**

**ಪ್ರಸನ್ನ–** ನಿಜ ಹೇಳಬೇಕೆಂದರೆ, ಗಾಂಧಿ ವಿಚಾರಧಾರೆಯನ್ನು ಉಪನ್ಯಾಸದ ಮೂಲಕವಾಗಲಿ, ಪುಸ್ತಕದ ಮೂಲಕವಾಗಲಿ ಪ್ರಚಾರ ಮಾಡುವ ಅವಶ್ಯಕತೆ ಇಲ್ಲ. ಅವರ ಆಚಾರಗಳನ್ನು ಅಂದರೆ, ಸಿದ್ಧಾಂತಗಳನ್ನು ಆಚರಣೆಗೆ ತಂದರೆ ಸಾಕು, ಅವುಗಳು ತಂತಾನೆ ವಿಚಾರಗಳಾಗಿ ಪ್ರಸಾರಗೊಳ್ಳುತ್ತವೆ. ಗಾಂಧೀಜಿಯವರು ಮಾತನಾಡಿದ್ದಕ್ಕಿಂತ ಹೆಚ್ಚಾಗಿ ಅವರಿಗೆ ಒಪ್ಪಿಗೆಯಾದ ವಿಚಾರಗಳನ್ನು ಆಚರಣೆಗೆ ತಂದರು.

**ಪ್ರಶ್ನೆ– ನಾನು ಗಮನಿಸಿದ ಹಾಗೆ ಈಗಿನ ಯುವತಲೆಮಾರು ಗಾಂಧೀಜಿ ಕುರಿತಂತೆ ತುಂಬಾ ಆಸಕ್ತಿ ತಾಳಿದ್ದಾರೆ. ನಿಮ್ಮ ಅನುಭವಕ್ಕೆ ಇದು ಬಂದಿದೆಯಾ?**

**ಪ್ರಸನ್ನ–** ಹೌದು. ನಮ್ಮಲ್ಲಿಗೆ ನೂರಾರು ಮಂದಿ ಬರುತ್ತಿದ್ದಾರೆ. ಚರಕ ಸಂಸ್ಥೆಗೆ ಹಾಗೂ ಶ್ರಮಜೀವಿಗಳ ಆಶ್ರಮಕ್ಕೆ ಭೇಟಿ ಕೊಟ್ಟು, ಇಲ್ಲಿ ನೇಕಾರಿಕೆ, ಕೈ ಮಗ್ಗ, ಸಹಜ ಕೃಷಿ, ನೈಜ ಬಣ್ಣಗಳ ತಯಾರಿಕೆ, ಗ್ರಾಮಾಭಿವೃದ್ಧಿಯ ಚಟುವಟಿಕೆಗಳು ಇವುಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದಾರೆ. ಜೊತೆಗೆ ಆಶ್ರಮದಲ್ಲಿ ಎರಡು–ಮೂರು ದಿನ ಇದ್ದು ಚಟುವಟಿಕೆಗಳಲ್ಲಿ ತಾವು ಸಹ ಪಾಲ್ಗೊಳ್ಳುತ್ತಿದ್ದಾರೆ.



ಚರಕ ಸಂಸ್ಥೆಯು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಏಳುನೂರು ಮಂದಿಗೆ ಉದ್ಯೋಗ ನೀಡಿದೆ. ಗ್ರಾಮೋದ್ಯೋಗ ಚಟುವಟಿಕೆ ತಂತಾನೆ ಹರಡಬೇಕು. ಚರಕ ಸಂಸ್ಥೆಯನ್ನು ಅಲ್ಲಿನ ಮಹಿಳೆಯರು ಮತ್ತು ಸಹೋದ್ಯೋಗಿಗಳು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ನಿರ್ವಹಿಸುತ್ತಿದ್ದಾರೆ.

**ಪ್ರಶ್ನೆ– ನೀವು ಆಸಕ್ತರಿಗೆ ಈ ಕುರಿತಂತೆ ನಿರಂತರವಾಗಿ ತರಬೇತಿ ಶಿಬಿರವನ್ನು ಏಕೆ ಏರ್ಪಡಿಸಬಾರದು?**

**ಪ್ರಸನ್ನ–** ನನಗೂ ಆಸಕ್ತಿ ಇದೆ. ಆದರೆ. ಯಾವ ಕಾರಣಕ್ಕೂ ಅದು ವ್ಯವಹಾರದ ಕಾರ್ಯಕ್ರಮವಾಗಬಾರದು ಎಂದು ನಿರ್ಧರಿಸಿದ್ದೇನೆ. ತಾವಾಗಿಯೇ ಆಸಕ್ತಿ ವಹಿಸಿ ಬರುವ ಉತ್ಸಾಹಿಗಳಿಗೆ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಿದ್ದೇವೆ. ಇದಕ್ಕಾಗಿ ಶ್ರಮ ಜೀವಿ ಆಶ್ರಮದಲ್ಲಿ ಮುವತ್ತು ಮಂದಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ.

**ಪ್ರಶ್ನೆ– ನಿಮ್ಮ ಚರಕ ಸಂಸ್ಥೆ ಕುರಿತು ಹೇಳಿ? ಅದರ ಚಟುವಟಿಕೆಯನ್ನು ರಾಜ್ಯಾದಂತ ವಿಸ್ತರಿಸಬಹುದಲ್ಲವೆ?**

**ಪ್ರಸನ್ನ–** ಚರಕ ಸಂಸ್ಥೆಗೆ 24 ವರ್ಷ ತುಂಬಿ ಇದೀಗ 25 ವರ್ಷಕ್ಕೆ ಕಾಲಿಟ್ಟಿದೆ. ಚರಕ ಸಂಸ್ಥೆಯು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಏಳುನೂರು ಮಂದಿಗೆ ಉದ್ಯೋಗ ನೀಡಿದೆ. ಗ್ರಾಮೋದ್ಯೋಗ ಚಟುವಟಿಕೆ ತಂತಾನೆ ಹರಡಬೇಕು. ಚರಕ ಸಂಸ್ಥೆಯನ್ನು ಅಲ್ಲಿನ ಮಹಿಳೆಯರು ಮತ್ತು ಸಹೋದ್ಯೋಗಿಗಳು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ನಿರ್ವಹಿಸುತ್ತಿದ್ದಾರೆ. ಅದರ ವಿಸ್ತರಣೆಗೆ ಹೊರಟರೆ, ಅದಕ್ಕೊಬ್ಬ ಮೇನೇಜರ್, ಸೂಪರ್ ವೈಸರ್ ಹೀಗೆ ವ್ಯಕ್ತಿಗಳು ಬೇಕಾಗುತ್ತದೆ. ಆ ರೀತಿಯಲ್ಲಿ ವಿಸ್ತರಿಸಲು ಹೊರಟರೆ ಚರಕ ಸಂಸ್ಥೆಯು ಸಮಾನತೆ ಆಧಾರ ಮೇಲೆ ಕಟ್ಟಿದ ಸಂಸ್ಥೆಯಾಗುವ ಬದಲು ಕಾರ್ಪೊರೇಟ್ ಸಂಸ್ಥೆಯಾಗುವ ಅಪಾಯವಿದೆ. ಹಾಗಾಗಿ ಅದನ್ನು ಸ್ವಯಂ ಅಭಿವೃದ್ಧಿ ಮತ್ತು ವಿಸ್ತರಿಸಿಕೊಳ್ಳುವ ಸಂಸ್ಥೆಯಾಗಬೇಕೆಂದು ಬಯಸಿದ್ದೇನೆ.

**ಪ್ರಶ್ನೆ– ಈಗಿನ ವಾತಾವರಣದಲ್ಲಿ ಕೈಮಗ್ಗ ಉತ್ಪನ್ನಗಳಿಗೆ ಮತ್ತು ನೇಕಾರಿಕೆ ವೃತ್ತಿಗೆ ಆಶಾದಾಯಕವಾದ ವಾತಾವರಣ ಇದೆಯಾ?**

**ಪ್ರಸನ್ನ–** ಕೈ ಮಗ್ಗದ ಉತ್ಪನ್ನಗಳಿಗೆ ಒಳ್ಳೆಯ ಬೇಡಿಕೆ ಇದೆ. ಇತ್ತೀಚೆಗೆ ಎಲ್ಲರೂ ಆಸಕ್ತಿ ತೋರುತ್ತಿದ್ದಾರೆ. ಉಳಿದ ವೃತ್ತಿಗೆ ಹೋಲಿಸಿದರೆ, ನೇಕಾರಿಕೆ ವೃತ್ತಿಯಿಂದ ಹಲವರು ವಿಮುಖರಾಗುತ್ತಿರುವುದು ನಿಜ. ಆದರೆ, ಮಹಿಳೆಯರು ಹಾಗೂ ಇತರೆ ವರ್ಗದವರು ಅಂದರೆ, ದಲಿತರು ಮತ್ತು ಬ್ರಾಹ್ಮಣರು ಸಹ ಜಾತಿ ಬೇಧವಿಲ್ಲದೆ ಕೈ ಮಗ್ಗ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಏಕೆಂದರೆ, ಈ ವೃತ್ತಿ ಮನೆಯೊಳಗೆ ಕುಳಿತು ಮಾಡುವಂತಹದ್ದು. ಸಾಮಾನ್ಯವಾಗಿ ಮಹಿಳೆಯರು ಇಂತಹ ವೃತ್ತಿಗಳನ್ನು ಹೆಚ್ಚು ಇಷ್ಟಪಡುತ್ತಾರೆ. ನೇಕಾರಿಕೆ ವೃತ್ತಿ ತೊರೆದು ಹೋದವರು ಮರಳಿ ಬರುತ್ತಿದ್ದಾರೆ. ಒಂದಿಷ್ಟು ಆದಾಯ ಕಡಿಮೆ ಎನಿಸಿದರೂ ಸಹ ಈ ವೃತ್ತಿಯ ಜೊತೆಗೆ ಇತರೆ ಉಪಕಸುಬುಗಳನ್ನು ಮಾಡುವ ಅವಕಾಶ ಇರುವುದರಿಂದ ಆಶಾದಾಯಕವಾಗಿದೆ. ಆದರೆ, ಕೇಂದ್ರ ಸರ್ಕಾರ ಜಿ.ಎಸ್.ಟಿ. ತೆರಿಗೆಯ ಮೂಲಕ ಸಣ್ಣ ಘಟಕಗಳು ಮತ್ತು ಕೈಮಗ್ಗದ ಉದ್ದಿಮೆದಾರರ ಕುತ್ತಿಗೆ ಹಿಸುಕುತ್ತಿದೆ. ಈಗಿನ ತೆರಿಗೆ ನಿಯಮದಲ್ಲಿ ಒಬ್ಬ ಸಣ್ಣ ಉದ್ದಿಮೆದಾರ ಪಕ್ಕದ ರಾಜ್ಯಕ್ಕೆ ಹೋಗಿ ತನ್ನ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಈ ನಿಯಮ ಬದಲಾಗಬೇಕು. ಕೈ ಮಗ್ಗದ ಉತ್ಪನ್ನಗಳಿಗೆ ಕೇಂದ್ರ ಸರ್ಕಾರ ತೆರಿಗೆಯಲ್ಲಿ ಸಂಪೂರ್ಣ ರಿಯಾಯಿತಿ ನೀಡಬೇಕಿದೆ. ಇದು ಕೇವಲ ನನ್ನೊಬ್ಬನ ಬೇಡಿಕೆ ಮಾತ್ರವಾಗಿರದೆ, ಇಡೀ ದೇಶದ ಸಣ್ಣ ವ್ಯಾಪಾರಸ್ಥರು ಮತ್ತು ಕೈ ಮಗ್ಗ ಘಟಕಗಳ ಬೇಡಿಕೆಯಾಗಿದೆ.





# ಗಾಂಧಿ ಮತ್ತು ಮುಖ್ಯಮಂತ್ರಿ

ರಮೇಶ ಕೆಂಗೇರಿ

**ಮೊದಲಿನಿಂದಲೂ** ನಾವು ಮಹಾತ್ಮ ಗಾಂಧೀಜಿಯವರನ್ನು ಭಾರತ ಸ್ವಾತಂತ್ರ್ಯ ಹೋರಾಟದೊಂದಿಗೇ ಸಮೀಕರಿಸಿಕೊಂಡು ಬಂದವರು. ಗಾಂಧೀಜಿಯಿಲ್ಲದೆ ಸ್ವಾತಂತ್ರ್ಯ ಸಂಗ್ರಾಮವಿಲ್ಲ ಎಂದೇ ನಂಬಿಕೊಂಡು ಬಂದವರು. ಇದು ಸತ್ಯ ಕೂಡ. ಅಹಿಂಸೆ ಎಂಬ ಮಹಾನ್ ಅಸ್ತ್ರವನ್ನು ಜಗತ್ತಿಗೆ ಪರಿಚಯಿಸಿದ ಧೀರ ಸೇನಾನಿ ಗಾಂಧೀಜಿಯನ್ನು ಬಿಟ್ಟು ಸ್ವಾತಂತ್ರ್ಯ ಸಂಗ್ರಾಮವನ್ನು ಊಹಿಸಲೂ ಸಾಧ್ಯವಿಲ್ಲ. ಆದರೆ ಆ ಮಹಾನ್ ಚೇತನ ಬರಿಯ ಸ್ವಾತಂತ್ರ್ಯ ಸೇನಾನಿಯಷ್ಟೆ ಆಗಿರಲಿಲ್ಲ. ಬಹುದೊಡ್ಡ ಆರ್ಥಿಕ ತಜ್ಞ, ಬಹು ಶ್ರುತ ಸಮಾಜ ಶಾಸ್ತ್ರಜ್ಞ , ಭವಿಷ್ಯದ ಮುಂಗಾಣ್ಕೆಯನ್ನು ಕಂಡ ದ್ರಷ್ಟಾರ, ಮಹಾನ್ ಮಾನವತಾ ವಾದಿಯೂ ಆಗಿದ್ದರು ಎನ್ನುವ ಸಂಗತಿ ಬಹುತೇಕ ಅಪರಿಚಿತವೇ ಆಗಿ ಉಳಿದಿರುವುದು ಕೂಡ ಅಷ್ಟೇ ಸತ್ಯ.

ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣ ಗಾಂಧೀಜಿಯವರನ್ನು ದೈವತ್ವಕ್ಕೇರಿಸಿ, ಅವರನ್ನೊಂದು ಉನ್ನತ ಪೀಠದಲ್ಲಿರಿಸಿ ಆರಾಧಿಸಲು ಆರಂಭಿಸಿತು. ಗಾಂಧೀಜಿ ಬರಿಯ ಘೋಷಣೆ, ನೆನಮ ಮತ್ತು ಮುಖವಾಡವಾದರೇ ಹೊರತು ನಿಜ ಅರ್ಥದಲ್ಲಿ ಅವರ ಜೀವನ ಮಾರ್ಗ ರಾಜಕಾರಣದ ಹೊರಗೇ ಉಳಿದು ಬಿಟ್ಟಿತು



ಈ ಹಿನ್ನೆಲೆಯಲ್ಲಿ ಕರ್ನಾಟಕದ ಸ್ಥಿತಿ ಏನು ಎಂದು ವಿಶ್ಲೇಷಿಸುವ ಸಂದರ್ಭದಲ್ಲಿ, ನಮ್ಮ ಚಿತ್ತಭಿತ್ತಿಯಲ್ಲಿ ಸುಳಿವುದು ಗಾಂಧೀ ಮಾರ್ಗವನ್ನು ಅನುಸರಿಸಲೆತ್ನಿಸಿದ ನಮ್ಮ ಸರ್ಕಾರಗಳು, ಕನ್ನಡತನಕ್ಕೆ ಒತ್ತುಕೊಟ್ಟು ಕನ್ನಡದ ಅಸ್ಮಿತೆಯನ್ನು ದೇಶಮಾನ್ಯ ಮಾಡಿದ ಕೆಂಗಲ್ ಹನುಮಂತರಾಯರು, 'ಉಳುವವನಿಗೇ ಭೂಮಿ' ಎನ್ನುವ ಕನಸನ್ನು ನನಸು ಮಾಡಿದ, ಹಿಂದುಳಿದ ವರ್ಗಕ್ಕೊಂದು ಗಟ್ಟಿ ದನಿ ನೀಡಿದ ದೇವರಾಜ ಅರಸು ಅವರನ್ನೂ ಒಳಗೊಂಡಂತೆ ನಮ್ಮ ನಾಡನ್ನು ಮುನ್ನಡೆಸಿದ ಎಲ್ಲ ಮುಖ್ಯಮಂತ್ರಿಗಳೂ, ಕಾಲದಿಂದ ಕಾಲಕ್ಕೆ ಕೈಗೊಂಡ ಸಮಾಜ ಸುಧಾರಣಾ ಕ್ರಮಗಳು ಬಹುತೇಕ ಗಾಂಧೀಜಿಯವರ ತತ್ವಚಿಂತನೆಗಳ ನೆಲೆಗಟ್ಟಿನ ಆಧಾರದ ಮೇಲೆ ರೂಪುಗೊಂಡವಾಗಿದ್ದವು ಎನ್ನುವುದು ಕರ್ನಾಟಕದ ಹೆಮ್ಮೆ. ಗಾಂಧೀಜಿಯವರ ಚಿಂತನೆಗಳು ಇಂದಿನ ನಮ್ಮ ಯುವಜನರಿಗೆ ಸ್ಫೂರ್ತಿಯಾಗಬೇಕು ಎನ್ನುವ ದೃಷ್ಟಿಯಿಂದ ಪ್ರತಿ ಜಿಲ್ಲೆಯಲ್ಲಿಯೂ 'ಗಾಂಧಿ ಭವನ' ಸ್ಥಾಪನೆಯ ನಿರ್ಧಾರ ಕೈಗೊಂಡ ಸಿದ್ದರಾಮಯ್ಯ ಅವರು ಕರ್ನಾಟಕದ ಗಾಂಧಿ ಪ್ರಣೀತ ಅಭಿವೃದ್ಧಿ ಹಾದಿಯನ್ನು ಬೆಳಗಿದವರಾಗಿದ್ದರು.

ಪ್ರಸ್ತುತ ಕರ್ನಾಟಕದ ಮುಖ್ಯಮಂತ್ರಿಯಾಗಿರುವ ಕುಮಾರಸ್ವಾಮಿ ಅವರು ಗಾಂಧೀಜಿಯ ಬದುಕಿನ ಮಾರ್ಗದಿಂದ ಪ್ರಭಾವಿತರಾಗಿರುವುದನ್ನು, ಅವರ 'ಗ್ರಾಮ ಸ್ವರಾಜ್ಯ' ಕಲ್ಪನೆಯನ್ನು ಕಾರ್ಯರೂಪಕ್ಕೆ ತರಲು ಪ್ರಾಮಾಣಿಕ ಕ್ರಿಯಾಶೀಲರಾಗಿರುವುದನ್ನು ಎಲ್ಲರೂ ಕಂಡಿದ್ದೇವೆ.

12 ವರ್ಷಗಳ ಹಿಂದೆ ಪ್ರಥಮ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ, ಅವರು ಕಂಡ ಕನಸು– ಕೈಗೊಂಡ ಕ್ರಮಗಳು ಗಾಂಧೀ ಮಾರ್ಗವನ್ನು ಆಳವಾಗಿ ಅರಿತು ಅಭ್ಯಾಸ ಮಾಡಿದ ವ್ಯಕ್ತಿತ್ವಕ್ಕೆ ಸ್ಪಷ್ಟ ನಿದರ್ಶನಗಳು.

ಅಧಿಕಾರ ವಹಿಸಿಕೊಂಡ ತರುಣದಲ್ಲಿಯೇ ಅವರು ಬೆಂಗಳೂರಿನ ಗಾಂಧಿಭವನಕ್ಕೆ ಕಾಯಕಲ್ಪ ನೀಡಿದ್ದರು. ಗಾಂಧೀಜಿ ಚಿಂತನೆಗಳ ನಿರಂತರ ಅಧ್ಯಯನದಲ್ಲಿ ತೊಡಗಿಕೊಂಡಿದ್ದ ಗಾಂಧೀ ಭವನಕ್ಕೆ ಹೊಸ ಗಟ್ಟಿ ಮಾರ್ಗ ಕಟ್ಟಿಕೊಟ್ಟಿದ್ದರು.



> ಕುಮಾರಸ್ವಾಮಿ ಅವರು ಗಾಂಧೀಜಿಯ ಬದುಕಿನ ಮಾರ್ಗದಿಂದ ಪ್ರಭಾವಿತರಾಗಿರುವುದನ್ನು, ಅವರ 'ಗ್ರಾಮ ಸ್ವರಾಜ್ಯ' ಕಲ್ಪನೆಯನ್ನು ಕಾರ್ಯರೂಪಕ್ಕೆ ತರಲು ಪ್ರಾಮಾಣಿಕವಾಗಿ ಕ್ರಿಯಾಶೀಲರಾಗಿರುವುದನ್ನು ಎಲ್ಲರೂ ಕಂಡಿದ್ದೇವೆ.






ಟಿಬೆಟ್ ಧರ್ಮಗುರು ದಲೈಲಾಮಾ ಅವರೊಂದಿಗೆ ಮುಖ್ಯಮಂತ್ರಿ

> **"ಶಿಕ್ಷಣ ಬದುಕಿಗೆ ದಾರಿದೀಪವಾಗಬೇಕು"** ಎಂದ ದಲೈ ಲಾಮಾ ಅವರ ಮಾತುಗಳು ಎಂದೆಂದಿಗೂ ಪ್ರಸ್ತುತ. ಭಾರತದ ಪ್ರಾಚೀನ ಶಿಕ್ಷಣ ಮತ್ತು ಸಂಸ್ಕೃತಿಯ ಸಾರವನ್ನು ಆಧುನಿಕ ಭಾರತದ ಸಂಸ್ಕೃತಿಯೊಳಗೆ ವಿಲೀನ ಮಾಡಬೇಕಾದ ಅಗತ್ಯತೆಯನ್ನು ಅವರು ಪ್ರತಿಪಾದಿಸಿದರು' ಎಂದು ಉದ್ಗರಿಸಿರುವ ಕುಮಾರಸ್ವಾಮಿ ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆಯ ಮೂಲಭೂತ ಸೌಲಭ್ಯಗಳನ್ನು ಉತ್ತಮಪಡಿಸಲು ಒಂದು ಸಾವಿರ ಕೋಟಿ ರೂ.ಗಳ ಅನುದಾನ ನೀಡಿ, ಶಿಕ್ಷಣವೇ ಶಕ್ತಿ ಎನ್ನುವ ಗಾಂಧೀಜಿಯವರ ಆಶಯವನ್ನು ನಿಜ ಮಾಡಿದ್ದಾರೆ.

'ಸುವರ್ಣ ಗ್ರಾಮೋದಯ' ಎನ್ನುವ ಅವರ ಕಲ್ಪನೆ ಗ್ರಾಮ ಸ್ವರಾಜ್ಯ ಸಾಧಿಸುವ ನಿಟ್ಟಿನಲ್ಲಿ ಇಟ್ಟ ದಿಟ್ಟ ಹೆಜ್ಜೆಯಾಗಿತ್ತು. ಸ್ವಯಂ ಪರಿಪೂರ್ಣವಾದ, ಸ್ವಾವಲಂಬಿಯಾದ ಗ್ರಾಮ ಘಟಕ ಸುಭದ್ರ ನಾಡಿನ ಬುನಾದಿ ಎನ್ನುವ ಗಾಂಧೀಪ್ರಣೀತ ಆಧುನಿಕ ಭಾರತದ ಅಡಿಗಲ್ಲೇ ಆಗಿತ್ತು. 'ಭಾರತ ತನ್ನ ಹಳ್ಳಿಗಳಲ್ಲಿ ಉಸಿರಾಡುತ್ತಿದೆ' ಎನ್ನುವ ಗಾಂಧೀಜಿ ಅವರ ಮಾತು ಕ್ಲೀಷೆ ಎನಿಸುವಷ್ಟು ಬಳಕೆಯಾಗಿದ್ದರೂ, ಗ್ರಾಮ ಮರುನಿರ್ಮಾಣದ ಕನಸು ಕನಸಾಗಿಯೇ ಉಳಿದಿದ್ದ ಸಂದರ್ಭದಲ್ಲಿ ಕುಮಾರಸ್ವಾಮಿಯವರ 'ಸುವರ್ಣ ಗ್ರಾಮೋದಯ' ಕಲ್ಪನೆ ಗ್ರಾಮೀಣ ಭಾರತದ ಪರಿಕಲ್ಪನೆಗೆ ಹೊಸ ದಿಕ್ಕು ತೋರಿದಂತೂ ನಿಜ. ಗ್ರಾಮಕ್ಕೊಂದು ಕೋಟಿ ರೂಪಾಯಿ ಅನುದಾನ ನೀಡಿ, ಪ್ರತಿ ಗ್ರಾಮವನ್ನು ಸ್ವಯಂ ನಿರ್ವಹಿತ ಪರಿಪೂರ್ಣ ಘಟಕವಾಗಿಸುವ ಪ್ರಯತ್ನ ಅಂದು ಯಶಸ್ವಿಯಾಗಿದ್ದೂ ನಿಜ.

'ನಿರಂತರವಾದ ಹಸಿರು ಕ್ರಾಂತಿ ಎನ್ನುವುದು ಪರಿಸರ ನಾಶಕ್ಕೆ ಸಂಬಂಧಿಸದೇ ಉತ್ಪಾದಕತೆಯ ಶಾಶ್ವತತೆಯನ್ನು



ಕೃಷಿ ತಜ್ಞರಾದ ಸುಭಾಷ್ ಪಾಳೇಕರ್ ಅವರಿಗೆ ಮುಖ್ಯಮಂತ್ರಿಗಳು ಅಭಿನಂದನೆ ಸಲ್ಲಿಸುತ್ತಿರುವುದು

ಹೆಚ್ಚಿಸುವುದೇ ಆಗಿದೆ' ಎನ್ನುವ ಮಾತನ್ನು ಸುವರ್ಣ ಗ್ರಾಮೋದಯ ಯೋಜನೆ ನಿಜ ಮಾಡಿ ತೋರಿತು.

ಸಮಾಜದ ಅತ್ಯಂತ ಕಡೆಯ ವ್ಯಕ್ತಿಯು ಆತ್ಮ ವಿಶ್ವಾಸದಿಂದ ಬದುಕುವಂತಾದಾಗ ಮಾತ್ರ, ಸ್ವಾತಂತ್ರ್ಯಕ್ಕೆ ಅರ್ಥ ಎನ್ನುವ ಗಾಂಧೀಜಿ ಅವರ ಮಾತನ್ನು ಸದಾ ಸ್ಮರಿಸುವ ಕುಮಾರಸ್ವಾಮಿ ಅವರ ಜನತಾ ದರ್ಶನ ಮತ್ತು ಗ್ರಾಮ ವಾಸ್ತವ್ಯ ಕಾರ್ಯಕ್ರಮಗಳು ಗಾಂಧೀಜಿ ಅವರು ತೋರಿದ ಅವರ ಮಾರ್ಗದಲ್ಲಿ ಹೆಜ್ಜೆ ಇಡುವ ಪ್ರಯತ್ನದ ಸಾಕ್ಷಿಗಳಾಗಿದ್ದವು.

ಆಡಳಿತ ಸದಾ ಜನಮಾನಸದ ಮೂಸೆಯಿಂದ ಮೂಡಿ ಬರಬೇಕು, ದಂತಗೋಪುರಗಳಿಂದಲ್ಲ ಎನ್ನುವುದು ಕುಮಾರಸ್ವಾಮಿಯವರ ನಿಲುವು. 'ಜನತಾ ದರ್ಶನ ಕಾರ್ಯಕ್ರಮದಲ್ಲಿ ನಾನು ನೂರಾರು ಜನರನ್ನು ಕಾಣುತ್ತೇನೆ. ಅವರೊಂದಿಗೆ ಬೆರೆಯುತ್ತೇನೆ. ಅವರ ಬದುಕನ್ನು ಅರಿಯುತ್ತೇನೆ' ಎನ್ನುವ ಕುಮಾರಸ್ವಾಮಿ, ಆಡಳಿತವನ್ನು ಜನರ ಹತ್ತಿರಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡಿದರು.

'ನಮ್ಮಲ್ಲಿ ಕೌಶಲ್ಯವಿದೆ, ಅಗಾಧ ಯುವಶಕ್ತಿಯಿದೆ , ಅಪಾರ ಐಡಿಯಾಗಳಿವೆ , ನೆರವು ನೀಡಲು ನನ್ನ ಸರ್ಕಾರ ಸಿದ್ಧವಾಗಿದೆ ಮತ್ತೇನು ಬೇಕು' ಎಂದು ಹೇಳುವ ಮುಖ್ಯಮಂತ್ರಿಗಳು ಪ್ರತಿ ಜಿಲ್ಲೆಯಲ್ಲಿಯೂ ಒಂದು ಲಕ್ಷ ಉದ್ಯೋಗ ಅವಕಾಶವನ್ನು ಅರಳಿಸುವ ಮಹತ್ವಾಕಾಂಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಆಯಾ ಪ್ರದೇಶದಲ್ಲಿ ಸಿಗುವ ಸ್ಥಳೀಯ ಸಂಪನ್ಮೂಲಗಳನ್ನೇ ಉಪಯೋಗಿಸಿಕೊಂಡು ಕ್ಲಸ್ಟರ್ ಆಧಾರಿತ ಉದ್ದಿಮೆಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿರುವ ಮುಖ್ಯಮಂತ್ರಿಗಳು 'ಕಾಂಪೀಟ್ ವಿತ್ ಚೈನಾ' ಘೋಷಣೆಯ ಹಿಂದಿರುವ ಆಶಯವನ್ನು ಸ್ಪಷ್ಟಪಡಿಸಿದ್ದಾರೆ. ಗುಡಿ ಅಥವಾ ಸಣ್ಣ ಕೈಗಾರಿಕೆಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಮೂಲಕ ಜಾಗತಿಕ ಆರ್ಥಿಕ ಶಕ್ತಿಯಾಗಿ ಚೈನಾ ರೂಪುಗೊಳ್ಳಬಹುದಾದರೆ ಅಷ್ಟೇ ಕೌಶಲವಿರುವ ನಮಗೇಕೆ ಅದು ಅಸಾಧ್ಯ ಎನ್ನುವುದು ಕುಮಾರಸ್ವಾಮಿಯವರ ನಿಲುವು. ಇದು ಸಣ್ಣ ಕೈಗಾರಿಕೆಗಳತ್ತ ಮತ್ತು ಸ್ಥಳೀಯ ಪ್ರತಿಭೆಗಳನ್ನು ದುಡಿಸಿಕೊಳ್ಳುವತ್ತ ಗಾಂಧೀಜಿ ತೋರಿದ್ದ ಒಲವಿನ ಪ್ರತಿಫಲನ ಕೂಡ. ಖಾದಿಗೆ ವಿಶ್ವಮಾನ್ಯತೆ ತಂದು ಕೊಟ್ಟ ಗಾಂಧೀಜಿಯವರ ಉಪಕ್ರಮದ ಉದಾಹರಣೆಯೊಂದೇ ಸಾಕು. ಇಂದು ಖಾದಿ ಲಕ್ಷಾಂತರ ಮನೆಗಳನ್ನು ಬೆಳಗುವ ದೀಪವಾಗಿದೆ.

'ಉಳುಮೆಯಷ್ಟೇ ಪ್ರಮುಖವಾದ ಕೆಲಸವೆಂದರೆ ಕಳೆ ಕೀಳುವುದು– weeding is as necessary to agriculture as sowing' ಎನ್ನುವ ಗಾಂಧೀಜಿಯವರ ಉಕ್ತಿ ಸೂಚಿಸುವುದು ಬಹು ಅರ್ಥಗಳನ್ನು. ಕ್ರಮಬದ್ಧ ಕೆಲಸ ಮುಖ್ಯ. ಅದಕ್ಕೆ ವೈಜ್ಞಾನಿಕ ರೀತಿಯನ್ನು ಅನ್ವಯಿಸುವುದು ಅಷ್ಟೇ ಮುಖ್ಯ. ನಮ್ಮ ರೈತರು ಸಾಂಪ್ರದಾಯಿಕ ಕೃಷಿಯ ಜೊತೆಗೆ ಆಧುನಿಕ ಕೃಷಿ ಕ್ಷೇತ್ರದಲ್ಲಾಗಿರುವ ಸಂಶೋಧನೆಯ ಫಲವನ್ನು ತನ್ನದಾಗಿಸಿಕೊಳ್ಳಬೇಕು.

'ಮರಳುಗಾಡಿನ ಇಸ್ರೇಲ್ ತನ್ನ ಬಂಜರು ನೆಲದಲ್ಲೇ ಹನಿ ನೀರನ್ನೂ ವ್ಯರ್ಥ ಮಾಡದೇ ಹಸಿರು ಉಕ್ಕಿಸುವ ಉದಾಹರಣೆ ನಮ್ಮ ಮುಂದಿರುವಾಗ, ನಾವು ಪ್ರಗತಿಶೀಲತೆಯ ಬೆನ್ನು ಹತ್ತುವಂತಾಗಬೇಕು' ಎನ್ನುವ ಕುಮಾರಸ್ವಾಮಿ ಕೃಷಿ ಕ್ಷೇತ್ರಕ್ಕೆ ಅಮೂಲಾಗ್ರ ಬದಲಾವಣೆ ತರುವ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಸಂಪ್ರದಾಯಿಕ ಕೃಷಿಯ ಜೊತೆಗೇ ಆಧುನಿಕತೆಯನ್ನು ನಮ್ಮ ರೈತ ತಮ್ಮದಾಗಿಸಿಕೊಳ್ಳಬೇಕು ಎನ್ನುವುದು ಅವರ ಹಂಬಲ.

ನಮ್ಮ ಕೃಷಿಕರ 49000 ಕೋಟಿ ರೂ.ಗಳ ಸಾಲ ಮನ್ನಾ ಮಾಡಲು ಅತ್ಯಂತ ಕ್ರಮಬದ್ಧ ವ್ಯವಸ್ಥೆಯನ್ನು ಮಾಡಿದ ಮುಖ್ಯಮಂತ್ರಿಗಳು ಸಾಲ ಮನ್ನಾದ ಎಲ್ಲ ರೂಪುರೇಷೆಗಳನ್ನು ಸಿದ್ಧಪಡಿಸಿದ್ದಾರೆ. ಬರುವ ದಿನಗಳಲ್ಲಿ ಸಾಲ ಮನ್ನಾಕ್ಕೆ ಬೇಕಾದ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಅವರ ರೀತಿ ಅನನ್ಯವಾಗಿದೆ. "ಸಾಲ ಮನ್ನಾ ಕ್ರಮವೊಂದೇ ರೈತರ ಸಮಸ್ಯೆಗಳಿಗೆ ಪರಿಹಾರವಲ್ಲ; ಇದು ಅವರಲ್ಲಿ ಆತ್ಮವಿಶ್ವಾಸ ತುಂಬುವ ಒಂದು ಪ್ರಯತ್ನ ಮಾತ್ರ. ಕೃಷಿ ವಲಯವನ್ನು ಸುಸ್ಥಿರಗೊಳಿಸಲು, ಲಾಭದಾಯಕವನ್ನಾಗಿಸಲು ಏನೇನು ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ. ಖ್ಯಾತ ಕೃಷಿ ತಜ್ಞ ಡಾ. ಎಂ.ಎಸ್. ಸ್ವಾಮಿನಾಥನ್ ಹಾಗೂ ಶೂನ್ಯಬಂಡವಾಳ ನೈಸರ್ಗಿಕ ಕೃಷಿಯಲ್ಲಿ ತೊಡಗಿಕೊಂಡಿರುವ ತಜ್ಞರ ಸಲಹೆ, ಮಾರ್ಗದರ್ಶನವನ್ನೂ ಪಡೆಯಲಾಗುತ್ತಿದೆ', ಎಂದು ಹೇಳಿರುವ ಮುಖ್ಯಮಂತ್ರಿಗಳು ಕೃಷಿ ವಲಯವನ್ನು ಬಲಪಡಿಸುವ ಗಾಂಧೀಜಿಯವರ ಆಶಯವನ್ನು ನಿಜ ಮಾಡಿದ್ದಾರೆ.

"ಶಿಕ್ಷಣ ಬದುಕಿಗೆ ದಾರಿದೀಪವಾಗಬೇಕು" ಎಂದ ದಲೈ ಲಾಮಾ ಅವರ ಮಾತುಗಳು ಎಂದೆಂದಿಗೂ ಪ್ರಸ್ತುತ. ಭಾರತದ ಪ್ರಾಚೀನ ಶಿಕ್ಷಣ ಮತ್ತು ಸಂಸ್ಕೃತಿಯ ಸಾರವನ್ನು ಆಧುನಿಕ ಭಾರತದ ಸಂಸ್ಕೃತಿಯೊಳಗೆ ವಿಲೀನ ಮಾಡಬೇಕಾದ ಅಗತ್ಯತೆಯನ್ನು ಅವರು ಪ್ರತಿಪಾದಿಸಿದರು' ಎಂದು ಉದ್ಗರಿಸಿರುವ ಕುಮಾರಸ್ವಾಮಿ ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆಯ ಮೂಲಭೂತ ಸೌಲಭ್ಯಗಳನ್ನು ಉತ್ತಮಪಡಿಸಲು ಒಂದು ಸಾವಿರ ಕೋಟಿ ರೂ.ಗಳ ಅನುದಾನ ನೀಡಿ, ಶಿಕ್ಷಣವೇ ಶಕ್ತಿ ಎನ್ನುವ ಗಾಂಧೀಜಿಯವರ ಆಶಯವನ್ನು ನಿಜ ಮಾಡಿದ್ದಾರೆ.

"ಸಾರ್ವಜನಿಕ ಶಿಕ್ಷಣದಲ್ಲಿ ಸುಧಾರಣೆಯನ್ನು ತರುವುದು ಸಹ, ನನ್ನ ಸರ್ಕಾರದ ಆದ್ಯತೆಯಾಗಿದೆ. ಎಲ್ಲರಿಗೂ ಶಿಕ್ಷಣ ದೊರೆಯಬೇಕು. ಇದು ನನ್ನ ಆಸೆ. ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ವಲಯ ಸೇವೆಯ ಜೊತೆಯಲ್ಲಿ ಹೆಚ್ಚು ಶೋಷಣೆ ಮಾಡುತ್ತಿದೆಯೆಂಬ ದೂರುಗಳಿವೆ. ಸರ್ಕಾರಿ ಶಾಲೆಗಳ ಸಬಲೀಕರಣ, ನಮ್ಮ ಸರ್ಕಾರದ ತುರ್ತು ಕಾರ್ಯಕ್ರಮ. ಪ್ರೌಢಶಾಲೆ, ಪಿ.ಯು.ಸಿ ಮತ್ತು ಪದವಿ ಹಂತದವರೆಗಿನ ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಮೂಲಭೂತ ಸೌಲಭ್ಯವೂ ಸೇರಿದಂತೆ, ಮಾನವ ಸಂಪನ್ಮೂಲವನ್ನು ಹೆಚ್ಚಿಸುವ ಬಗ್ಗೆ ತಜ್ಞರ ಜೊತೆ ಈಗಾಗಲೇ ನಾಲ್ಕೈದು ಸುತ್ತಿನ ಚರ್ಚೆಯಾಗಿದೆ. ತಜ್ಞರ ಸಲಹೆಯಂತೆ ಶಿಕ್ಷಣ ಕ್ಷೇತ್ರಕ್ಕೆ ಕಾಯಕಲ್ಪ ನೀಡುವುದು ನಿಶ್ಚಿತ", ಎನ್ನುವುದು ಕುಮಾರಸ್ವಾಮಿಯವರು ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ನುಡಿದ ಮಾತು.

'ಚಿನ್ನದ ಪದಕಗಳು ನಿಜವಾಗಿಯೂ ಚಿನ್ನದವಲ್ಲ. ಅವು ಬೆವರ ಹನಿ, ದೃಢಚಿತ್ತ, ಪ್ರಾಮಾಣಿಕ ದುಡಿಮೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಧೈರ್ಯ ಎಂಬ ವಿಶೇಷವಾದ ಲೋಹದ ಎರಕದಿಂದಾಗಿರುತ್ತದೆ.


ಚಿನ್ನದ ಪದಕ ಪಡೆಯಲು ಯತ್ನಿಸೋಣ, ನಾನೂ–ನೀವೂ ಜೊತೆಯಾಗಿ', ಎಂದು ಸಭೆಯಲ್ಲೊಮ್ಮೆ ಮಾತನಾಡುತ್ತಾ ನುಡಿದ ಕುಮಾರಸ್ವಾಮಿ ಗಾಂಧೀಜಿಯವರನ್ನು ಸಮಕಾಲೀನ ಆಡಳಿತಕ್ಕೆ ಸಮೀಕರಿಸುವ ಯತ್ನ ಮಾಡುತ್ತಿರುವ ನೇತಾರ.




150 YEARS OF CELEBRATING THE MAHATMA

# ನನ್ನ ಜೀವನವೇ... ನನ್ನ ಸಂದೇಶ...

– ಮಹಾತ್ಮ ಗಾಂಧೀಜಿ








# ಯಂತ್ರ ಮತ್ತು ನಾಗರಿಕತೆ

ಮಹದೇವ ದೇಸಾಯಿ

"ಮಹಾತ್ಮ ಗಾಂಧಿಯವರ ಆಪ್ತ ಕಾರ್ಯದರ್ಶಿಯಾಗಿದ್ದ ಮಹಾದೇವ ದೇಸಾಯಿವರು ಒಂದರ್ಥದಲ್ಲಿ ಮಹಾತ್ಮನ ಆತ್ಮದಂತೆ ಮತ್ತು ನೆರಳಿನಂತೆ ಬದುಕಿದವರು. ಗಾಂಧೀಜಿಯವರ ಜೊತೆಗಿನ ತಮ್ಮ ಸುಧೀರ್ಘ ಇಪ್ಪತ್ತೈದು ವರ್ಷಗಳ ಒಡನಾಟದಲ್ಲಿ ಅವರ ಪ್ರತಿ ಚಟುವಟಿಕೆಗೆ ಸಾಕ್ಷಿಯಾಗಿದ್ದುಕೊಂಡು 1942 ರ ಆಗಸ್ಟ್ ಹದಿನೈದರಂದು ಪೂನಾದ ಆಗಾಖಾನ್ ಅರಮನೆಯಲ್ಲಿ ಆಕಸ್ಮಿಕವಾಗಿ ನಿಧನಹೊಂದಿದರು. ಮಹಾತ್ಮನ ಕುರಿತಂತೆ ಅಧಿಕೃತವಾಗಿ ಮಾತನಾಡಬಲ್ಲವರಲ್ಲಿ ಒಬ್ಬರಾಗಿದ್ದ ಮಹಾದೇವ ದೇಸಾಯಿಯವರು ಪ್ರಥಮ ಬಾರಿಗೆ ಗಾಂಧಿಯವರ ಆತ್ಮಕಥೆಯನ್ನು ಗುಜರಾತಿ ಭಾಷೆಯಿಂದ ಇಂಗ್ಲೀಷ್‌ಗೆ ಅನುವಾದಿಸಿದವರು. "ಆರ್ಯನ್ ಪಾತ್" ಇಂಗ್ಲೀಷ್ ಪತ್ರಿಕೆ 1938 ರಲ್ಲಿ ಹಿಂದ್ ಸ್ವರಾಜ್ ಕೃತಿಯ ಕುರಿತು ವಿಶೇಷಾಂಕವೊಂದನ್ನು ಪ್ರಕಟಿಸಿದ ಸಂದರ್ಭದಲ್ಲಿ ಮಹಾದೇವ ದೇಸಾಯಿ ಅವರು ಹಿಂದ್ ಸ್ವರಾಜ್ ಕೃತಿ ಬಗ್ಗೆ ಬರೆದ ಲೇಖನವಿದು. ಇದೀಗ ಈ ಲೇಖನವನ್ನು ಭಾರತೀಯ ಬಹುತೇಕ ಭಾಷೆಗಳಲ್ಲಿ ಪ್ರಕಟವಾಗಿರುವ ಹಿಂದ್ ಸ್ವರಾಜ್ ಕೃತಿಗೆ ಮುನ್ನುಡಿಯಾಗಿ ಬಳಸಿಕೊಳ್ಳಲಾಗಿದೆ"







ಶರೀರ ಶ್ರಮವನ್ನು ಕಡಿಮೆ ಮಾಡುವ ಯಂತ್ರ ಬೇಕೆಂಬ ಭ್ರಾಂತಿ ಈಗ ಬೆಳೆಯುತ್ತಿದೆ ದುಡಿತ ಕಡಿಮೆಯಾಗಿ ಸಾವಿರಾರು ಜನ ಹಸಿವಿನಿಂದ ಸಾಲಾಗಿ ಬೀದಿಯಲ್ಲಿ ಬಿದ್ದಾರು. ಹತ್ತು ಜನಕ್ಕೆ ದುಡಿತ ಕಡಿಮೆ ಮಾಡುವ ಉದ್ದೇಶವಲ್ಲ ನನ್ನದು; ಇಡೀ ಮಾನವ ಕೋಟಿಗೆ ದುಡಿಮೆ ಮಾಡಬಯಸುತ್ತೇನೆ.

ಗಾಂಧೀಜಿಯ ಬಗ್ಗೆ ಬಂದಿರುವ ಎಲ್ಲಾ ವಿಮರ್ಶೆಗಳಲ್ಲೂ ಒಂದು ಮಾತು ಸಾಮಾನ್ಯವಾಗಿ ಕಾಣುತ್ತದೆ. ಮಿಡಲ್‌ಟನ್ ಮರ್‍ರ್ರೆ ಹೇಳುತ್ತಾರೆ. 'ತಮ್ಮ ದರ್ಶನದ ತೀವ್ರತೆ– ಆತುರಗಳಲ್ಲಿ ತಾವು ಅಷ್ಟು ಒಲಿದ ರಾಟೆಯೂ ಒಂದು ಯಂತ್ರ, ಅದರಿಂದ ಅಸಹಜ ಎಂಬುದನ್ನು ಗಾಂಧೀಜಿ ಮರೆಯುತ್ತಾರೆ. ಅವರ ತತ್ವದ ಪ್ರಕಾರ ಅದನ್ನೂ ಬಿಟ್ಟುಬಿಡಬೇಕು.' ಪ್ರೊ. ಡೈಲೈಲ್ ಬರ್ನ್ಸ್ – 'ಇದೊಂದು ಮೂಲಭೂತ ತಾತ್ವಿಕ ದೋಷ. ದುರುಪಯೋಗಪಡಿಸಬಹುದಾದ ಎಲ್ಲ ಉಪಕರಣವೂ ನೀತಿ□ದುಷ್ಟ ಎನ್ನಬೇಕಾದೀತು. ಹಾಗಾದರೆ ನೂಲುವ ರಾಟೆಯೂ ಯಂತ್ರವಲ್ಲವೆ ? ಮೂಗಿನ ಮೇಲೇರಿಸುವ ಕನ್ನಡಕ ಕಣ್ಣಿಗೊಂದು ಯಂತ್ರವಲ್ಲವೇ? ನೇಗಿಲೇ ಒಂದು ಯಂತ್ರ. ಆಳದಿಂದ ನೀರೆತ್ತಲು ಮನುಷ್ಯ ಮಾಡಿದ ಎಲ್ಲ ಯಂತ್ರವೂ ಹತ್ತಾರು ಸಾವಿರ ವರ್ಷ ಕಾಲ ಮಾನವ ಜೀವನವನ್ನು ಉತ್ತಮಗೊಳಿಸಲು ಮಾಡಿದ ಸತತ ಪ್ರಯತ್ನದ ಅಂತಿಮ ಪರಿಣಾಮ... ಯಾವ ಯಂತ್ರವನ್ನು ಬೇಕಾದರೂ ದುರುಪಯೋಗಿಸಬಹುದು. ಆ ನೈತಿಕ ದುಷ್ಟತನ ಬಳಸುವ ಮನುಷ್ಯನದು ಯಂತ್ರದ್ದಲ್ಲ'– ಎನ್ನುತ್ತಾರೆ.

ನಿಜ. 'ತಮ್ಮ ದರ್ಶನದ ತೀವ್ರತೆ– ಆತುರಗಳಲ್ಲಿ' ಗಾಂಧೀಜಿ ಯಂತ್ರದ ಬಗ್ಗೆ ಅಶುದ್ಧ ಭಾಷೆಯನ್ನು ಬಳಸಿದ್ದಾರೆ. ಈಗ ಮತ್ತೆ ಕೈಯಾಡಿಸಿದರೆ ಅವರೇ ಆ ಶಬ್ದಗಳನ್ನು ಬದಲು ಮಾಡಿಯಾರು. ಮೇಲೆ ಹೇಳಿದ ಈ ವಾಕ್ಯಾರ್ಥವನ್ನು ಗಾಂಧೀಜಿ ಒಪ್ಪುತ್ತಾರೆಂದು ನನಗೆ ನಂಬಿಕೆಯಿದೆ. ಯಂತ್ರವನ್ನು ಬಳಸುವ ಮನುಷ್ಯನ ದುಷ್ಟತನವನ್ನು ಯಂತ್ರಕ್ಕೆ ಕಟ್ಟಿ, ಅದಕ್ಕೆ ನೈತಿಕ ಗುಣವನ್ನು ಗಾಂಧೀಜಿ ಎಂದೂ ಆರೋಪಿಸಿಲ್ಲ. ಮೇಲೆ ಉದಾಹರಿಸಿರುವ ಲೇಖಕರು ಬಳಸಿದ ಭಾಷೆಯನ್ನೇ ಗಾಂಧೀಜಿ 1924 ರಲ್ಲಿ ಬಳಸಿದ್ದಾರೆ. ದಿಲ್ಲಿಯಲ್ಲಿ ನಡೆದ ಸಂಭಾಷಣೆಯೊಂದನ್ನು ಇಲ್ಲಿ ಎತ್ತಿಕೊಡುತ್ತೇನೆ. ಯಂತ್ರವೆಂದರೆ ನಿಮಗೆ ದ್ವೇಷವೇ ಎಂಬ ಪ್ರಶ್ನೆಗೆ ಉತ್ತರ ಕೊಡುತ್ತಾ ಗಾಂಧೀಜಿ ಹೇಳಿದರು.

" ಉಂಟೆ? ಹಾಗೆನ್ನಬಹುದೆ ? ನಮ್ಮ ಮೈಯೇ ಒಂದು ಕುಶಲವಾದ ಯಂತ್ರವಲ್ಲವೆ ? ರಾಟೆಯೇ ಒಂದು ಯಂತ್ರ. ಹಲ್ಲಿನ ಸಂದಿನೊಳಗೆ ಸೇರಿದ ಕಸ ತೆಗೆವ ಹುಲ್ಲುಕಡ್ಡಿಯೂ ಒಂದು ಯಂತ್ರ. ಯಂತ್ರವನ್ನಲ್ಲ ನಾನು ಬೇಡ



ಮನುಷ್ಯನ ವ್ಯಕ್ತಿತ್ವಕ್ಕೆ ಅಡ್ಡಿ ಬಂದರೆ ಯಂತ್ರ ಅಲ್ಲಿಗೇ ಕಡೆ, ಮನುಷ್ಯನಿಗೆ ನೆರವಾಗುವುದನ್ನು ಬಿಟ್ಟು ಅವನ ಸಂಗಡ ಕುಸ್ತಿಗೆ ನಿಂತರೆ ಯಂತ್ರಕ್ಕೆ ಅಲ್ಲೇ ಕೊನೆ. ಯಂತ್ರ ಮನುಷ್ಯನ ಕೈಕಾಲು ಮುರಿಯಬಾರದು.

ಎನ್ನುವುದು; ಯಂತ್ರ ಯಂತ್ರ ಎಂಬ ಭ್ರಾಂತಿಯನ್ನು ಶರೀರ ಶ್ರಮವನ್ನು ಕಡಿಮೆ ಮಾಡುವ ಯಂತ್ರ ಬೇಕೆಂಬ ಭ್ರಾಂತಿ ಈಗ ಬೆಳೆಯುತ್ತಿದೆ ದುಡಿತ ಕಡಿಮೆಯಾಗಿ ಸಾವಿರಾರು ಜನ ಹಸಿವಿನಿಂದ ಸಾಲಾಗಿ ಬೀದಿಯಲ್ಲಿ ಬಿದ್ದಾರು. ಹತ್ತು ಜನಕ್ಕೆ ದುಡಿತ ಕಡಿಮೆ ಮಾಡುವ ಉದ್ದೇಶವಲ್ಲ ನನ್ನದು; ಇಡೀ ಮಾನವ ಕೋಟಿಗೆ ದುಡಿಮೆ ಮಾಡಬಯಸುತ್ತೇನೆ. ಹತ್ತು ಜನರ ಕೈಯಲ್ಲಿ ಧನ ಸಂಗ್ರಹವಾಗಲೆಂದಲ್ಲ, ಎಲ್ಲರ ಕೈಯಲ್ಲೂ ಹಣ ಸೇರಲಿ ಎಂದು ನನ್ನ ಬಯಕೆ. ಸಾವಿರಾರು ಜನರ ಬೆನ್ನ ಮೇಲೆ ಒಂದು ಹಿಡಿ ಜನರು ಸವಾರಿ ಮಾಡುವ ಹಾಗಾಗಿದೆ ಇಂದು ಯಂತ್ರದಿಂದ. ಇದೆಲ್ಲದರ ಹಿಂದಿನ ಉದ್ದೇಶ್ಯ, ದುಡಿತ ಕಡಿಮೆ ಮಾಡುವ ಔದಾರ್ಯವಲ್ಲ; ಲೋಭ, ಇದನ್ನು ನಾನು ಸಹಿಸಲಾರೆ. ನನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ ನಾನು ವಿರೋಧಿಸುತ್ತಿರುವುದು ಈ ಪರಿಯ ನಿರ್ಮಾಣವನ್ನು"

"ಹಾಗಾದರೆ ಯಂತ್ರವೇ ಬೇಡ ಎಂದಲ್ಲ ನೀವು ಹೇಳುವುದು; ಈಗ ಬೆಳೆದುಹೋಗಿರುವ ಯಂತ್ರದ ದುರುಪಯೋಗವನ್ನು ಅಲ್ಲವೆ ?"

"ನಿಸ್ಸಂದೇಹವಾಗಿ ಹೌದು ಎನ್ನಬಲ್ಲೆ. ಒಂದು ಮಾತು ನೆನಪಿಡು. ವಿಜ್ಞಾನದ ಸತ್ಯಸೂತ್ರಗಳು, ಶೋಧಗಳು ಲೋಭದ ಸಾಧನೆಗಳಾಗಬಾರದು ಇದು ನಿಲ್ಲಬೇಕು. ಆಗ ಕೂಲಿಗಾರರಿಗೆ ಈ ಅತಿ ದುಡಿತ ತಪ್ಪೀತು; ಯಂತ್ರ ಪ್ರತಿಕೂಲವಾಗುವ ಬದಲು ಅನುಕೂಲವಾದೀತು. ಯಂತ್ರವೆಂಬುದೇ ಹಾಳಾಗಲಿ ಎಂಬುದಲ್ಲ ನನ್ನ ಗುರಿ; ಅದಕ್ಕೊಂದು ಪರಿಮಿತಿಯಿರಲಿ ಎಂಬುದು."

"ಈ ಮಾತನ್ನು ಬೆಳೆಸಿದರೆ 'ಬಲ'ದಿಂದ ನಡೆವ ಎಲ್ಲ ತೊಡರು ಯಂತ್ರವೂ ಹೋಗಬೇಕೆಂದು ತಾನೆ ಈ ತರ್ಕದ ಕೊನೆ?"

"ಹೋಗಬೇಕಾಗಿ ಬಂದರೆ ಹೋಗಲಿ" ಎಂದರು ಗಾಂಧೀಜಿ. "ಆದರೆ ಒಂದು ಮಾತು ಮಾತ್ರ ಸ್ಪಷ್ಟವಾಗಿ ತಿಳಿದುಕೊ ನನಗೆ ಮುಖ್ಯವಾದುದು ಮಾನವ ಜೀವನ. ಯಂತ್ರವು ಮನುಷ್ಯನ ಕೈಕಾಲು ಕಟ್ಟಿ ಹಾಕಿದರೆ ಅದು ಸರಿಯಲ್ಲ. ಉದಾಹರಣೆಗೆ ಕೆಲವು ಅಪವಾದಗಳನ್ನು ನಾನೇ ತೋರಿಸುತ್ತೇನೆ. ಬಟ್ಟೆ ಹೊಲೆವ ಯಂತ್ರ ನೋಡು. ಜಗತ್ತಿನಲ್ಲಿ ಕಂಡು ಹಿಡಿದ ಅನೇಕ ವಸ್ತುಗಳಲ್ಲಿ ಇದರಷ್ಟು ಉಪಕಾರಿಯಾದುದು ಮತ್ತೊಂದಿಲ್ಲ. ಆ ಯಂತ್ರದೊಂದು ಸೊಗಸಾದ ಕತೆಯೇ ಇದೆ. ತನ್ನ ಹೆಂಡತಿ ಅತಿ ಪ್ರಯಾಸಪಡುತ್ತ ಹೊಲಿಯುತ್ತಿದ್ದುದನ್ನು ನೋಡಿ ಸಿಂಗರ್‌ಗೆ ಬಹಳ ನೋವಾಯಿತು. ಆಕೆಯ ಮೇಲಿನ ಪ್ರೀತಿಗಾಗಿ ಹೊಲಿಗೆಯ ಯಂತ್ರವನ್ನು ಕಂಡುಹಿಡಿದ. ಅದರಿಂದ ಆಕೆಯೊಬ್ಬಳಿಗಲ್ಲ, ಆ ಯಂತ್ರವನ್ನು ಕೊಳ್ಳಬಲ್ಲವರೆಲ್ಲರಿಗೂ ದುಡಿತವನ್ನು ಕಡಿಮೆ ಮಾಡಿದ".

" ಈ ಹೊಲಿಗೆ ಯಂತ್ರವನ್ನು ಮಾಡಲು ಕಾರ್ಖಾನೆ ಬೇಡವೇ ಮತ್ತೆ? ಅದಕ್ಕೆ ಪ್ರಕೃತಿ ಬಲದಿಂದ ನಡೆವ ಸಾದಾ ಯಂತ್ರವಾದರೂ ಬೇಕಲ್ಲವೆ?"

"ನಿಜ ಬೇಕು. ಅಂಥವನ್ನು ರಾಷ್ಟ್ರದ ಆಡಳಿತಕ್ಕೆ ಒಳಪಡಿಸಿ ನಡೆಸಬೇಕೆನ್ನುವಷ್ಟು ಮಟ್ಟಿಗೆ ನಾನು ಸಮಾಜವಾದಿ. ಒಳ್ಳೆ ಆದರ್ಶ ರೀತಿಯಲ್ಲಿ ಆಕರ್ಷಕವಾಗುವಂತೆ ಅದನ್ನು ನಡೆಸಬೇಕು. ಅದರ ಮೂಲ ಸೂತ್ರ ದುರಾಶೆಯಲ್ಲ. ಮಾನವ ಕಲ್ಯಾಣವಾಗಬೇಕು. ಈಗಿನ ಕೂಲಿಯ ಪರಿಸ್ಥಿತಿ ಬದಲಾಗಬೇಕು. ನಾಗಾಲೋಟ ಓಡುವ ಧನಸಂಗ್ರಹದ ಈ ಪಿತ್ತ ನಿಲ್ಲಬೇಕು. ಕೂಲಿಕಾರನಿಗೆ ಬಾಳುಗೂಲಿ ಸಿಗಬೇಕು. ಅವನ ಕೆಲಸ ಅವನಿಗೆ ದಿನದಿನವೂ ಭಾರವಾಗಬಾರದು. ದಿನಚರಿಯ ಕೆಲಸದಂತಿರಬೇಕು. ಹೀಗೆ ನಡೆಸಿದರೆ ಕೂಲಿಗಾರನಿಗೂ ರಾಷ್ಟ್ರಕ್ಕೂ ಯಂತ್ರದ ಸಾಹುಕಾರನಿಗೂ ಎಲ್ಲರಿಗೂ ಅದರಿಂದ ಹಿತವಾದೀತು. ಈಗಿನ ಹುಚ್ಚು ಓಟ ನಿಂತು ಕೂಲಿಕಾರರು ಆದರ್ಶ ಪರಿಸ್ಥಿತಿಯಲ್ಲಿ ಕೆಲಸ ಮಾಡಬಲ್ಲರು. ನನ್ನ ಮನಸ್ಸಿನಲ್ಲಿರುವ ಅಪವಾದಗಳಲ್ಲಿ ಇದೊಂದು ಹೊಲಿಗೆ ಯಂತ್ರದ ಹಿನ್ನೆಲೆಗೆ ಪ್ರೀತಿಯಿತ್ತು. ವ್ಯಕ್ತಿಯೇ ಮುಖ್ಯ ಲಕ್ಷ್ಯ. ವ್ಯಕ್ತಿಯ ದುಡಿತ ಕಡಿಮೆ ಮಾಡುವ ಉದ್ದೇಶ್ಯ ಪ್ರಾಮಾಣಿಕವಾಗಿರಬೇಕು, ಉದಾರವಾಗಿರಬೇಕು, ದುರಾಶೆ ಇರಬಾರದು. ಇಲ್ಲಿ ನೋಡು; ಸೊಟ್ಟಾದ ಕದಿರುಗಳನ್ನು ಸರಿಮಾಡುವ ಯಂತ್ರ ಬಂದರೆ ನನಗೆ ಬಹಳ ಸಂತೋಷವಾದೀತು. ಕಮ್ಮಾರರು ಕದಿರುಗಳನ್ನು ಮಾಡಲಿ ಅವು ವಿಕೃತವಾದಾಗ ಸರಿಮಾಡಿಕೊಳ್ಳುವ ಯಂತ್ರ ನೂಲುವವರೆಲ್ಲರನ್ನೂ ಇರಲಿ ಹಾಗೆ ದುರಾಶೆಯ ಬದಲೂ ಪ್ರೀತಿ ಬರಲಿ, ಎಲ್ಲವೂ ಸರಿಹೋಗುತ್ತದೆ.


"ಸಿಂಗರ್ ಯಂತ್ರ ನಿಮ್ಮ ಕದಿರು ಮುಂತಾದ ಯಂತ್ರ ಇರಬೇಕು. ಎನ್ನುತ್ತೀರಿ. ಈ ರೀತಿಯಾದರೆ ಇದಕ್ಕೆ ಮಿತಿ ಬೇಡವೇ ? ಈ ಪಟ್ಟಿಗೆ ಕೊನೆಯಲ್ಲಿ?"

ಗಾಂಧೀಜಿ ಹೇಳಿದರು. "ಮನುಷ್ಯನ ವ್ಯಕ್ತಿತ್ವಕ್ಕೆ ಅಡ್ಡಿ ಬಂದರೆ ಯಂತ್ರ ಅಲ್ಲಿಗೇ ಕಡೆ, ಮನುಷ್ಯನಿಗೆ ನೆರವಾಗುವುದನ್ನು ಬಿಟ್ಟು ಅವನ ಸಂಗಡ ಕುಸ್ತಿಗೆ ನಿಂತರೆ ಯಂತ್ರಕ್ಕೆ ಅಲ್ಲೇ ಕೊನೆ. ಯಂತ್ರ ಮನುಷ್ಯನ ಕೈಕಾಲು ಮುರಿಯಬಾರದು."

"ನಾನೀಗ ವ್ಯಾವಹಾರಿಕ ವಿಷಯವನ್ನು ಯೋಚಿಸುತ್ತಿಲ್ಲ. ಆದರ್ಶ ದೃಷ್ಟಿಯಿಂದ ಸಕಲ ಯಂತ್ರವನ್ನೂ ನಿಷೇಧಿಸುತ್ತೀರಾ ಎಂದು ಕೇಳಿದೆ. ಹೊಲಿಗೆ ಯಂತ್ರ ಇರಲಿ ಎಂದರೆ ಬೈಸಿಕಲ್, ಮೋಟಾರ್ ಕೂಡ ಇರಲಿ ಎನ್ನಬೇಕು ತಾನೆ ?"

"ಇಲ್ಲ ಹಾಗೆನ್ನಲಾರೆ, ಅವು ಮನುಷ್ಯನಿಗೆ ಅಷ್ಟೇನೂ ಅಗತ್ಯವಿಲ್ಲ. ವೇಗವಾಗಿ ದೂರದೂರ ಪ್ರಯಾಣ ಮಾಡುವ ಅಗತ್ಯವೇನಿದೆ ಮನುಷ್ಯನಿಗೆ? ಆದರೆ ಸೂಜಿ ಹಾಗಲ್ಲ. ಬಾಳಿನಲ್ಲಿ ಸೂಜಿ ಅತ್ಯಗತ್ಯ ಅದು ಇಲ್ಲದೆ ನಡೆಯದು. ಆದರ್ಶ ದೃಷ್ಟಿಯಿಂದಲೇನೋ ಸಕಲ ಯಂತ್ರವನ್ನೂ ಬೇಡವೆಂದೇನು; ಮೋಕ್ಷ ಸಾಧನೆಗೆ ಅಡ್ಡ ಬಂದರೆ ಈ ಮೈಯನ್ನೇ ಬೇಡವೆಂದೇನು. ಸಂಪೂರ್ಣ ಮುಕ್ತಿಯನ್ನು ಬಯಸೇನು. ಆ ದೃಷ್ಟಿಯಿಂದ ಎಲ್ಲ ಯಂತ್ರವೂ ಹೊಲ್ಲ; ನಿಜ, ಆದರೆ ಮೈಯಿದ್ದಂತೆಯೇ ಯಂತ್ರ ಬೇಡವೆಂದರೂ ಅಂಟಿಕೊಂಡೇ ತೀರುತ್ತದೆ; ಅನಿವಾರ್ಯ ಆಗಲೇ ಹೇಳಿದೆನಲ್ಲ ನಮ್ಮ ಮೈಯೇ ಒಂದು ಕುಶಲವಾದ ಯಂತ್ರ. ನಮ್ಮ ಮೈಯೇ ಆಗಲಿ ಆತ್ಮವಿಕಾಸಕ್ಕೆ ಅನುಕೂಲವಾಗಬೇಕು. ಆತ್ಮಗರುಡ ಹಾರಲು ಮೈ ಅಡ್ಡಿಯಾದರೆ, ಪ್ರತಿಕೂಲವಾದರೆ, ಅದು ತ್ಯಾಜವೇ ಸರಿ."

ವಿಮರ್ಶಕರು ಯಾರೂ ಈ ಸೂತ್ರಕ್ಕೆ ವಿರೋಧಿಗಳಾಗಿರಲಾರರು. ಯಂತ್ರ ದೇಹದಂತೆ; ಆತ್ಮವಿಕಾಸಕ್ಕೆ ಅನುಕೂಲವಾದರೆ, ಅಷ್ಟು ಮಟ್ಟಿಗೆ ಉಪಯೋಗಕರ.



ಪಾಶ್ಚಿಮಾತ್ಯ ನಾಗರಿಕತೆಯ ವಿಷಯವಾಗಿ ಜೆ.ಡಿ.ಎಚ್. ಕೋಲ್– ವಿಧಿಯಲ್ಲದೆ ಪಾಶ್ಚಿಮಾತ್ಯ ನಾಗರಿಕತೆ ಮಾನವ ಜೀವನಕ್ಕೆ ಹಗೆಯಾಗಿ ಹೆಡೆಯುತ್ತಿದೆ ಎಂದು ಗಾಂಧೀಜಿ ಹೇಳಿದ್ದನ್ನು ವಿರೋದಿಸಿ; " ಸ್ಪೈಯಿನ್ ಅಬಿಸೀನಿಯಾಗಳ ಘೋರ ದುರಂತ, ನಮ್ಮ ತಲೆಯ ಮೇಲೇ ನೇತಾಡುತ್ತಿರುವ ನಿರಂತರ ಭೀತಿ. ಅಪಾರ ಸಂಪತ್ತಿನ ಗರ್ಭದಲ್ಲೆ ಅಸಹನೀಯ ದಾರಿದ್ರ್ಯ, ಇವು ಪಾಶ್ಚಿಮಾತ್ಯ ನಾಗರಿಕತೆಯ ದೋಷ. ಗುರುತರ ದೋಷಗಳೇ ನಿಜ. ಆದರೆ ಇವು ಅದರ ಜೀವಾಳವಲ್ಲ... ನಮ್ಮ ಈ ನಾಗರಿಕತೆಯನ್ನು ತಾವು ತಿದ್ದಬಲ್ಲೆವೆನ್ನಲಾರೆ ನಾನು; ಆದರೆ ಈ ನಾಗರಿಕತೆಯನ್ನು ತಿದ್ದಲು ಸಾಧ್ಯವೇ ಇಲ್ಲ. ಕೈಮೀರಿ ಹೋಗಿದೆಯೆಂದು ನಂಬಲಾರೆ. ಮಾನವ ಜೀವನಕ್ಕೆ ಬೇಕಾದ್ದನ್ನೆಲ್ಲಾ ಬಹಿಷ್ಕರಿಸಿ, ಆ ತಳಪಾಯದ ಮೇಲೆ ಇದು ತನ್ನ ಮನೆ ಕಟ್ಟಿಕೊಂಡಿದೆಯೆಂದು ನಾನು ನಂಬಲಾರೆ ಎಂದಿದ್ದಾರೆ. ಹೌದು ಗಾಂಧೀಜಿ ಎತ್ತಿ ತೋರಿದ ದೋಷಗಳು ಸ್ವಾಭಾವಿಕ ದೋಷಗಳಲ್ಲ, ಮಾರ್ಗದೋಷಗಳು. ಭಾರತೀಯ ನಾಗರಿಕತೆಯ ಪ್ರವೃತ್ತಿಯನ್ನೂ ವಿಲಾಯಿತಿ ನಾಗರಿಕತೆಯ ಪ್ರವೃತ್ತಿಯನ್ನೂ ಹೋಲಿಸುವುದು ಆ ಪುಸ್ತಕದಲ್ಲಿ ಗಾಂಧೀಜಿಯ ಉದ್ದೇಶ್ಯ. ಆ ನಾಗರಿಕತೆ ತಿದ್ದಲು ಸಾಧ್ಯವಿಲ್ಲದಷ್ಟು ಕೈಮೀರಿಲ್ಲವೆಂದು ಗಾಂಧೀಜಿಯೂ ಒಪ್ಪುತ್ತಾರೆ. ಗಾಂಧೀಜಿಯ ಹಾಗೆ ಮಹಾಪುರುಷರಾದ, ಹಿಂದೂಸ್ಥಾನದ ಅಥವಾ ಗಾಂಧೀಜಿಯ ದಾರಿಯಲ್ಲದೆ ತಮ್ಮ ಪಡುವಣ ದಾರಿಯಲ್ಲೇ ಮಹಾಪುರುಷರಾದ ನಾಯಕರು ಕಂಡು ಹಿಡಿದ ' ಸ್ವರಾಜ್ಯ' ಪದ್ಧತಿ ಅವರಿಗೂ ಬೇಕೆಂಬುದನ್ನೂ ಒಪ್ಪುತ್ತಾರೆ. ■

ಸೌಜನ್ಯ : ಹಿಂದ್ ಸ್ವರಾಜ್ ಕೃತಿಗೆ ಬರೆದ ಮುನ್ನುಡಿ.





ಭಾರತದ ಪತ್ರಿಕೋದ್ಯಮದ ಪಾಲಿಗೆ ಭೀಷ್ಮಪ್ರಾಯರಂತಿದ್ದ ಕುಲದೀಪ್ ನಯ್ಯರ್, ದೇಶದ ಎಲ್ಲಾ ರಾಜಕೀಯ, ಸಾಮಾಜಿಕ ಸ್ಥಿತ್ಯಂತರಗಳಿಗೆ ಸಾಕ್ಷಿಯಾಗಿದ್ದವರು. ಪತ್ರಿಕೋದ್ಯಮವನ್ನು ಜೀವನದುದ್ದಕ್ಕೂ ಉಸಿರಾಗಿಸಿಕೊಂಡು ಬದುಕಿದ ಅವರು ತಮ್ಮ ಬದ್ಧತೆ ಹಾಗೂ ಪಾರದರ್ಶಕತೆಯಿಂದ ಕೂಡಿದ ಬರವಣಿಗೆಯ ಮೂಲಕ ಪತ್ರಿಕೋದ್ಯಮಕ್ಕೆ ಘನತೆಯನ್ನು ತಂದವರು. ತಮ್ಮ ಆರಂಭದ ದಿನಗಳಲ್ಲಿ ಭಾರತದ ವಿಭಜನೆಗೆ ಸಾಕ್ಷಿಯಾಗುತ್ತಾ, ತಮ್ಮ ಹುಟ್ಟು ನೆಲವಾದ ಪಾಕಿಸ್ತಾನದ ಸಿಯಾಲ್ ಕೋಟ್‌ನ್ನು ತ್ಯಜಿಸಿ ಪತ್ರಿಕೋದ್ಯಮದಲ್ಲಿ ಬದುಕು ಕಟ್ಟಿಕೊಳ್ಳಲು ಭಾರತಕ್ಕೆ ಬಂದ ಸಂದರ್ಭದಲ್ಲಿ ಕುಲದೀಪ್ ನಯ್ಯರ್ ಮಹಾತ್ಮನ ಹತ್ಯೆ ಕುರಿತು ಬರೆದ ಲೇಖನ

# ಗಾಂಧಿ ಹತ್ಯೆಯ ಆ ದಿನ..

ಕುಲದಿಪ್ ನಯ್ಯರ್

**ನಾ**ನು ಹಳೆಯ ದೆಹಲಿಯ 'ಅಂಜಾಮ್'; ಎಂಬ ಉರ್ದು ದಿನ ಪತ್ರಿಕೆಯನ್ನು ಸೇರಿ ಕೇವಲ ಮೂರು ತಿಂಗಳಾಗಿತ್ತಷ್ಟೆ. ಪಾಕಿಸ್ತಾನದಿಂದ ಅದೇ ತಾನೇ ಕಾನೂನು ಪದವಿ ಪಡೆದು ಬಂದಿದ್ದೆ. ನನ್ನ ವಯಸ್ಸಾಗ ಬರೀ 22 ವರ್ಷ.







ಅನುಭವನದ ಹಿನ್ನೆಲೆ ಏನೂ ಇಲ್ಲದೆ ಮೊಟ್ಟ ಮೊದಲ ಬಾರಿಗೆ ವರದಿಗಾರ/ ಉಪಸಂಪಾದಕ ಆಗಿದ್ದದ್ದು ನನಗಂತೂ ರೋಮಾಂಚಕಾರಿಯಾಗಿತ್ತು. ವಾರ್ತಾ ಸಂಸ್ಥೆಯ ಟೆಲಿಪ್ರಿಂಟರಿನ ಸುತ್ತಲೇ ಸುತ್ತುತ್ತಿರುತ್ತಿದ್ದೆ. ಅಕ್ಷರಗಳನ್ನು ಸರಸರನೆ ನಿರಂತರವಾಗಿ ಹೊರಚೆಲ್ಲುವ ಅದರ ಮಾಂತ್ರಿಕ ಶಕ್ತಿಗೆ ಬೆರಗಾಗುತ್ತಿದ್ದೆ. ಅಂದು ಜನವರಿ 30 ರ ಮಧ್ಯಾಹ್ನ ಎಂದಿನಂತೆ ಟೆಲಿಪ್ರಿಂಟರ್ ಬಳಿ ನಿಂತಿದ್ದೆ. ಗಂಟೆ ಹೊಡೆಯಿತು. ಅಂದಿನ ದಿನಗಳಲ್ಲಿ ಟೆಲಿಪ್ರಿಂಟರ್ ಅತ್ಯಂತ ಪ್ರಮುಖವಾದ ಸುದ್ದಿಗೆ ನ್ಯೂಸ್ ಡೆಸ್ಕ್ ನ ಗಮನ ಸೆಳೆಯುತ್ತಿದ್ದುದೇ ಹಾಗೆ.

'ಗಾಂಧಿ ಷಾಟ್' (ಗಾಂಧಿಗೆ ಗುಂಡಿಕ್ಕಲಾಗಿದೆ) ಎಂಬ ಪದಗಳು ನನ್ನ ಕಣ್ಣನ್ನು ಅಪ್ಪಳಿಸಿದವು. ನನ್ನ ಹೃದಯದ ಬಡಿತವೇ ದಿಢೀರೆಂದು ನಿಂತುಬಿಟ್ಟಂತಾಯಿತು. ಇಡೀ ಪ್ರಪಂಚವೇ ನನ್ನ ಸುತ್ತ ಕುಸಿಯುತ್ತಿರುವಂತೆ ಭಾಸವಾಯಿತು. ಅವರಿಲ್ಲದಿದ್ದಲ್ಲಿ ನಮ್ಮ ಗತಿ ಹೇಗಪ್ಪಾ ಎಂಬ ಪ್ರಶ್ನೆ.

ಸಹೋದ್ಯೋಗಿಯೊಬ್ಬರ ಬಳಿ ಮೋಟಾರ್ ಬೈಕ್ ಇತ್ತು. ನನ್ನನ್ನು ಮಹಾತ್ಮಾ ಗಾಂಧಿ ಇದ್ದಂತಹ ಬಿರ್ಲಾ ಭವನದ ಬಳಿ ಬಿಡುವುದಾಗಿ ಆತ ಹೇಳಿದ. ಅದು ನನ್ನ ವೃತ್ತಿ ಜೀವನದ ಆರಂಭದಲ್ಲಿನ ಅತ್ಯಂತ ಸ್ಫೋಟಕ ಸುದ್ದಿಯಾಗಿತ್ತು. ಆದರೆ, ಅದಕ್ಕೆ ನಾನೇ ಸಜ್ಜಾಗಿರಲಿಲ್ಲ ಎಂಬುದೂ ಗೊತ್ತಿತ್ತು. ಲಾಹೋರ್‌ನಲ್ಲಿ ಜರ್ನಲಿಸಂ ಕೋರ್ಸ್‌ನಲ್ಲಿ ನಾನು ಫೇಲಾಗಿದ್ದೆ. ಜತೆಗೆ ಬಿ.ಎ. ಪದವಿಯಲ್ಲಿ ಐಚ್ಛಿಕ ವಿಷಯವಾಗಿದ್ದ ಉರ್ದುವಿನಲ್ಲೂ ಫೇಲಾಗಿದ್ದೆ. ಮೋಟಾರ್ ಬೈಕಿನ ಹಿಂದಿನ ಸೀಟಿನಲ್ಲಿ ಕುಳಿತಿದ್ದ ನನ್ನ ಕಣ್ಣ ಮುಂದೆ ಅನೇಕ ವಿಷಯಗಳು ಹಾದುಹೋದವು. ಸಿಯಾಲ್ ಕೋಟ್‌ನಲ್ಲಿದ್ದ ನನ್ನ ತಂದೆ, ತಾಯಿಗೆ ವಿದಾಯ ಹೇಳಿ ಭಾರತದತ್ತ, ಪ್ರಯಾಸದ ಹೆಜ್ಜೆ ಹಾಕುತ್ತಿದ್ದ ಜನರ ತಂಡವನ್ನು ಸೇರಿಕೊಂಡಿದ್ದೆ.

ಗಾಂಧಿ ಸಾಯಬಾರದು. ರಾಷ್ಟ್ರ ವಿಭಜನೆಯ ನಂತರ ಉಂಟಾದ ಗಲಭೆಗಳನ್ನು ನಿಯಂತ್ರಿಸಲು ನಮಗಿದ್ದವರು ಅವರೊಬ್ಬರೇ. ಬಿರ್ಲಾ ಹೌಸಿನತ್ತ ಬೈಕ್ ಸಾಗುತ್ತಿರುವಾಗ ನಾನು ಹೀಗೆಲ್ಲ ಪ್ರಾರ್ಥಿಸುತ್ತಿದ್ದೆ. ಆದರೆ ಸ್ವಾತಂತ್ರ್ಯ ಗಳಿಸಿಕೊಟ್ಟ ನಂತರ ತಾವು ಸಾಯುವುದಾಗಿ ಅವರೇ ಅನೇಕ ಬಾರಿ ಹೇಳಿದ್ದರು. ಗಡಿ ದಾಟಿದ್ದೂ ನೆನಪಾಯಿತು. ಆ ಸಂದರ್ಭದಲ್ಲಿ ನನ್ನ ಜೇಬಿನಲ್ಲಿದ್ದದ್ದು ಬರೀ 120 ರೂಪಾಯಿಗಳು ಮಾತ್ರ.

ಬೀದಿಗಳಲ್ಲಿ ಮಾಮೂಲಿ ಚಟುವಟಿಕೆ ಇರಲಿಲ್ಲ. ಹೊಸ ದೆಹಲಿಯಿಂದ ಹಳೆಯ ದೆಹಲಿಯನ್ನು ಬೇರ್ಪಡಿಸಿದ್ದ ದರಿಯಾಗಂಜ್‌ನಲ್ಲಿ ಮಾತ್ರ ಮಾಮೂಲಿನಂತೆ ಜನಸಂದಣಿ ಇತ್ತು. ಮುಂದೆ ವಾಹನ ಸಂಚಾರ ಕಡಿಮೆಯೇ ಇತ್ತು. ರಸ್ತೆಗಳು ಬಿಕೋ ಎನ್ನುತ್ತಿದ್ದವು. ಬಿರ್ಲಾ ಹೌಸಿನ ಪ್ರವೇಶದ್ವಾರ ಮುಚ್ಚಿತ್ತು. ಅದ್ಯಾಕೋ ಆ ಸ್ಥಳ ನನಗೆ ಇಷ್ಟವಾಗಲಿಲ್ಲ. ಗಾಂಧಿ ಇನ್ನಿಲ್ಲ ಎಂಬುದನ್ನು ಕೇಳಿದಾಗಲಂತೂ ಅದೇನೋ ನನ್ನೊಳಗೆ ಚುಚ್ಚಿದಂತಾಗಿತ್ತು.

ಅಲ್ಲಿ ಹೆಚ್ಚು ಜನರಿರಲಿಲ್ಲ. ಬಿಳಿಯ ಖಾದಿ ಧರಿಸಿದ್ದ ಒಂದು ತಂಡ ಗಾಂಧಿಯ ಪಾರ್ಥಿವ ಶರೀರದ ಸುತ್ತ ನಿಂತು ಗಾಂಧಿಗೆ ಪ್ರಿಯವಾದ ಭಗವದ್ಗೀತೆಯನ್ನು ಓದುತ್ತಿತ್ತು. ಪ್ರಾರ್ಥನೆಗೆಂದು ಬಂದಿದ್ದ ಕೆಲವರು ಅಲ್ಲೇ ಉಳಿದಿದ್ದರು. ಗಾಂಧೀಜಿ ಅಲ್ಲಿ ಸಾಮಾನ್ಯವಾಗಿ ಮಧ್ಯಾಹ್ನದ ಪ್ರಾರ್ಥನಾ ಸಭೆ ನಡೆಸುತ್ತಿದ್ದರು. ಆಗ ಭಗವದ್ಗೀತೆ, ಕುರಾನ್, ಬೈಬಲ್‌ಗಳ ಪಠಣ ನಡೆಯುತ್ತಿತ್ತು. ಅಂದು ಪ್ರಾರ್ಥನಾ ಸಭೆಯಲ್ಲಿದ್ದ ಒಬ್ಬ ವ್ಯಕ್ತಿಯೇ ಗುಂಡು





ಹಾರಿಸಿದ. ಅದೂ ಅವರು ಪ್ರಾರ್ಥನೆಗೆ ಹಾಜರಾಗಲು ಆಗಷ್ಟೇ ಆಗಮಿಸುತ್ತಿದ್ದ ಸಮಯದಲ್ಲಿ ರಕ್ತದ ಕೆಲವು ಹನಿಗಳು ದುರಂತದ ಕಥೆ ಹೇಳುತ್ತಿದ್ದವು. ಅಲ್ಲಿದ್ದ ಪ್ರಧಾನಿ ಜವಾಹರಲಲ್ ನೆಹರೂ, ಗೃಹ ಸಚಿವರ ಸರ್ದಾರ್ ಪಟೇಲ್, ಅಬ್ದುಲ್ ಕಲಾಂ ಅಜಾದ್ ಹಾಗೂ ರಕ್ಷಣಾ ಸಚಿವ ಬಲದೇವ್ ಸಿಂಗ್ ಮೊದಲಾದವರನ್ನು ಗುರುತಿಸಿದೆ. ಅವರೆಲ್ಲಾ ತಮ್ಮ ಗುರುವೊಬ್ಬನನ್ನು ಕಳೆದುಕೊಂಡು ಅನಾಥರಾದಂತೆ ಕಾಣಿಸುತ್ತಿದ್ದರು. ಸ್ವಲ್ಪ ಸಮಯದ ನಂತರ ಗವರ್ನರ್ ಜನರಲ್ ಮೌಂಟ್‌ಬ್ಯಾಟನ್ ಅವರೂ ಆಗಮಿಸಿದರು. ಆಗಮಿಸಿದ್ದೇ ಅವರು ಆ ಹೊತ್ತಿಗಾಗಲೇ 'ಬಿರ್ಲಾ ಹೌಸ್' ಗಾರ್ಡನ್ನಿ'ನ ಮಧ್ಯಭಾಗದಲ್ಲಿ ಇರಿಸಿದ್ದ ಗಾಂಧಿಯವರ ಪಾರ್ಥಿವ ಶರೀರಕ್ಕೆ ಸೆಲ್ಯೂಟ್ ಹೊಡೆದರು. 'ಸದ್ಯ ಆತ ಪಂಜಾಬಿಯಲ್ಲ' ಎಂದು ಮೌಂಟ್ ಬ್ಯಾಟನ್‌ಗೆ ಹೇಳಿದ ಬಲದೇವ್‌ಸಿಂಗ್' ಆತ ಮುಸ್ಲಿಮನೂ ಅಲ್ಲ ನಾವು ಈ ಸುದ್ದಿಯನ್ನು ಪ್ರಸಾರ ಮಾಡುತ್ತಿದ್ದೇವೆ ಎಂದೂ ನುಡಿದರು. ಮೌಂಟ್ ಬ್ಯಾಟನ್ ಮಹಾತ್ಮಾ ಗಾಂಧಿ ಯೇಸು ಕ್ರಿಸ್ತನಂಥವರು ಅಥವಾ ಗೌತಮ ಬುದ್ಧನಂತವರು ಎಂದರು.

ಅಷ್ಟರೊಳಗೆ ಬಿರ್ಲಾ ಹೌಸಿನತ್ತು ಜನ ಪ್ರವಾಹದಂತೆ ನುಗ್ಗಿ ಬರತೊಡಗಿದರು. ಪೊಲೀಸರೂ ಹೆಚ್ಚಿನ ಸಂಖ್ಯೆಯಲ್ಲಿದ್ದು ಅಡ್ಡಗಟ್ಟೆಗಳನ್ನು ನಿರ್ಮಿಸಿದರು. ಇದನ್ನೆಂದೂ ಗಾಂಧೀಜಿ ಇಷ್ಟಪಡುತ್ತಿರಲಿಲ್ಲ. ಭದ್ರತೆಯ ಬಗೆಗಿನ ಅತಿ ಕಾಳಜಿಗೆ ಅವರು ಯಾವಾಗಲೂ ವಿರೋಧಿಯೇ ಆಗಿದ್ದರು. ನಾಯಕರು ಜನರನ್ನು ದೂರ ಮಾಡಬಾರದು ಎಂದವರು ಸದಾ ಹೇಳುತ್ತಿದ್ದರು. ಆದರೆ ಹಿಂದೊಮ್ಮೆ ಮದನ್‌ಲಾಲ್ ಎನ್ನುವಾತ ಬಾಂಬ್ ಎಸೆದ ನಂತರ ಸರ್ಕಾರ ಗಾಂಧೀಜಿಗೆ ಭದ್ರತೆ ಒದಗಿಸಿತ್ತು. ನೆಹರೂ ಅವರು ಬೌಂಡರಿ ಗೋಡೆಯತ್ತ ಧಾವಿಸಿ ಹೋಗುತ್ತಿರುವುದು ಕಂಡುಬಂತು. ಬಿರ್ಲಾ ಹೌಸಿನಲ್ಲಿ ಈಗ ಜನರ ಮಹಾಪೂರ. ಗಾಂಧಿಯ ಅಚ್ಚುಮೆಚ್ಚಿನ ಹಾಡು 'ಈಶ್ವರ ಅಲ್ಲಾ ತೇರೇ ನಾಮ್' ಅಥವಾ 'ಗಾಂಧಿ ಅಮರ್ ರಹೇ' ಎಂಬಂತಹ ಘೋಷಣೆಗಳು ಮುಗಿಲು ಮುಟ್ಟಿದ್ದವು. ಕಣ್ಣೀರು ಒರೆಸಿಕೊಳ್ಳುತ್ತಲೇ ನೆಹರೂ ಗೋಡೆ ಹತ್ತಿ ಮಾತನಾಡತೊಡಗಿದರು. ಬೆಳಕು ನಂದಿಹೋಗಿವೆ. ಬಾಪೂ ಇನ್ನಿಲ್ಲ. ಆ ದಿವ್ಯಪ್ರಭೆ ದೂರವಾಗಿದೆ. ನಮ್ಮ ಬದುಕನ್ನು ಬೆಳಗಿಸಿ ಬೆಚ್ಚಗಿಡುತ್ತಿದ್ದ ಸೂರ್ಯ ಮುಳುಗಿದ್ದಾನೆ. ಕತ್ತಲೆಯಲ್ಲಿ ಚಳಿಯಿಂದ ನಡುಗುವ ಸ್ಥಿತಿ ನಮ್ಮದಾಗಿದೆ.' ಹೀಗೆ ಮಾತಾಡುತ್ತಲೇ ನೆಹರೂ ಅವರಿಗೆ ಅಳು ಒತ್ತರಿಸಿ ಬಂತು. ಜನಸಮೂಹವೂ ಕಣ್ಣೀರುಗರೆಯಿತು. ಕೆನ್ನೆಯಲ್ಲಿ ನೀರಿಳಿಯದಿದ್ದ ಒಬ್ಬ ವ್ಯಕ್ತಿಯೂ ಕಾಣಲಿಲ್ಲ. ಎಲ್ಲರಲ್ಲೂ ತಮ್ಮದೇ ಕುಟುಂಬದ ವ್ಯಕ್ತಿಯೊಬ್ಬ ಮಕ್ಕಳನ್ನೆಲ್ಲ ಅನಾಥರನ್ನಾಗಿ ಮಾಡಿ ಅಗಲಿಹೋದಂತಹ ದುಃಖ ಮಡುಗಟ್ಟಿತ್ತು.

ನಾಥೂರಾಮ ಗೋಡ್ಸೆಯನ್ನು ನಾನಲ್ಲಿ ಕಾಣಲಿಲ್ಲ. ಗಾಂಧೀಜಿಯವರನ್ನು ಕೊಲ್ಲುವ ಮೊದಲು ಆತ ಅವರ ಕಾಲುಗಳಿಗೆ ಎರಗಿ ಸನಿಹದಿಂದಲೇ ಮೂರು ಸುತ್ತು ಹಾರಿಸಿದ್ದ. ತಕ್ಷಣವೇ ಗೋಡ್ಸೆಯನ್ನು ಹಿಡಿದು ಬಿರ್ಲಾ ಹೌಸಿನಲ್ಲೇ ಒಂದು ಕೋಣೆಯಲ್ಲಿ ಕೂಡಿಹಾಕಲಾಗಿತ್ತು. ಅಲ್ಲೆಲ್ಲಾ ರಕ್ತ ಗಾಂಧೀಜಿಯವರು ಪ್ರಾರ್ಥನಾ ಸ್ಥಳಕ್ಕಾಗಿ ತೆಗೆದುಕೊಂಡು ಬಂದಿದ್ದ ಹೂಗಳೂ ಚೆಲ್ಲಾಡಿದದ್ದವು. ಸುತ್ತ ಜನರ ಗುಂಪು ಇದ್ದರೂ ಆ ಹಾದಿ ನಿರ್ಜನವಾಗಿಯೇ ಕಾಣುತ್ತಿತ್ತು.

ಗಾಂಧೀಜಿಯವರು ಕಲ್ಕತ್ತದಲ್ಲಿ ಕೋಮು ಗಲಭೆಗಳ ಸಂದರ್ಭದಲ್ಲಿ ಏಕ ವ್ಯಕ್ತಿ ಶಕ್ತಿಯಾಗಿದ್ದರು. ಅಲ್ಲಿ ತಮ್ಮ ಶಸ್ತ್ರಾಸ್ತ್ರಗಳು ಚಿಕ್ಕದಿರಲಿ ದೊಡ್ಡದಿರಲಿ, ಅಪಾಯಕಾರಿಯಾಗಿರಲಿ, ಇಲ್ಲದಿರಲಿ ಹಿಂದೂಗಳು ಮತ್ತು ಸಿಖ್ಖರು ಅವುಗಳನ್ನು ಪರಿತ್ಯಾಗ ಮಾಡುವಂತೆ ಪ್ರೇರೇಪಿಸುತ್ತಿದ್ದರು. ಈಗ ವಿಭಜನೆಯಿಂದಾಗಿ ಹೊತ್ತಿಕೊಂಡ ಕಿಡಿಯನ್ನು, ಹಿಂದೂ ಮಹಾಸಭಾ ನಾಯಕರಿಂದಾಗಿ ಹಬ್ಬಿದ ಬೆಂಕಿಯನ್ನು ನಂದಿಸುವವರಾದರೂ ಯಾರು.?

ಗಾಂಧಿಯವರು ಆಗಿನ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬಿ.ಸಿ. ರಾಯ್ ಅವರಿಗೆ 'ನಾನು ಬದುಕಿ ಏನು ಪ್ರಯೋಜನ? ಜನರಿಗಾಗಲೀ ಅಧಿಕಾರದಲ್ಲಿ ಇರುವರಿಗಾಗಲೀ ನನ್ನಿಂದ ಏನೂ ಪ್ರಯೋಜನವಿಲ್ಲ. 'ಮಾಡು ಇಲ್ಲವೇ ಮಡಿ' ಎನ್ನುವುದು ಈ ಸಂದರ್ಭದಲ್ಲಿ ಹೆಚ್ಚು ಮುಖ್ಯ. ನಾನು ನನ್ನ ಕಡೆಯ ಉಸಿರುರುವವರೆಗೂ ದೇವರ ಹೆಸರು ಹೇಳಿಕೊಂಡು ಸಾಯಬಯಸುತ್ತೇನೆ ಎಂದು ಹೇಳಿದ್ದರೆಂದು ಕೆಲವು ದಿನಗಳ ಹಿಂದೆಯಷ್ಟೇ ಪತ್ರಿಕೆಗಳು ಪ್ರಕಟಿಸಿದ್ದವು.

ನಾನು ನನ್ನ ಷೂಗಳನ್ನು ಕಳಚಿ ಗಾಂಧಿಯವರು ಸಾಮಾನ್ಯವಾಗಿ ಸಂಜೆ ಪ್ರಾರ್ಥನಾ ಸಭೆ ನಡೆಸುತ್ತಿದ್ದ ಜಾಗದತ್ತ ನಡೆದುಹೋದೆ. ಏನೋ ಒಂದು ಬಗೆಯ ಸಾತ್ವಿಕತೆ, ಆಧ್ಯಾತ್ಮಿಕ ಭಾವನೆ ನನ್ನನ್ನು ತುಂಬಿಕೊಂಡಿತು. ಕೆಲವು ದಿನಗಳ ಹಿಂದೆಷ್ಟೇ ಗಾಂಧಿಯವರ ಸಭೆಯಲ್ಲಿ ನಾನೂ ಪಾಲ್ಗೊಂಡಿದ್ದದ್ದು ಸ್ಮರಣೆಗೆ ಬಂತು. ತಮ್ಮ ಪ್ರವಚನಗಳನ್ನು ಮಾಡಲು ಗಾಂಧಿಯವರು ಕುಳಿತುಕೊಂಡಿದ್ದ ಶೆಡ್ಡಿನ ಹಿಂಭಾಗದಲ್ಲೇ ಮದನ್ ಲಾಲ್ ಬಾಂಬ್ ಸ್ಫೋಟಿಸಿದ್ದ ದಿನ ಅದು. ನನಗೂ ಅದರ ಸದ್ದು ಕೇಳಿಸಿತ್ತು. ಆದರೆ ಅದೊಂದು ಪಟಾಕಿ ಸದ್ದಲ್ಲದೆ ಬೇರೇನೂ ಅಲ್ಲ ಎಂದುಕೊಂಡಿದ್ದೆ. ಏಕೆಂದರೆ ಆ ಸ್ಫೋಟಕ್ಕೆ ಗಾಂಧಿ ಪ್ರತಿಕ್ರಿಯಿಸಿಯೇ ಇರಲಿಲ್ಲ. ಏನೂ ಆಗಲೇ ಇಲ್ಲವೆಂಬಂತೆ ಅವರು ಪ್ರಾರ್ಥನೆಯನ್ನು ಮುಂದುವರಿಸಿದ್ದರು. ಅದು ಬಾಂಬ್ ಸ್ಫೋಟವೆಂದು ಮರುದಿನದ ಪತ್ರಿಕೆಗಳಿಂದಲೇ ನನಗೆ ಗೊತ್ತಾದದ್ದು.

ಗಾಂಧಿಯವರು ಆ ಸಂದರ್ಭದಲ್ಲಿ ನುಡಿದಿದ್ದ ಮಾತುಗಳನ್ನು ನೆನಪಿಸಿಕೊಂಡೆ. 'ಹಿಂದೂಗಳು ಹಾಗೂ ಮುಸ್ಲಿಮರು ನನ್ನ ಎರಡು ಕಣ್ಣುಗಳು' ಆದರೆ ಮತಾಂಧ ಹಿಂದೂ ಒಬ್ಬ ಸದ್ದಡಗಿಸಿದಂತಹ ಗಾಂಧಿಯ ಆ ದನಿಯನ್ನು ರಾಷ್ಟ್ರ ಕೇಳಿಸಿಕೊಳ್ಳುವುದೆ? ಬಹು ಸಂಸ್ಕೃತಿಯನ್ನು ಪೋಷಿಸುವ ಗಾಂಧೀಯವರ ಧ್ಯೇಯ ಅವರ ಬಲಿದಾನದ ನಂತರವಾದರೂ ನನಸಾಗುವುದೇ? ಸದ್ಯಕ್ಕಂತೂ ಹಿಂದೂಗಳು, ಮುಸ್ಲಿಮರು, ಸಿಖ್ಖರು, ಕ್ರೈಸ್ತರು– ಹೀಗೆ ವಿಭಿನ್ನ ಧಾರ್ಮಿಕ ಸಮುದಾಯದವರನ್ನು ಗಾಂಧೀಜಿ ಒಂದೇ ಶೋಕ ಸಾಗರದಲ್ಲಿ ಮುಳುಗಿಸಿ ಬಿಟ್ಟಿದ್ದರು. ಅವರೆಲ್ಲರೂ ಬಾಪೂವನ್ನು ಕಳೆದುಕೊಂಡದ್ದಕ್ಕಾಗಿ ಸಾಮೂಹಿಕವಾಗಿ ದುಃಖಿಸುತ್ತಿದ್ದರು.

ಗಾಂಧಿ ನಿರ್ಮಿಸಲು ಯತ್ನಿಸಿದ ಬಹು ಸಂಸ್ಕೃತಿಯ ಸಮಾಜವನ್ನು ನಾಶ ಮಾಡಲು ಕುತಂತ್ರಿಗಳು,


ಭಯೋತ್ಪಾದಕರು, ಮಂತಾಂಧರು ಎಲ್ಲೆಲ್ಲಿಂದಲೋ ಬಂದರು. ಕೋಮುವಾದದ ಬೆಂಕಿ ಹೊತ್ತಿಕೊಂಡು ಉರಿಯಿತು. ಅದು ಗಾಂಧೀಜಿಯ ಜೀವನವನ್ನೇ ಬಲಿ ತೆಗೆದುಕೊಂಡಿದ್ದು ಪರಿಸ್ಥಿತಿಯ ವ್ಯಂಗ್ಯ. ಆಘಾತ ಗೊಂಡಿದ್ದ ರಾಷ್ಟ್ರ ಗಾಂಧೀಜಿ ಒದಗಿಸಿದ್ದ ಬೆಳಕಿಗಾಗಿ ಕತ್ತಲಲ್ಲಿ ತತ್ತರಿಸಿತು. ಪಾಪಪ್ರಜ್ಞೆಯ ಭಾವನೆಯೂ ಇತ್ತು. ದ್ವೇಷ ಎಂಬುದು ಜನರನ್ನು ಹೇಗೆ ಕುರುಡಾಗಿಸುತ್ತದೆಯೆಂಬ ಅರಿವೂ ಉಂಟಾಗಿತ್ತು.

ನಾನು ವಾಪಸಾದಾಗ ನನ್ನ ಕಚೇರಿಯ ಡೆಸ್ಕಿನಲ್ಲಿ ಮಂಕು ಆವರಿಸಿತ್ತು. ನಾನು ಯಾರೊಂದಿಗೂ ಮಾತನಾಡಲಿಲ್ಲ. ನಮಗೆ ಭವಿಷ್ಯದ ಬಗ್ಗೆ ಭೀತಿಯಾಗಿತ್ತು. ಸುದ್ದಿ ಬರೆಯಲು ಕುರ್ಚಿಯಲ್ಲಿ ಕುಳಿತ ನನ್ನ ಏಕಾಗ್ರತೆಗೆ ಯಾರೂ ಭಂಗ ಉಂಟು ಮಾಡಲಿಲ್ಲ. ಹೇಳಲು ಹಲವು ವಿಚಾರಗಳಿದ್ದವು. ನನ್ನ ಕೈಗಳು ನಡುಗುತ್ತಿದ್ದವು. ಪೆನ್ನು ಹಿಡಿಯಲೂ ಸಾಧ್ಯವಾಗಲಿಲ್ಲ. ನಾನು ಬರೆದ ಕೆಲವು ಪದಗಳು ಕಣ್ಣೀರಿನಲ್ಲಿ ಕಲೆಸಿಹೋಗಿ ಚಿತ್ತಾದವು. ಸಂಪಾದಕರು ನನ್ನನ್ನು ಕರೆದು ನೀನೇನು ಬರೆದಿದ್ದೀಯ ನಿಧಾನವಾಗಿ  ಹೇಳು ಎಂದರು. ನನಗೆ ಅಳು ಒತ್ತರಿಸಿ ಬಂತು. ನನ್ನನ್ನು ನಾನು ಸಂಭಾಳಿಸಿಕೊಂಡು ಕಾಪಿಯನ್ನು ಫೈಲ್ ಮಾಡಲು ಸ್ವಲ್ಪ ಸಮಯವೇ ಬೇಕಾಯಿತು.

ನನ್ನ ವರದಿ ಈ ರೀತಿ ಇತ್ತು; 'ಮಾಹಾತ್ಮಾ ಗಾಂಧಿ ಇನ್ನಿಲ್ಲ. ಅವರನ್ನು ಹಿಂದೂ ಮತಾಂಧ ನಾಥೂರಾಮ್ ಗೋಡ್ಸೆ ಹತ್ಯೆ ಮಾಡಿದ. ಆದರೆ ಅದಕ್ಕಿಂತ ಹೆಚ್ಚಿನದನ್ನು ಆತ ಮಾಡಿದ. ಅಂದರೆ ಧರ್ಮದ ಹೆಸರನಲ್ಲಿನ ಎಲ್ಲಾ ಹುಚ್ಚುತನವನ್ನೂ ಆತ ಪುನರುಜ್ಜೀವಗೊಳಿಸಿದ. ಈ ಕೃತ್ಯದಲ್ಲಿ ಗೋಡ್ಸೆ ಒಂಟಿಯಾಗಿರಲಿಲ್ಲ. ಭಾರತದ ಜಾತ್ಯತೀತ ಭಾವನೆಗಳನ್ನು ನಾಶ ಮಾಡುವಂತ ಬಹು ದೊಡ್ಡ ಸಂಚು ಅವನ ಹಿನ್ನೆಲೆಯಲ್ಲಿತೆಂದು ಸರ್ಕಾರ ನಂಬಿತು. ಗೋಡ್ಸೆಯ ಹಿಂದೆ ಹಿಂದೂ ಮಹಾಸಭಾ ಇತ್ತೆಂದು ಭಾವಿಸಲಾಯಿತು.'

ಸಂಜೆ ನಾಲ್ಕರ ಸುಮಾರಿಗೆ ಗಾಂಧಿಜಿ ತಮ್ಮ ಕೋಣೆಯಿಂದ ಸ್ವಲ್ಪ ತಡವಾಗಿ ಪ್ರಾರ್ಥನಾ ಸಭೆಗೆ ನಡೆದುಬರುತ್ತಿದ್ದರು. ಅರ್ಧ

> ಗಾಂಧಿ ನಿರ್ಮಿಸಲು ಯತ್ನಿಸಿದ ಬಹು ಸಂಸ್ಕೃತಿಯ ಸಮಾಜವನ್ನು ನಾಶ ಮಾಡಲು ಕುತಂತ್ರಿಗಳು, ಭಯೋತ್ಪಾದಕರು, ಮಂತಾಂಧರು ಎಲ್ಲೆಲ್ಲಿಂದಲೋ ಬಂದರು. ಕೋಮುವಾದದ ಬೆಂಕಿ ಹೊತ್ತಿಕೊಂಡು ಉರಿಯಿತು. ಅದು ಗಾಂಧೀಜಿಯ ಜೀವನವನ್ನೇ ಬಲಿ ತೆಗೆದುಕೊಂಡಿದ್ದು ಪರಿಸ್ಥಿತಿಯ ವ್ಯಂಗ್ಯ.



ದಾರಿಯಲ್ಲೇ ಗೋಡ್ಸೆ ಅವರ ಮೇಲೆ ಗುಂಡು ಹಾರಿಸಿದಾಗ 'ಹೇ ರಾಮ್' ಎಂದು ಕೂಗುತ್ತಾ ಅವರು ಕೆಳಗೆ ಬಿದ್ದರು.ನನಗೆ ಮುಂದೆ ಬರೆಯಲಾಗಲಿಲ್ಲ. ನನ್ನ ವರದಿಗೆ ವಾರ್ತಾ ಸಂಸ್ಥೆಯಿಂದ ತೆಗೆದುಕೊಂಡ ಮಾಹಿತಿಯನ್ನೂ ಸೇರಿಸಲಾಯಿತು.

ನನಗೆ ಎಷ್ಟೊಂದು ದುಃಖ, ಆಕ್ರೋಶ ಉಂಟಾಗಿತ್ತೆಂದರೆ ಸಂಪಾದಕರು ನೀಡಿದ್ದ ಮತ್ತೊಂದು ವರದಿಯನ್ನು ನಾನು ಅನುವಾದ ಮಾಡಲಾಗಲಿಲ್ಲ. ಗೋಡ್ಸೆಯ ಊರಾದ ಪೂನಾದಲ್ಲಿ ಉಂಟಾದ ಕೋಮು ಗಲಭೆಯನ್ನು ಕುರಿತ ವರದಿ ಅದು. ನನ್ನ ಭಾವೋದ್ವೇಗ ಎಷ್ಟು ತೀವ್ರವಾಗಿತ್ತೆಂದರೆ, ಗಲಭೆಗಳ ಬಗ್ಗೆ ನನಗೆ ಏನನ್ನಾದರೂ ಕೇಳುವುದಾಗಲಿ, ಓದುವುದಾಗಲಿ, ಬರೆಯುವುದಾಗಲೀ ಬೇಡವಾಗಿತ್ತು.  ಹಿಂದೂ – ಮುಸ್ಲಿಮರ ಗಲಭೆಗಳಿಗೆ ಗಾಂಧಿ ಬಲಿಪಶುವಾಗಿದ್ದರು.

ಓದುಗರಿಗೆ ಮತ್ತೊಂದು ಕೋಮು ಗಲಭೆಯ ಬಗ್ಗೆ ನಾನ್ಯಾಕೆ ಹೇಳಲಿ? ಆದರೆ ಪತ್ರಿಕೆಗೆ ಆ ಸುದ್ದಿ 'ಮಿಸ್' ಆಯಿತು. ಮರುದಿನ ಬೆಳಿಗ್ಗೆ ಸಂಪಾದಕರು ನನ್ನನ್ನು ಕರೆದರು. ವಾಗ್ದಂಡನೆಗಾಗಿ ಅಲ್ಲ; ಪತ್ರಿಕೋದ್ಯಮದಲ್ಲೇ ಉಳಿಯಬೇಕೆಂದಿದ್ದರೆ ಮೊದಲು ಘಟನಾವಳಿಗಳ ವರದಿ ಮಾಡಬೇಕೆನ್ನುವುದನ್ನು ತಿಳಿ ಹೇಳುವುದಕ್ಕೆ. ಭಾವನೆಗಳು ನನ್ನ ನಿರ್ಧಾರಗಳ ಮೇಲೆ ಸವಾರಿ ಮಾಡಬಾರದು ಎಂಬುದನ್ನೂ ಮನವರಿಕೆ ಮಾಡಿಕೊಟ್ಟರು. ಸಂಪಾದಕರು ಹೇಳುತ್ತಿರುವುದು ಸರಿ ಎಂದು ನನಗಾಗ ಅರ್ಥವಾಯಿತು. ಮನಸ್ಸು ಗಟ್ಟಿ ಆಯಿತು. ಪತ್ರಿಕೋದ್ಯಮದಲ್ಲೇ ಉಳಿಯಲು ನಿರ್ಧರಿಸಿದೆ. ಗಾಂಧೀಜಿಯ ಮೌಲ್ಯಗಳನ್ನು ಬಿತ್ತರಿಸಬಹುದಾದ ವೃತ್ತಿ ಇದು. ಆದರೆ ಈ ಕಾರ್ಯದಲ್ಲಿ ನಾನು ಯಶಸ್ವಿಯಾದೆನೆ?

ಆಮೇಲೆ ಅನೇಕ ಕೋಮು ಗಲಭೆಗಳನ್ನು ವರದಿ ಮಾಡಿದ್ದೇನೆ. ಆದರೆ ಪ್ರತಿಬಾರಿಯೂ ಹಿಂದೂಗಳು ಮುಸ್ಲಿಮರು ತಮ್ಮ ಎರಡು ಕಣ್ಣುಗಳು ಎಂದು ಹೇಳಿದ ಗಾಂಧೀಜಿಯವರ ಮಾತುಗಳು ಎಂದಿಗೆ ನಿಜವಾಗುತ್ತವೆ ಎಂದು ಯೋಚಿಸಿದ್ದೇನೆ. ವಿಭಿನ್ನ ಸಮುದಾಯಗಳು ಪೂರ್ವಗ್ರಹಗಳನ್ನು ಬಿಟ್ಟುಬಿಡುವುದಾದರೂ ಹೇಗೆ?  ಗಾಂಧೀಜಿಯವರು ಹೇಳಿಕೊಟ್ಟ ಮಾರ್ಗದಲ್ಲಿ ನಡೆಯುವುದು ಎಂದು ಸಾಧ್ಯವಾಗುತ್ತದೆ ನಮಗೆ? ತಪ್ಪು ಮಾರ್ಗ ಸರಿಯಾದ ಫಲಿತಾಂಶ ನೀಡುವುದಿಲ್ಲವೆಂದು ಗಾಂಧೀಜಿ ನಮ್ಮಲ್ಲಿ ಬಿತ್ತಲು ಪ್ರಯತ್ನಿಸಿದ ಸಂದೇಶವನ್ನು ವ್ಯಾಪಕವಾಗಿ ಹರಡುವಲ್ಲಿ ಕೂಡ ನಾವು ಯಶಸ್ವಿಯಾಗುವುದು ಎಂದಿಗೆ? ■

**(ಸ್ಕೂಪ್ ಅಂಕಣದಲ್ಲಿ ಬರೆದ ಲೇಖನ) ಮಾಹಿತಿ ಸೌಜನ್ಯ – ಪ್ರಜಾವಾಣಿ**







> ಭಾರತೀಯ ಸಮಾಜವಾದದ ಪ್ರಮುಖ ಚಿಂತಕರಾದ ಡಾ.ರಾಮಮನೋಹರ ಲೋಹಿಯಾ ಅವರು ಗಾಂಧೀಜಿಯವರ ಮೆಚ್ಚಿನ ಶಿಷ್ಯರೂ ಹಾಗೂ ವಿಮರ್ಶಕರೂ ಆಗಿದ್ದರು. ಕಾಂಗ್ರೆಸ್ ನೀತಿಗಳನ್ನು ವಿರೋಧಿಸುತ್ತಾ, ನೆಹರೂ ಜಾರಿಗೆ ತಂದ ಹಲವು ಮಾದರಿಗಳನ್ನು ವಿರೋಧಿಸುತ್ತಲೇ ಮಹಾತ್ಮನೊಡನೆ ಸಂಬಂಧವಿರಿಸಿಕೊಂಡು, ಅವರನ್ನು ತಿದ್ದುತ್ತಾ, ಜೊತೆ ಜೊತೆಗೆ ಅವರಿಂದ ಕಲಿಯುತ್ತಾ ತಾವೂ ಬೆಳೆದರು. ಗಾಂಧಿ–ಲೋಹಿಯಾ ನಡುವಿನ ಸಂಬಂಧ ಕೇವಲ ಗುರು–ಶಿಷ್ಯರ ನಡುವಿನ ಸಂಬಂಧ ಮಾತ್ರವಾಗಿರದೆ, ತಂದೆ–ಮಗನ ಸಂಬಂಧದ ಹಾಗೆ ಕೊನೆಯವರೆಗೂ ಉಳಿಯಿತು. ನಾನು ಸಮಾಜವಾದಿಯಾದರೂ ಸಹ ಮೂಲತಃ ಗಾಂಧಿವಾದಿ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಲೋಹಿಯಾ ಅವರು ತಮ್ಮ ಹಾಗೂ ಗಾಂಧಿ ನಡುವಿನ ಸಂಬಂಧವನ್ನು ಗಾಂಧೀಜಿ ಹತ್ಯೆಯಾದ ಹನ್ನೆರಡು ವರ್ಷಗಳ ಬಳಿಕ 1960 ರಲ್ಲಿ ಭಾವಾತ್ಮಕ ನೆಲೆಯಲ್ಲಿ ದಾಖಲಿಸಿದರು. ಆ ಲೇಖನದ ಆಯ್ದ ಭಾಗವನ್ನು ಇಲ್ಲಿ ನೀಡಲಾಗಿದೆ"



# ಲೋಹಿಯಾ ಕಂಡ ಮಹಾತ್ಮ

ಕನ್ನಡಕ್ಕೆ–
ಬಿ. ಎಂ. ಸನದಿ

**ಆ** ದಿನಗಳಲ್ಲಿ ನನ್ನ ಹಾಗೂ ಗಾಂಧೀಜಿಯವರ ನಡುವೆ ಸುದೀರ್ಘ ಮಾತುಕತೆಗಳು ನಡೆಯುತ್ತಿದ್ದವು: ಒಂದು ದಿನ ಬೆಳಿಗ್ಗೆ ಸಿಕ್ಕಾಗ, ಅಂದು ಸಾಯಂಕಾಲ ಮತ್ತೆ ಭೇಟಿಯಾಗುವಂತೆ ಸೂಚಿಸಿದರು. ನನ್ನೊಡನೆ ಬಲು ಮಹತ್ವದ ಮಾತುಗಳನ್ನಾಡುವುದಿದೆಯೆಂದೂ ಸೂಚಿಸಿದರು. ಸಾಯಂಕಾಲದ ಅವರ ಪ್ರಾರ್ಥನೆ ಮುಗಿದ ನಂತರ ನಾನು ಹೋದೆ. ಅವರ ವಾಯುವಿಹಾರದಲ್ಲಿ ನಾನು ಸೇರಿದೆ. ಅವರು ಅಲ್ಲಿದ್ದ ಇತರರಿಗೆ ದೂರ ಹೋಗುವಂತೆ ಸೂಚಿಸಿ, ನನ್ನ ಹೆಗಲ ಮೇಲೆ ಕೈಯಿಟ್ಟು ಮಾತನಾಡಲಾರಂಭಿಸಿದರು. ಅವರ ಜೊತೆಯಲ್ಲಿ ಹಾಗೆ ಅಷ್ಟೊಂದು ಆತ್ಮೀಯವಾಗಿ ನಾನು ನಡೆದುಹೋಗುವೆನೆಂದು ತಿಳಿದಿರಲಿಲ್ಲ. ಅವರು ಕಳೆದ ಹದಿಮೂರು ವರ್ಷಗಳಿಂದಲೂ ನನ್ನನ್ನು ಬಲ್ಲವರಾಗಿದ್ದರು. ಈ ಅವಧಿಯಲ್ಲಿ ನಾವೆಂದೂ ಖಾಸಗಿ ಜೀವನದ ವಿಷಯಗಳನ್ನು ಮಾತಾಡಿರಲೇ ಇಲ್ಲ. ಆದ್ದರಿಂದ ಅವರು ನನ್ನ ಸಿಗರೇಟ್, ಚಹಾ ಹಾಗೂ ಕಾಫಿ ಸೇವನೆಯ ಕುರಿತು ಮಾತಾಡಲಾರಂಭಿಸಿದಾಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಹದಿಮೂರು ವರ್ಷಗಳ ಅವಧಿಯಲ್ಲಿ ಅನೇಕ ಬಾರಿ ಅವರೊಡನೆ ಸುದೀರ್ಘ ಮಾತುಕತೆ ನಡೆಸುವ ಅವಕಾಶಗಳು ಒದಗಿದ್ದವು. ಆದರೆ, ಎಂದಾದರೂ ಒಂದು ದಿನ ಮಹಾತ್ಮರು ನನ್ನ ಸಿಗರೇಟ್ ಸೇರಿದಂತೆ ವ್ಯಕ್ತಿಗತ ವಿಷಯದ ಬಗೆಗೂ ಮಾತಾಡಬಹುದೆಂದು ನಾನೆಂದೂ ಭಾವಿಸಿರಲಿಲ್ಲ. ನಾನು ಆಗ ಸಿಗರೇಟ್ ಸೇದುತ್ತಿದ್ದೆ. ನಾನು ಬಹಳ ಸಿಗರೇಟ್ ಸೇದುತ್ತೇನೆ, ಹೆಚ್ಚಿಗೆ ಚಹಾ– ಕಾಫಿ






ಕುಡಿಯುತ್ತೇನೆ ಎಂದು ಅವರೆಂದರು. ಸಿಗರೇಟ್, ಚಹಾ–ಕಾಫಿಗಳ ಸೇವನೆಯಿಂದ ಯಾವುದೇ ವ್ಯಕ್ತಿಯ ಆರೋಗ್ಯಕ್ಕೆ ಎಷ್ಟು ಹಾನಿ ಉಂಟಾಗುತ್ತದೆಂಬುದನ್ನೂ ಸವಿಸ್ತಾರವಾಗಿ ವಿವರಿಸಿದರು. ಅಷ್ಟೇ ಅಲ್ಲ, ಸಿಗರೇಟ್, ಚಹಾ– ಕಾಫಿಗಳ ಚಟಗಳಿಂದ ಮುಕ್ತರಾಗುವ ಜಪಾನೀ ಹಾಗೂ ಚೀನೀ ಪದ್ಧತಿಗಳನ್ನೂ ವಿವರಿಸಿದರು. ಮುಂದುವರೆದು, ಈ ವಿಷಯವೂ ಸಮಾಜವಾದಕ್ಕೆ ನೇರವಾಗಿ ಸಂಬಂಧಿಸಿದ್ದೇ ಎಂದು ನುಡಿದರು. ಒಬ್ಬ ಸಮಾಜವಾದಿಯಾಗಿ, ನಾನು ಜನತೆಯೊಡನೆ ಒಂದಾಗಿರಬೇಕೆಂದು ಅವರು ಸೂಚಿಸಿದರು. ಜನತಾ ಪ್ರತಿನಿಧಿ ಜನತೆಯೊಡನೆ ಒಂದಾಗಿರಲು ಇದೇ ಆಧಾರ. ಭಾರತದಲ್ಲಿ ಸಿಗರೇಟು ಸೇದುವ ಔಚಿತ್ಯವೇನೆಂದು ಸಿದ್ಧಪಡಿಸಲು ಯಾವ ಆಧಾರವಿದೆಯೆಂದೂ ಅವರು ನನ್ನನ್ನು ಪ್ರಶ್ನಿಸಿದರು.

ನನ್ನ ಜೀವನದಲ್ಲಿ ಇಂಥ ಸಂಕೋಚದ ಕ್ಷಣಗಳು ಬಂದದ್ದೇ ಕಡಿಮೆ. ಅವರ ಕೈ ನನ್ನ ಹೆಗಲ ಮೇಲಿತ್ತು; ನಾನು ಓಡಲು ಬಯಸಿದ್ದರೂ ಓಡುವುದು ಸಾಧ್ಯವಿರಲಿಲ್ಲ. ಆದ್ದರಿಂದ, ಸುಮ್ಮನೇ ಅವರ ಮಾತಿಗೆ ಕಿವಿಗೊಡದೆ ಗತ್ಯಂತರವಿರಲಿಲ್ಲ. ನಾನು ಮೌನವಾಗಿದ್ದೆ. ಆದರೆ ಅವರು ಸುಮ್ಮನಿರಲಿಲ್ಲ. ಯಾಕೆಂದರೆ ಅವರು ಸಾಧಾರಣ ಅರ್ಥದಲ್ಲಿ ಮಹಾವ್ಯಕ್ತಿಯೆನಿಸಿಕೊಂಡವರಲ್ಲ. ಅಂತೆಯೇ ನಾನು, ನನ್ನ ಮಟ್ಟಿಗೆ ಅಸಭ್ಯ ಆಚರಣೆಯೆನಿಸಿದರೂ, ಮೌನದಿಂದಿರುವುದು ಅನಿವಾರ್ಯವಾಯಿತು. ಆಗ ಅವರು ತಮ್ಮ ಮಾತಿನ ದಿಕ್ಕನ್ನೇ ಬದಲಾಯಿಸಿ ಒಟ್ಟು ಜನತಾ ಪ್ರತಿನಿಧಿ ಹೇಗಿರಬೇಕೆಂಬ ವಿಷಯವನ್ನು ಎತ್ತಿದರು. ನನಗೆ ಏನಾದರೂ ಹೇಳುವುದಿದೆಯೇ ಎಂದು ಅವರು ಮತ್ತೊಮ್ಮೆ ನನ್ನನ್ನು ಕೇಳಿದರು. ಆಗಲೂ ನಾನು ಸುಮ್ಮನಿದ್ದೆ. ಹಾಗಾದರೆ ತಾವೂ ಸುಮ್ಮನಿರಬೇಕೇ ಎಂದು ಅವರು ಕೇಳಿದರು. ಅವರು ಮಾತಾಡುತ್ತಿರುವಂತೆ ನಾನು ಕೇಳಿಕೊಂಡೆ "ಸಾರ್ವಜನಿಕ ಹಾಗೂ ವೈಯಕ್ತಿಕ ಜೀವನಗಳ ಮಧ್ಯೆ ಬಹಳ ಅಂತರವಿದೆಯೆಂದು ನೀವು ಭಾವಿಸುತ್ತೀರಾ?" ಎಂದು ಕೇಳಿದರು. ಹಾಗೆಯೇ "ನಿನ್ನ ಸಾರ್ವಜನಿಕ ಜೀವನದೊಡನೆ ಮಾತ್ರ ಸಂಬಂಧವಿರಿಸಿಕೊಳ್ಳಬೇಕೆಂದು ನಿನಗೆ ಅನ್ನಿಸುತ್ತದೆಯೇ?" ಎಂದೂ ಪ್ರಶ್ನಿಸಿದರು. ನಾನು ಅಂತಹ ಅಂತರವನ್ನು ಒಪ್ಪುವುದಿಲ್ಲವೆಂದೂ, ಇತರರ ಇಂಥ ಮಾತುಗಳಿಗೆ ಹಸ್ತಕ್ಷೇಪವೆಂದು ಆರೋಪಿಸಬಹುದಾದರೂ, ಗಾಂಧೀಜಿಯವರ ವಿಷಯದಲ್ಲಿ ಮಾತ್ರ ಹಾಗೆ ಹೇಳಲಾರೆನೆಂದೂ ಸ್ಪಷ್ಟಪಡಿಸಿ ಆಕಾಶದ ಕೆಳಗಿರುವ ಯಾವುದೇ ವಿಷಯವನ್ನು ಕುರಿತು ನನಗೆ ಏನನ್ನಾದರೂ ಹೇಳುವ ಸ್ವಾತಂತ್ರ್ಯ ಅವರಿಗಿದೆಯೆಂದೂ ನಾನು ತಿಳಿಸಿದೆ.

ಅವರು ತಮ್ಮ ಮಾತು ಮುಂದುವರಿಸಿ, ಸುಮಾರು ಐವತ್ತೈದು ನಿಮಿಷಗಳವರೆಗೆ ಮಾತಾಡುತ್ತಲೇ ಇದ್ದರು. ಆಗ ನಾನು ಆ ಹಿರಿಯ ಚೈತನ್ಯಕ್ಕೆ ಸ್ಪಷ್ಟವಾಗಿ ಹೇಳಲೇಬೇಕಾಯಿತು: " ನಾನಿಂದು ನಿಮಗೆ ಯಾವ ಉತ್ತರವನ್ನೂ ಕೊಡಲಾರೆ, ಆದರೆ ಶೀಘ್ರವೇ ಉತ್ತರಿಸುತ್ತೇನೆ." ಗಾಂಧೀಜಿಯವರ ತರ್ಕಸರಣಿ ಸರಿಯಾಗಿತ್ತೋ ಇಲ್ಲವೋ ನಾನು ಹೇಳಲಾರೆ, ಜನತಾ ಪ್ರತಿನಿಧಿಯಾಗುವ ಈ ಬಗ್ಗೆ ಎಷ್ಟರಮಟ್ಟಿಗೆ ಸರಿಯಾದುದೆಂಬುದು ನನಗಿಂದಿಗೂ ಮನವರಿಕೆಯಾಗಿಲ್ಲ.

ಆದರೆ, ಒಂದು ಮಾತನ್ನು ಅವರು ಇಷ್ಟು ಒತ್ತು ಕೊಟ್ಟು ಹೇಳಿದ ಬಳಿಕ, ಎರಡು ತಿಂಗಳ ನಂತರ ಹೋಗಿ ಅವರನ್ನು ಕಂಡೆ; ನಾನು ಸಿಗರೇಟ್ ಸೇದುವುದನ್ನು ಬಿಟ್ಟಿರುವ ಬಗ್ಗೆ ತಿಳಿಸಿದೆ. ಆ ದಿನ ಸಿಗರೇಟು ಸೇದುವುದನ್ನು ಬಿಟ್ಟ ನಾನು ಗಾಂಧೀಜಿ ಬದುಕಿರುವ ತನಕ ಅದನ್ನು ಮುಟ್ಟಿರಲೇ ಇಲ್ಲ. ಇಂಥ ಯಾವೊಬ್ಬ ಮಹತ್ವದ ವ್ಯಕ್ತಿಯ ಬಗ್ಗೆ ಹಾಗೂ



ಅವರ ವಿಚಾರ ಸರಣಿಯ ಬಗ್ಗೆ ಮಾತಾಡುವುದು ಬಲು ದುಃಖದ ಸಂಗತಿ. ನಿಜ ಹೇಳಬೇಕೆಂದರೆ, ಅವರ ಕೊಲೆಯಾದಾಗ ನನಗೆನಿಸಿದ್ದು ಅವರಿಷ್ಟು ಬೇಗ ಹೊರಟುಹೋಗಿ ನನ್ನ ಹಾಗೂ ಈ ರಾಷ್ಟ್ರದ ಜನತೆಯನ್ನು ನಡುನೀರಿನಲ್ಲೇ ಕೈ ಬಿಟ್ಟಂತಾಗಿದೆ. ಮತ್ತೆ, ಇಂಥ ವ್ಯಕ್ತಿಯ ಗೌರವಕ್ಕಾಗಿ ಸಿಗರೇಟ್ ಬಿಡುವುದರಲ್ಲಿ ಏನರ್ಥವಿದೆ? ಇಂಥ ಕೆಲ ಹುಂಬ ಆಲೋಚನೆಗಳು ನನ್ನ ಮನಸ್ಸಿನಲ್ಲಿ ಸುಳಿದವು. ಒಬ್ಬ ಮಹಾವ್ಯಕ್ತಿ ಯಾರಿಂದಲಾದರೂ, ಯಾವುದಾದರೂ ಕೆಲಸ ಮಾಡಿಸಬೇಕಾದರೆ ಅದಕ್ಕೆ ತಕ್ಕ ತರ್ಕವೊಂದನ್ನು ಮಂಡಿಸುತ್ತಾನೆ. ಆ ತರ್ಕಸರಣಿಯ ಬಗ್ಗೆ ಒಪ್ಪಿಗೆಯಿರಲಿ, ಬಿಡಲಿ, ಆ


**ಈ ಕಾಲದ ನಾವೆಲ್ಲ ಕೇವಲ ಒಳ್ಳೆಯ ವಿಚಾರಗಳಿಂದ ಪ್ರೇರಿತವಾಗಿಯೇ ಒಳ್ಳೆಯ ಕೆಲಸ ಮಾಡುತ್ತೇವೆ ಎಂದೇನಿಲ್ಲ. ಸಾಮಾನ್ಯವಾಗಿ ಯಾವುದಾದರೂ ಪ್ರಮುಖ ಪ್ರಭಾವದಿಂದಾಗಿ ಅಂಥ ಕೆಲಸ ಮಾಡುತ್ತೇವೆ. ಯಾರದೊ ವಿಶ್ವಾಸ, ಯಾರದೊ ಅನುಕರಣಕ್ಕಾಗಿಯೂ ಮಾಡುತ್ತೇವೆ.**

ಮಹಾವ್ಯಕ್ತಿಯ ವಿಶ್ವಾಸ, ಪ್ರಭಾವ ಮಾತ್ರದಿಂದ ಒಂದು ಬಗೆಯ ಸ್ವಯಂಶಿಸ್ತು ಆರಂಭಗೊಳ್ಳುವುದುಂಟು, ಇದರ ಒಂದಿಲ್ಲೊಂದು ರೀತಿಯ ಸಂಬಂಧ, ಮಾನವತೆಯ ಪುನರ್ನಿರ್ಮಾಣದೊಡನೆ ಬಂದೇ ಬರುತ್ತದೆ.

ಕೊಂಚ ಸಂಕೋಚದಿಂದಲೇ ಒಪ್ಪಿಕೊಳ್ಳಬೇಕಾದ ಮಾತೆಂದರೆ ಈ ಕಾಲದ ನಾವೆಲ್ಲ ಕೇವಲ ಒಳ್ಳೆಯ ವಿಚಾರಗಳಿಂದ ಪ್ರೇರಿತವಾಗಿಯೇ ಒಳ್ಳೆಯ ಕೆಲಸ ಮಾಡುತ್ತೇವೆ ಎಂದೇನಿಲ್ಲ. ಸಾಮಾನ್ಯವಾಗಿ ಯಾವುದಾದರೂ ಪ್ರಮುಖ ಪ್ರಭಾವದಿಂದಾಗಿ ಅಂಥ ಕೆಲಸ ಮಾಡುತ್ತೇವೆ. ಯಾರದೊ ವಿಶ್ವಾಸ, ಯಾರದೊ ಅನುಕರಣಕ್ಕಾಗಿಯೂ ಮಾಡುತ್ತೇವೆ. ಬಡದೇಶದ ಜನತಾ ಪ್ರತಿನಿಧಿತ್ವ ಪ್ರಾಪ್ತವಾಗಬೇಕಾದರೆ ಸಿಗರೇಟ್ ಸೇದುವುದನ್ನು ಬಿಡುವುದು ಅಗತ್ಯವೆಂದು ಆಗ ನನಗೆನಿಸಿರಲಿಲ್ಲ. ಆದರೆ, ಗಾಂಧೀಜಿ ಬಹುಕಾಲ ಬದುಕಿದ್ದರೆ ಮಾತ್ರ ಅವರ ಪ್ರಭಾದಿಂದಾಗಿ ನಾನು ಸಂಪೂರ್ಣವಾಗಿ ಸಿಗರೇಟ್ ಸೇದುವುದನ್ನು ಬಿಟ್ಟಿರುತ್ತಿದ್ದೆ.

ಗಾಂಧೀಜಿಯವರ ನಿಧನದಿಂದಾಗಿ ನನ್ನ ಮೇಲಾದ ಒಳ್ಳೆಯದೋ ಕೆಟ್ಟದೋ ಪರಿಣಾಮವೆಂದರೆ ನಾನಿನ್ನು ನನ್ನ ಮನಸ್ಸಿಗೆ ಬಂದಂತೆ ಏನನ್ನು ಮಾಡುವುದಕ್ಕೂ ಸ್ವತಂತ್ರ ಎಂಬ ಭಾವನೆ ಮೂಡಿಸಿಕೊಂಡದ್ದು, ಅವರು ಜೀವಿಸಿದ್ದಾಗ ನನ್ನ ಮೇಲೊಂದು ಪ್ರೀತಿಯ ಅಂಕುಶವಿದೆಯೆಂದೇ ನನಗೆ ಸದಾ ಕಾಲ ಭಾಸವಾಗುತ್ತಿತ್ತು. ಆದರೆ ಯಾರೂ ಬಹಳಷ್ಟು ಅವಿವೇಕದ ಮಾತುಗಳನ್ನಾಡುವುದು ಸರಿಯಲ್ಲ. ನನ್ನಲ್ಲಿ ಅದೇ ಭಾವನೆಯಿತ್ತು. ನಾನು ಗಾಂಧೀಜಿಯವರಿಗೆ ಹೆದರಿಕೊಂಡೇ ಇರುತ್ತಿದ್ದೆನೆಂದು ಇದರರ್ಥವಲ್ಲ. ಒಮ್ಮೊಮ್ಮೆ ಅವರೊಡನೆ ಮಾತಾಡುತ್ತಿರುವಾಗ ತುಂಬ ಬಿರುಸಾದ ಮಾತುಗಳನ್ನೂ ನಾನು

**ಗಾಂಧೀಜಿಯವರ ನಿಧನದಿಂದಾಗಿ ನನ್ನ ಮೇಲಾದ ಒಳ್ಳೆಯದೋ ಕೆಟ್ಟದೋ ಪರಿಣಾಮವೆಂದರೆ ನಾನಿನ್ನು ನನ್ನ ಮನಸ್ಸಿಗೆ ಬಂದಂತೆ ಏನನ್ನು ಮಾಡುವುದಕ್ಕೂ ಸ್ವತಂತ್ರ ಎಂಬ ಭಾವನೆ ಮೂಡಿಸಿಕೊಂಡದ್ದು, ಅವರು ಜೀವಿಸಿದ್ದಾಗ ನನ್ನ ಮೇಲೊಂದು ಪ್ರೀತಿಯ ಅಂಕುಶವಿದೆಯೆಂದೇ ನನಗೆ ಸದಾ ಕಾಲ ಭಾಸವಾಗುತ್ತಿತ್ತು.**



ಸಹಜವಾಗಿ ಬಳಸುತ್ತಿದ್ದೆ. ಹಾಗೆ ಮಾತಾಡುವಾಗ ನನಗೆ ಎಳ್ಳಷ್ಟೂ ಭಯವೆನಿಸುತ್ತಿರಲಿಲ್ಲ. ಅದರ ಒಂದೇ ಮುಖ್ಯ ಕಾರಣವೆಂದರೆ ಅವರು ಬದುಕಿರುವವರೆಗೆ ನಾನು ಬಹಳ ಕೆಟ್ಟವನೆಂದೆನಿಸಿಕೊಳ್ಳಬಾರದೆಂಬ ಬಯಕೆ.

ಗಾಂಧೀಜಿಯವರೊಡನೆ ಮಾತಾಡುವಾಗ ನನ್ನ ಬಾಯಿಂದ ಬಿರುಸು ಮಾತುಗಳೂ ಹೊರಡುತ್ತಿದ್ದವೆಂದು ಹೇಳಿದೆನಷ್ಟೆ. ಅಂಥ ಒಂದು ವಿಚಿತ್ರ ಘಟನೆಯನ್ನಿಲ್ಲಿ ನಿರೂಪಿಸುತ್ತೇನೆ. ಗುಪ್ತಚರ ವಿಭಾಗದವರು ಆಂಗ್ ಸಾಂಗ್‌ರಂತೆ ಭಾರತ ಸರ್ಕಾರವನ್ನು ಉರುಳಿಸುವ ಸನ್ನಾಹದಲ್ಲಿ ನಾನಿದ್ದೇನೆಂಬ ಕಥೆಯನ್ನು ಸೃಷ್ಟಿಸಿದರು. ಆಂಗ್ ಸಾಂಗ್ ಬರ್ಮಾದ ಪ್ರಧಾನಿಯಾಗಿದ್ದರು. ಅವರ ಹಾಗೂ ಅವರ ಅನೇಕ ಮಂತ್ರಿಗಳ ಹತ್ಯೆ ಆಗ ನಡೆದಿತ್ತು. ಇದೇ "ಅಂಗ್ ಸಾಂಗ್ ಪದ್ಧತಿ" ಯಿಂದ ನಾನು ಭೂಗತ ಆಂದೋಲನದ ಮೂಲಕ ಭಾರತ ಸರ್ಕಾರದ ಮಂತ್ರಿಗಳ ಹತ್ಯೆ ನಡೆಸುವ ವಿಚಾರದಲ್ಲಿರುವುದಾಗಿ, ನಾಗಪುರದ ಗುಪ್ತಚರ ಪೊಲೀಸರು ವರದಿ ಮಾಡಿದ್ದರು. ನಾನೊಂದು ದಿನ ಗಾಂಧೀಜಿಯವರ ಕೋಣೆಯನ್ನು ಪ್ರವೇಶಿಸುತ್ತಿರುವಾಗಲೇ ಅಲ್ಲಿಂದ ಹೊರಬೀಳುತ್ತಿದ್ದ ಸರ್ದಾರ ಪಟೇಲರು ತಡೆದು ನಿಂತು, "ನೀನು ನಮ್ಮನ್ನೆಲ್ಲ ಮುಗಿಸಿಬಿಡುವುದು ಯಾವಾಗ ?" ಎಂದು ನನ್ನನ್ನು ಕೇಳಿದರು. ಗುಪ್ತಚರ ವಿಭಾಗದ ವರದಿಯ ಸತ್ಯಾಸತ್ಯತೆಯ ಬಗೆಗೆ ವಿಚಾರ ಮಾಡದೆ, ಗೃಹ ಮಂತ್ರಿಗಳು ಆ ಮಾತು ಹೇಳಿದ್ದರು. ನಾನು ಚೇಷ್ಟೆಯ ದನಿಯಲ್ಲೇ, " ನಮಗಿನ್ನೂ ಅಷ್ಟು ಶಕ್ತಿಸಂಚಯ ಆಗಿಲ್ಲ; ಆದರೆ ನಿಮ್ಮನ್ನು ಪಕ್ಕಕ್ಕೆ ತಳ್ಳಿ ನಿಮಗಿಂತ ಅಯೋಗ್ಯರು ನಿಮ್ಮ ಸ್ಥಾನಗಳಿಗೆ ಬರದಂತೆ ನೋಡಿಕೊಳ್ಳಲು ನನ್ನ ಸರ್ವಶಕ್ತಿಯನ್ನೂ ಬಳಸುತ್ತಿದ್ದೇನೆ " ಎಂದು ಹೇಳಿದೆ. ಯೋಗಾಯೋಗವೆಂಬಂತೆ, ಒಂದೆರಡು ದಿನಗಳಲ್ಲೇ ಇದೇ ಮಾತನ್ನು ಮತ್ತೆ ಬಲು ಗಂಭೀರವಾಗಿ ವಿವರಿಸುವ ಸನ್ನಿವೇಶ ಬಂತು. ನನ್ನ ಮಾತು ಕೇಳಿ, ಗಾಂಧೀಜಿಯವರು ಗುಪ್ತಚರ ವಿಭಾಗದ ವರದಿಯ ವಿಷಯವನ್ನು ನನಗೆ ತಿಳಿಸಿದರು. "ನೀವು ಅಂಥ ಆಲೋಚನೆ ಮಾಡಿದ್ದು ನಿಜವೇ?" ಎಂದು ಅವರು ನನ್ನನ್ನು ಕೇಳಿದರು: ಬ್ರಿಟಿಷ್ ಆಡಳಿತದ ಕಾಲದಲ್ಲೂ ಸಾರಿಗೆ– ಸಾಗಾಣಿಕೆ ನಿಲ್ಲಿಸುವ, ಸುಡುವ, ಬುಡಮೇಲು ಮಾಡುವ, ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ನಾಶಗೊಳಿಸುವ ಹಾಗೂ ಜನರ ಪ್ರಾಣಾಪಾಯಕ್ಕೆ ಕಾರಣವಾಗುವ ಯಾವುದೇ ವಿನಾಶಕಾರಿ ಚಟುವಟಿಕೆಗಳಿಂದ ನಾನು ಹರಿದಾರಿ ದೂರವಿದ್ದ ಸಂಗತಿಯನ್ನು ಅವರಿಗೆ ನೆನಪಿಸಿಕೊಟ್ಟೆ. 1942–43 ರ ಅವಧಿಯಲ್ಲಿ ಬ್ರಿಟಿಷರ ವಿರುದ್ಧ ತೀವ್ರ ಸಂಘರ್ಷಕ್ಕೆ ಇಳಿದಾಗಲೂ ಇಂಥ ವಿನಾಶಕಾರಿ ಕೆಲಸಗಳಿಗೆ ನಾನು ಕೈ ಹಾಕಿರಲಿಲ್ಲ.

ಗಾಂಧೀಜಿಯವರ ಎದುರು ಮಾತಾಡಲು ಬೇಕಾದಷ್ಟು ಸ್ವಾತಂತ್ರ್ಯವಿರುತ್ತಿತ್ತು. ಯಾವ ಸಂಕೋಚವಿಲ್ಲದ, ಯಾವುದೇ ಬಗೆಯ ಅಂಜಿಕೆಯಿಲ್ಲದ ಸಂಪೂರ್ಣ ಸ್ವಾತಂತ್ರ್ಯ ಅದು. ಇದಕ್ಕಿಂತ ವಿಶಾಲವಾದ ತುಂಬು ಮನಸ್ಸಿನ ಮತ್ತೊಬ್ಬ ವ್ಯಕ್ತಿ ನನಗೆ ಗೊತ್ತಿಲ್ಲ. ಇತರರೊಡನೆ ಮಾತಾಡುವಾಗ ನಾನು ತುಂಬ ಎಚ್ಚರಿಕೆಯಿಂದಿರುತ್ತಿದೆ. ಆದರೆ, ಗಾಂಧೀಜಿಯವರೊಡನೆ ಮುಕ್ತವಾಗಿ ಮಾತಾಡುತ್ತಿದ್ದೆ. ಯಾಕೆಂದರೆ, ಅವರು ನನ್ನೊಳಗಿದ್ದುದೆಲ್ಲವೂ ಬಯಲಿಗೆ ಬರುವಂತೆ ಮಾಡುತ್ತಿದ್ದರು. ನನ್ನ ಸ್ಪಷ್ಟ ಹಾಗೂ ತೀಕ್ಷ್ಣ ಮಾತುಗಳೇ ನನ್ನ ಆಸ್ತಿಯೆನಿಸಿತ್ತು. ಅದು ಒಳ್ಳೆಯದರಿಲಿ, ಕೆಟ್ಟದ್ದಾಗಿರಲಿ, ನನ್ನ ನಡೆ–ನುಡಿಗಳೆಲ್ಲ ಭಯರಹಿತವಾಗಿರುತ್ತಿದ್ದವು. ಯಾಕೆಂದರೆ, ಅವರು ಭಾರತದ ರಕ್ಷಕರಾಗಿದ್ದುಕೊಂಡು ನಮ್ಮೆಲ್ಲ ಚಟುವಟಿಕೆಗಳ ಮೇಲೆ ಸದಾ ನಿಗಾ ಇಡುತ್ತಿದ್ದರು. ಒಂದು ವೇಳೆ ಜಗತ್ತಿನ ಪ್ರತಿ ರಾಷ್ಟ್ರಕ್ಕೂ ಇಂಥವನೊಬ್ಬ ರಕ್ಷಕ ದೊರಕಿದ್ದರೆ! ಇಷ್ಟು ಯೋಗ್ಯತೆಯ ರಕ್ಷಕರು ಸಿಗುವುದೇ ಕಷ್ಟ: ಯಾಕೆಂದರೆ, ಇಂಥವರು ಹುಟ್ಟಿ ಬರುವುದೇ ಅನೇಕ ಶತಮಾನಗಳಿಗೊಮ್ಮೆ ಮಾತ್ರ! ಎಲ್ಲರ ಗೌರವಕ್ಕೆ ಪಾತ್ರನಾಗಿ, ತನ್ನ ಜನರ ಕೆಲಸ ಕಾರ್ಯಗಳಲ್ಲಿ ಅಂಕುಶವಾಗಿ ನಿಲ್ಲಬಲ್ಲ ರಕ್ಷಕನು ವಿರಳರಲ್ಲಿ ವಿರಳನೇ ಸರಿ!.

ಒಮ್ಮೆ ಗಾಂಧೀಜಿ ನನಗೊಂದು ಪ್ರಶ್ನೆ ಕೇಳಿದರು: " ನೀನು ದೇವರಲ್ಲಿ ನಂಬಿಕೆಯಿಟ್ಟಿದ್ದೀಯ?" ನಿಜ ಹೇಳಬೇಕೆಂದರೆ, ಇಂಥ ಪ್ರಶ್ನೆಗಳ ಕಾಲ ಮೀರಿ ಹೋಗಿತ್ತು. ಯಾಕೆಂದರೆ ನಾನು ಅನೇಕ ವರ್ಷಗಳಿಂದ ಗಾಂಧೀಜಿಯವರನ್ನು ಬಲ್ಲವನಾಗಿದ್ದೆ. ಆ ಮೊದಲೆಂದೂ ಅವರು ಇಂಥ ಪ್ರಶ್ನೆಯನ್ನು ಕೇಳಿರಲಿಲ್ಲ. ನಾನು ಅವರಿಗೆ ಕೇಳಬೇಕೆಂದುಕೊಂಡಿದ್ದ ಅನೇಕ ಪ್ರಶ್ನೆಗಳನ್ನು ನಾನೂ ಕೇಳಲಿಲ್ಲ. ಯಾಕೆಂದರೆ ಅವರು ಸದಾಕಾಲ ಜೀವಿಸಿರುತ್ತಾರೆಂದು ನಾನು ಮೂರ್ಖನಂತೆ ಭಾವಿಸಿಕೊಂಡಿದ್ದೆ! ನಾನು ಯಾವುದೇ ಪ್ರಶ್ನೆ ಕೇಳಬಹುದಿತ್ತು ಎಂದೇನಲ್ಲ. ಯಾಕೆಂದರೆ ನನ್ನ ಪರಿಚಯದ ಹುಡುಗಿಯೊಬ್ಬಳ ಹೆಗಲಮೇಲೆ ಕೈಯಿಡಬಹುದೇ? ಬೇಡವೇ? ಎಂಬಂಥ ಕ್ಷುಲ್ಲಕ ಪ್ರಶ್ನೆಗಳ ಬಗ್ಗೆ ಗಾಂಧೀಜಿಯವರ ಮಾರ್ಗದರ್ಶನದ ಅವಶ್ಯಕತೆ ನನಗೆಂದೂ ಭಾಸವಾಗಲಿಲ್ಲ. ಇಂಥ ವಿಷಯಗಳ ಬಗ್ಗೆ ಅವರ ಅಭಿಪ್ರಾಯ ಕೇಳುತ್ತ ಕುಳಿತುಕೊಳ್ಳುವ ವ್ಯಕ್ತಿ ನಾನಲ್ಲ. ಒಂದು ವೇಳೆ ಮಾಡುವುದು ಉಚಿತವೆನಿಸಿದರೆ ನಾನು ಅಗತ್ಯವಾಗಿ ಹಾಗೆ ಮಾಡುತ್ತಿದ್ದೆ. ಇರಲಿ, ಗಾಂಧೀಜಿ ನನ್ನನ್ನು ಕೇಳಿದ ಪ್ರಶ್ನೆ: "ನೀವು ದೇವರ ಮೇಲೆ ವಿಶ್ವಾಸವಿಡುವಿರಾ?" ಅದಕ್ಕೆ ನಾನು ಕೊಟ್ಟ ಉತ್ತರ: "ಇಲ್ಲ! "







" ನೀನು ದೇವರಲ್ಲಿ ವಿಶ್ವಾಸವಿಲ್ಲದವನಾಗಿದ್ದರೆ, ನೀನೆಂದಾದರೂ ಒಳ್ಳೆಯ ಸತ್ಯಾಗ್ರಹಿಯಾಗಬಲ್ಲೆಯಾ?" ಎಂದು ಗಾಂಧೀಜಿಯವರು ಶಂಕೆಯಿಂದ ಪ್ರಶ್ನಿಸಿದರು. ಮರುಕ್ಷಣವೇ ಅವರು, ಯಾರಿಗೆ ಗೊತ್ತು, ದೇವರನ್ನು ನಂಬದವರೂ ನಾಳೆ ತಮ್ಮದೇ ಆದ ರೀತಿಯಲ್ಲಿ ಸತ್ಯಾಗ್ರಹ ಕೈಗೊಳ್ಳಲೂಬಹುದು" ಎಂದು ಹೇಳಿದರು. ಆ ಪ್ರಶ್ನೆಯನ್ನು ಅವರು ಅಲ್ಲಿಯೇ ಬಿಟ್ಟುಬಿಟ್ಟರು. ಮತ್ತೆಂದೂ ಅದನ್ನೆತ್ತಲಿಲ್ಲ. ಇದು ಸಣ್ಣದಾದರೂ ನಿರ್ಣಾಯಕ ಸ್ವೀಕೃತಿಯಾಗಿತ್ತು. ಪ್ರತಿಯೊಬ್ಬರದೂ ತಮ್ಮದೇ ಆದ ವಿಧಾನವಿರುತ್ತದೆಂದು ಯಾರಿಗೆ ತಾನೇ ಗೊತ್ತಿಲ್ಲ! ನಾನು ಮಾತ್ರ ಸ್ಪಷ್ಟವಾಗಿಯೇ ಹೇಳಿದ್ದೆ: ನಾನು ದೇವರನ್ನು ನಂಬುವವನಲ್ಲ. ದೇವರನ್ನು ನಂಬುವವರಿಗಿಂತ ನಾನು ಶ್ರೇಷ್ಠನೆಂದು ತಿಳಿದುಕೊಳ್ಳುವಷ್ಟು ಭ್ರಮೆಯೂ ನನಗಿಲ್ಲ. ಪ್ರತಿಯೊಬ್ಬರದೂ ಒಂದೊಂದು ವಿಧಾನ. ದೇವರನ್ನು ನಂಬಿರುವ ಸಾಧಾರಣ ಜನರನ್ನೂ ನಾನು ಕಂಡಿದ್ದೇನೆ. ಅಂಥವರು ದೇವಸ್ಥಾನ, ಮಸೀದಿ, ಚರ್ಚುಗಳಿಗೆ ಹೋಗಿ ಶಾಂತಿ ಪಡೆಯುವುದುಂಟು. ಅವರಿಗೆ ನಾನೆಂದೂ ಅಡ್ಡಿಮಾಡುವವನೂ ಅಲ್ಲ. ಯಾಕೆಂದರೆ ಹಾಗೆ ಮಾಡುವುದರಿಂದ ಅವರ ಮುಖಗಳ ಮೇಲೆ ಮೂಡುವ ಶಾಂತಿಯನ್ನು ಪ್ರಾಯಶಃ ಬೇರಾವ ರೀತಿಯಿಂದಲೂ ನಾನು ಅವರಿಗೆ ಕೊಡಲಾರೆ. ಪರಿಸ್ಥಿತಿ ಹೀಗಿರುವಾಗ ಅವರನ್ನು ತಡೆಯಲು ನಾನು ಯಾರು?.

**ಅವರು ಭಾರತದ ರಕ್ಷಕರಾಗಿದ್ದುಕೊಂಡು ನಮ್ಮೆಲ್ಲ ಚಟುವಟಿಕೆಗಳ ಮೇಲೆ ಸದಾ ನಿಗಾ ಇಡುತ್ತಿದ್ದರು. ಒಂದು ವೇಳೆ ಜಗತ್ತಿನ ಪ್ರತಿ ರಾಷ್ಟ್ರಕ್ಕೂ ಇಂಥವನೊಬ್ಬ ರಕ್ಷಕ ದೊರಕಿದ್ದರೆ! ಇಷ್ಟು ಯೋಗ್ಯತೆಯ ರಕ್ಷಕರು ಸಿಗುವುದೇ ಕಷ್ಟ: ಯಾಕೆಂದರೆ, ಇಂಥವರು ಹುಟ್ಟಿ ಬರುವುದೇ ಅನೇಕ ಶತಮಾನಗಳಿಗೊಮ್ಮೆ ಮಾತ್ರ!**



ನಾನು ದೇವರಲ್ಲಿ ನಂಬಿಕೆಯಿಲ್ಲದವನೇನೋ ನಿಜ. ಆದರೆ ಎಷ್ಟೋ ಕಲಾತ್ಮಕ ಕಲ್ಪನೆಗಳು ನನ್ನ ಮನಮಿಡಿಯುತ್ತವೆ ಉದಾ: ಶಿಲುಬೆಯ ಮೇಲಿರುವ ಯೇಸುವಿನ ಕಲ್ಪನೆಯು ಲಕ್ಷಗಟ್ಟಲೆ, ಕೋಟಿಗಟ್ಟಲೆ ಕ್ರಿಶ್ಚಿಯನ್ ರಂತೆಯೇ ನನ್ನ ಮನವನ್ನೂ ಸೆಳೆಯುತ್ತದೆ. ಹ್ಯಾಮ್ಲೆಟ್ ಹಾಗೂ ಜೂಲಿಯೆಟ್‌ರು ನನ್ನ ಮನ ಮಿಡಿಯಬಹುದಾದರೆ ಹುಸೇನ್ ಮತ್ತು ಏಸು ನನ್ನ ಮನ ಸೆಳೆಯಬಾರದೇಕೆ? ಅದರಂತೆಯೇ ರಾಮ, ಕೃಷ್ಣ ಮತ್ತು ಶಿವ ಕಲ್ಪನೆಯೂ ನನಗೆ ಆಕರ್ಷಣೀಯವೆನಿಸುತ್ತದೆ. ಆ ಶಿವನಂತೂ ಎಲ್ಲರಿಗಿಂತ ಹೆಚ್ಚಿಗೆ! ಔಚಿತ್ಯಪೂರ್ಣ ಕೆಲಸಗಳನ್ನು ಮಾಡಿದವರ ಚಮತ್ಕಾರಗಳ ಬಗ್ಗೆ ನಿನ್ನೆ ತಾನೆ ಒಬ್ಬರು ವಿಚಾರಿಸಿದರು. ಅವರ ಯಾವ ಕೆಲಸಕ್ಕೂ ಇನ್ನೊಬ್ಬರ ಸಮರ್ಥನೆ ಬೇಕಿಲ್ಲ.

ದೇವರಲ್ಲಿ ನಂಬಿಕೆಯಿರಲಿ ಬಿಡಲಿ, ಇಂಥ ಕಲಾಪೂರ್ಣ ಕಲ್ಪನೆಗಳು ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಿಯೇ ತೀರುತ್ತದೆ.

ಕಲ್ಕತ್ತಾದಲ್ಲಿ ಹಿಂದೂ ಮತ್ತು ಮುಸ್ಲಿಮರ ನಡುವೆ ದಂಗೆಗಳು ಆದಾಗ, ಗಾಂಧೀಜಿಯವರು ಉಪವಾಸ ಕೈಗೊಂಡ ಸಂದರ್ಭದ ಬಗೆಗೂ ನಿವೇದಿಸ ಬಯಸುತ್ತೇನೆ: ಭಾರತವು ಸ್ವತಂತ್ರ್ಯವಾಗಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಒಂದು ಮಾತು ಸ್ಪಷ್ಟವಾಗಿದೆ. ಅದೆಂದರೆ ಗಾಂಧೀಜಿಯವರ ಮನೆಯು ಬಂಗಾಳ ಸರ್ಕಾರದ ಗುಪ್ತಚರ ಕೇಂದ್ರಕ್ಕಿಂತಲೂ ದೊಡ್ಡ ವಾರ್ತಾಕೇಂದ್ರದಂತಿತ್ತು . ಒಂದು ಸಲ ಬಂಗಾಳದ ಮುಖ್ಯಮಂತ್ರಿಗಳು ದಂಗೆಯ ಬಗ್ಗೆ ಬಲು ಹುರುಪಿನಿಂದ ಗಾಂಧೀಜಿಯವರಿಗೆ ವಿವರಿಸಲು ಆರಂಭಿಸಿದ್ದರು. ಆದರೆ, ಆ ಸನ್ನಿವೇಶದ ಬಗೆಗೆ ನಮಗೆ ನಾಲ್ಕೈದು ಗಂಟೆಗಳ ಮೊದಲೇ ಮಾಹಿತಿ ಸಿಕ್ಕಿ ಹೋಗಿತ್ತು. ನನಗೆ ಬಲು ವಿಚಿತ್ರವೆನಿಸಿತು. ತಡೆಯಲಾಗಲಿಲ್ಲ. ಇಂಥ ಸನ್ನಿವೇಶಗಳಲ್ಲಿ ಗಾಂಧೀಜಿಯವರ ಮುಖದ ಮೇಲೊಂದು ಮಂದಹಾಸ ಅರಳಿ ನಿಲ್ಲುತ್ತಿತ್ತು. ಆದರೆ ಒಮ್ಮಿಂದೊಮ್ಮೆಲೇ ಪರಿಸ್ಥಿತಿ ಬಲು ಗಂಭೀರವಾಯಿತು. ದಂಗೆಯಲ್ಲಿ ಲೈಸನ್ಸ್ ಇಲ್ಲದೆ ಬಳಸಲಾಗುತ್ತಿದ್ದ ಶಸ್ತ್ರಗಳನ್ನೆಲ್ಲ ಒಪ್ಪಿಸಿಬಿಡುವುದದಾದರೆ, ಗಾಂಧೀಜಿಯವರು ಪ್ರಾಯಶಃ ಬಲು ಬೇಗ ತಮ್ಮ ಉಪವಾಸ ನಿಲ್ಲಿಸಬಹುದೆಂದು ನನಗೆ ತಿಳಿಸಲಾಯಿತು. 1942 ಚಳವಳಿಯ ಕಾಲದ ಕೆಲವು ಶಸ್ತ್ರಗಳೂ ಅದರಲ್ಲಿದ್ದುವೆಂದು ನನಗೆ ಗೊತ್ತಿತ್ತು. ಈಗಲೂ ಅವುಗಳ ಬಳಕೆ ನಡೆದಿತ್ತು. ಇವುಗಳನ್ನು ಬಳಸುವ ಜನರು ಮೊದಲಿನ ರಾಷ್ಟ್ರೀಯ ಸಂಘರ್ಷದಿಂದ ಧಾರ್ಮಿಕ ಸಂಘರ್ಷಕ್ಕೆ ಇಳಿದಿದ್ದರು. ಅವರಲ್ಲಿ ಕೆಲವರಾದರೂ ಈಗಲೂ ನನ್ನ ಮಾತು ಕೇಳುವ ಸಾಧ್ಯತೆಯಿತ್ತು. ಅದೂ ಮುಖ್ಯವಾಗಿ ಇಂಥ ಅಪತ್ಕಾಲದಲ್ಲಿ. ಅವರೆಲ್ಲ ತಮ್ಮ ತಮ್ಮ ರೀತಿಯಲ್ಲಿ ಧೈರ್ಯಶಾಲಿಗಳೇ ಆಗಿದ್ದರು.

ಇಂಥ ಕೆಲವು ರಾಜಕೀಯ ಕಾರ್ಯಕರ್ತರು ನನಗೀಗಲೂ ಪರಿಚಿತರಾಗಿದ್ದರು. ಅಂತೆಯೇ ಶಸ್ತ್ರಗಳನ್ನು ಒಪ್ಪಿಸುವ ಸೂಚನೆ ಮುಂದೆ ಬಂದೊಡನೆ, ತಕ್ಷಣ ನನ್ನ ಪರಿಚಯದ ಪ್ರಭಾವವನ್ನು ಬಳಸಿ ಕೆಲಸ ಸಾಧಿಸಬೇಕೆಂದು ನಿರ್ಧರಿಸಿದೆ. ಮೊದಲು ಭೇಟಿಯಾದ ಜನವರು ಶಸ್ತ್ರಾಸ್ತ್ರಗಳನ್ನು ಹುಡುಕಿದರೂ ಬೇಗ ಸಿಗಲಿಕ್ಕಿಲ್ಲ. ಎಂದು ಸ್ಪಷ್ಟವಾಗಿ ಹೇಳಿದರು. 1942 ರ ಅವಧಿಯಲ್ಲಿ ನನ್ನ ನೇತೃತ್ತದಲ್ಲಿ ಕೆಲಸ ಮಾಡಿದವರಲ್ಲಿ ಜಗಮೋಹನ್‌ಬೋಸ್ ಎಂಬ ಯುವಕನಿದ್ದ. ಅವನನ್ನು ' ಜಗ್ಗೂ' ಎಂದೇ ನಾನು ಕರೆಯುತ್ತಿದ್ದೆ. ನಾನು ಈ ಗೆಳೆಯನನ್ನು ಕಂಡು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಹಾಗೂ ಒಪ್ಪಿಸುವ ವಿಷಯವಾಗಿ ಮಾತಾಡಿದೆ. ಈ ಕೆಲಸಕ್ಕಾಗಿ ಆತ ಬೇರೊಬ್ಬವ್ಯಕ್ತಿಯ ಹೆಸರು ಸೂಚಿಸಿದ. ಜಗ್ಗೂ ಬಲು ಸ್ಪಷ್ಟವಾಗಿ "ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವುದು ಅಷ್ಟೊಂದು ಅಗತ್ಯವೆ? ಅಥವಾ ಗಾಂಧೀಜಿಯವರ ಜೀವನಕ್ಕೂ ಇದಕ್ಕೂ ನೇರವಾದ ಸಂಬಂಧವಿದೆಯೋ? ಎಂದು ಆತ ಕೇಳಿದ. ನಾನೆಂದೆ: " ಹೌದು." ಸರಿ ಅವರು ತನ್ನ ಮನಸ್ಸಿನಲ್ಲಿ ನಿಶ್ಚಯಮಾಡಿಯೇಬಿಟ್ಟ.

ಈ ಕೆಲಸದ ಬಗ್ಗೆ ಮಾತಾಡಲು, ಕತ್ತಲಾದ ಬಳಿಕ ಬೇರೊಬ್ಬ ಗೆಳೆಯನ ಬಳಿಗೆ ನನ್ನನ್ನು ಕರೆದೊಯ್ಯುವುದಾಗಿ ಜಗ್ಗೂ ಹೇಳಿದ. ಆತ ನನ್ನನ್ನು ಒಂದು ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು, ಎಲ್ಲೆಲ್ಲೋ ಸುತ್ತಾಡಿಸಿ, ಕೊನೆಗೊಂದು ಅಜ್ಞಾತ ಸ್ಥಳಕ್ಕೆ ಕರೆದೊಯ್ದ. ಅಲ್ಲಿಂದ ಲಿಫ್ಟ್ ಮೂಲಕ ಒಂದು ಕಟ್ಟಡದ ಮೇಲಂತಸ್ತಿಗೆ ಅಲ್ಲಿರುವ ವ್ಯಕ್ತಿಯೂ ನಮ್ಮ ಕೆಲಸಕ್ಕೆ ಬರುವಂಥವನೇ ಎಂದು ನನಗೆ ಅನ್ನಿಸಿತು. ಸ್ವಲ್ಪ ಹೊತ್ತಿನ ಮೇಲೆ ಒಬ್ಬ ವ್ಯಕ್ತಿ ಹೊರಬಂದ. ನನ್ನ ಜೀವನದಲ್ಲಿ ಮೊದಲೆಂದೂ ಕಾಣಲು ಸಿಗದಂಥ ವಿಲಕ್ಷಣ ವ್ಯಕ್ತಿ. ಆತ ಚೀಣಿ ಕಥೆಗಳಲ್ಲಿನ ಪಾತ್ರದಂತಿದ್ದ.





ಅವನನ್ನು ಕಂಡೊಡನೆ ಮೈ ಮೇಲಿನ ರೋಮಗಳು ಎದ್ದು ನಿಲ್ಲುವ ಹಾಗೆನಿಸಿತು? ಆ ವ್ಯಕ್ತಿ ಗುಂಡು ಹೊಡೆದಂತೆ ನನಗೆ ಪ್ರಶ್ನೆ ಹಾಕಿದ : "ನೀವೆಲ್ಲ ಬಂದದ್ದು ಯಾತಕ್ಕಾಗಿ?" ನಾನೆಂದೆ: " ನನ್ನನ ಇಲ್ಲಿ ಕರೆತಂದದ್ದು ಯಾತಕ್ಕಾಗಿ ಎಂದು ನನಗೂ ಗೊತ್ತಾಗಬೇಕು." ಆ ನಂತರ ಆತ ಭ್ರಾಮಕ ರಾಷ್ಟ್ರೀಯತೆಯ ಮೇಲೆ ತನ್ನ ಶಬ್ಧಪ್ರಹಾರಗೈದ." ನೀವು ಮುಸಲ್ಮಾನರಿಗೆ ನೆರವು ನೀಡುವ ಹಾಗೂ ಹಿಂದೂಗಳಿಗೆ ನಷ್ಟವುಂಟುಮಾಡುವ ದೋಷವೆಸಗುತ್ತೀರಿ" ಎಂದು ವಿವರಿಸಿದ. ಒಂದು ವೇಳೆ ಎಲ್ಲ ಶಸ್ತ್ರಗಳನ್ನು ಒಪ್ಪಿಸಿ ಬಿಟ್ಟರೆ, ಹಿಂದೂಗಳಿಗೆ ಮತ್ತೆ ಬೇಕೆನಿಸಿದರೆ ತರುವುದೆಲ್ಲಿಂದ? ಎಂದು ಆತ ಕೇಳಿದ. ಕೈ ಹಾಗೂ ಮನಸ್ಸು ಚೆನ್ನಾಗಿದ್ದರೆ, ಯಾವಾಗ ಬೇಕಾದರೂ ಶಸ್ತ್ರಾಸ್ತ್ರಗಳು ದೊರೆಯುತ್ತವೆಂದೂ ಅಥವಾ ಶಸ್ತ್ರಾಸ್ತ್ರಗಳಿಲ್ಲದೆಯೇ ಹೋರಾಡಬಹುದೆಂದು ನಾನು ಹೇಳಿದೆ. ಆ ವ್ಯಕ್ತಿಯ ತುಟಿಗಳ ಮೇಲೆ ನವಿರಾದ ಮುಗುಳು ನಗೆ ಮೂಡಿತು. ಜಗ್ಗೂ ನನ್ನ ಪಕ್ಕದಲ್ಲೇ ಇದ್ದ. ಅದೇ ರಾತ್ರಿ ನಾವು ಒಂದು ಸ್ಟೆನ್‌ಗನ್, ಕೆಲವು ಕೈಗುಂಡು ಹಾಗೂ ಮತ್ತಿತರ ವಿಸ್ಫೋಟಕ ಅಸ್ತ್ರಗಳನ್ನು ಒಟ್ಟುಗೂಡಿಸಿದೆವು.

ಒಪ್ಪಿಕೊಂಡ ಕೆಲಸ ಮುಗಿಯುತ್ತಲೇ ನಾನು ಸಾಮಾನ್ಯವಾಗಿ ಹಿಂದೆ ಸರಿದುಬಿಡುತ್ತೇನೆ. ನನ್ನ ಮಿತ್ರರು ಆ ಆಯುಧಗಳನ್ನೊಯ್ದು ಗಾಂಧೀಜಿಯವರ ವಶಕ್ಕೊಪ್ಪಿಸಿದರು. ನಾನು ಹೊರಗೇ ನಿಂತುಕೊಂಡಿದ್ದೆ. ಆಗ ಮಧ್ಯರಾತ್ರಿಯ ಅಚೀಚೆಯ ಸಮಯ. ಗಾಂಧೀಜಿಯವರು ಮಲಗಿರಬಹುದೆಂದು ನಾನು ಭಾವಿಸಿದ್ದೆ. ನಾವು ಸಮಾಧಾನದ ನಿಟ್ಟಿಸಿರು ಬಿಡುತ್ತ, ಮೋಟಾರಿನಲ್ಲಿ ಕುಳಿತು ಮರಳಿ ಹೊರಟೆವು. ನಾವು ಸುಮಾರು ಎಂಟು ಮೈಲಿಗಳಷ್ಟು ದೂರ ಸಾಗಬೇಕಿತ್ತು. ಕೈಗುಂಡುಗಳು ಯಾವ ಕ್ಷಣದಲ್ಲೂ ಸ್ಫೋಟಗೊಳ್ಳಬಲ್ಲವೆಂದು ನಡುದಾರಿಯಲ್ಲಿ ನೆನಪಾಯಿತು. ನಾವು ಮತ್ತೆ ಮರಳಿ ಹೋದೆವು. ನನ್ನ ಮಿತ್ರರು ಮತ್ತೆ






ಗಾಂಧೀಜಿಯವರ ಕೋಣೆ ಒಳಹೊಕ್ಕು ಆ ಎಲ್ಲ ಕೈಬಾಂಬ್‌ಗಳನ್ನು ನೀರಿನ ಬಾಟಲಿಗಳಲ್ಲಿ ಹಾಕಿಟ್ಟರು.

ದೆಹಲಿಯಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ಏಕತೆಯ ಕೆಲಸ ಬಲು ಕಠಿಣವಾಗಿತ್ತು. ಏಕತೆಯ ವಿಷಯವಾಗಿ ವಿಚಾರ ವಿನಿಮಯ ಮಾಡಲು ನಾನು ಇನ್ನೂರು– ಮುನ್ನೂರು ಆಯ್ದ ಹಿಂದೂಗಳು ಮತ್ತು ಮುಸಲ್ಮಾನರನ್ನೂ, ಸಿಖ್ಖರನ್ನೂ ಕಲೆ ಹಾಕುವುದಾಗಿ ಗಾಂಧೀಜಿಯವರಿಗೆ ಹೇಳಿದೆ. ಆ ಸಭೆಯಲ್ಲಿ ಅವರೂ ಉಪಸ್ಥಿತಿರಿರಬೇಕು ಎಂದು ಕೇಳಿಕೊಂಡೆ. ಗಾಂಧೀಜಿ ಆಗಲಿ ಎಂದರು.

ನಾನು ಮೂರೂ ಸಂಪ್ರದಾಯಗಳ ಜನರೊಡನೆ ಮಾತಾಡಿದೆ. ಸಭೆಯ ಕಾರ್ಯಕ್ರಮ ನಿಶ್ಚಯಗೊಳಿಸಿದೆ. ದೆಹಲಿಯ ಕಾಂಗ್ರೆಸ್ ಕಚೇರಿಯ ಕಾರ್ಯದರ್ಶಿಯು ನಿಯಮಾನುಸಾರ ಸಭೆ ಸೇರಿಸುವಂತೆ ಆಗ್ರಹ ಪಡಿಸಿದೆ. ಆತ ಇಲ್ಲವೆನ್ನಲಿಲ್ಲವಾದರೂ ಇಂದು– ನಾಳೆ ಎಂದು ಅಡ್ಡಗಾಲು ಹಾಕುವ ಕೆಲಸ ಮಾಡಿಯೇ ಮಾಡಿದ. ಕಾಂಗ್ರೆಸ್‌ನವರು ಇಂಥ ಸಭೆಗಳಲ್ಲಿ ಆಸಕ್ತಿ ವಹಿಸುವುದಿಲ್ಲ ಎಂದು ನನಗೆ ಮನವರಿಕೆಯಾಯಿತು. ಆಗ ನಾನು ಗಾಂಧೀಜಿಯವರ ಬಳಿ ಹೋಗಿ, ಅವರು ಸಮ್ಮತಿಸಿದರೆ ಸಮಾಜವಾದಿ ಪಕ್ಷದ ಪರವಾಗಿ ಆ ಸಭೆ ಕರೆಯಬಹುದೆಂದು ಹೇಳಿದೆ. ಗಾಂಧೀಜಿಯವರು ಆಲೋಚಿಸಿ 'ಪರವಾಗಿಲ್ಲ' ಎಂದರು. ಯಾವುದಾದರೂ ಒಳ್ಳೆಯ ಕೆಲಸ ಆಗುವ ಹಾಗಿದ್ದರೆ, ಅದನ್ನು ಯಾರು ಮಾಡುತ್ತಾರೆಂಬುದರ ಬಗ್ಗೆ ಯಾವ ಚರ್ಚೆಯ ಅಗತ್ಯವೂ ಇರುವುದಿಲ್ಲ.

ಆದರೆ, ಈ ಸಭೆ ಕರೆದ ದಿನವೇ ದೆಹಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ  ಸಮಿತಿಯ ಸಭೆಯನ್ನೂ ಸೇರಿಸಲಾಗಿತ್ತು. ಆ ದಿನ ಮುಂಜಾನೆ ಎದ್ದು ಪತ್ರಿಕೆಯ ಮೇಲೆ ಕಣ್ಣಾಡಿಸಿದರೆ, ಆ ಸಭೆಯ ಪ್ರಕಟಣೆಯನ್ನು ಒಂದು ಸಾಧಾರಣ ಸಭೆಯ ಮಾದರಿಯಲ್ಲಿ ಕೊಡಲಾಗಿತ್ತು. ಇವರು ಹೀಗೇಕೆ ಮಾಡಿದರು? ಸಭೆಯಂತೂ ಆಯ್ದ ಜನಗಳದ್ದಾಗಿತ್ತು. ನನ್ನ



ಚಿಂತೆಯನ್ನು ಗಮನಿಸಿ, "ನಿವೇಕೆ ಇಷ್ಟು ಚಿಂತೆ ಮಾಡುತ್ತೀರಿ?" ಎಂದು ಗಾಂಧೀಜಿ ಕೇಳಿದರು.

ಸಭೆಯ ಸಮಯಕ್ಕೆ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದರು. ಸಭೆಯನ್ನು ಕೇವಲ ಕೆಲವೇ ಜನರಿಗಾಗಿ ಕರೆಯಲಾಗಿತ್ತೆಂದು ನಾನು ಬಾಯ್ಬಿಟ್ಟು ಹೇಳಬೇಕಾಯಿತು. ಆಗ ಬಹಳಷ್ಟು ಜನರು ಹೊರಟು ಹೋಗಿ, ಆಮಂತ್ರಿತರಾಗಿ ಬಂದ ಕೆಲವರೇ ಉಳಿದರು. ಸಭೆಯ ಮೂರು ತಾಸು ನಡೆಯಿತು. ಸಭೆಯಲ್ಲಿ ಅನೇಕ ಅಡ್ಡಿ- ಅಡಚಣೆಗಳು ಉಂಟಾದವು. ಗಾಂಧೀಜಿಯವರ ಪ್ರತಿಯೊಂದು ಸಭೆಯಲ್ಲೂ ಆಲ್ ಇಂಡಿಯಾ ರೇಡಿಯೋದ ಧ್ವನಿವರ್ಧಕ ವ್ಯವಸ್ಥೆ ಇದ್ದೇ ಇರುತ್ತಿತ್ತು. ಯಾವಾಗಲೂ ಕೆಡದೆ ಕೆಲಸ ಮಾಡುವ ಆ ವ್ಯವಸ್ಥೆಯೂ ಈ ಬಾರಿ ತೊಂದರೆ ಕೊಟ್ಟಿತ್ತು.

ನಮ್ಮ ಸಭೆ ನಡೆದೇ ಇತ್ತು. ಅಷ್ಟರಲ್ಲಿ ಗಾಂಧೀಜಿಯವರಿಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರ ಕರೆ ಬಂತು. ತಾವು ಇಲ್ಲದಿದ್ದರೂ ಆ ಸಭೆಯನ್ನು ನಡೆಸುವಂತೆ ಗಾಂಧೀಜಿ ಹೇಳಿ ಕಳಸಿದರು. ಆದರೂ ಒಬ್ಬರ ಹಿಂದೊಬ್ಬರಂತೆ ಕಾರ್ಯಕಾರಿಣಿಯ ಆನೇಕ ಸದಸ್ಯರು ಅವರನ್ನು ಕರೆಯಲು ಬಂದರು. ಎಲ್ಲರೂ ನಿರಾಸೆಯಿಂದ ಮರಳಿ ಹೋಗಬೇಕಾಯಿತು. ಕೊನೆಗೆ, ನೆಹರೂ ಹಾಗೂ ಪಟೇಲರೇ ಬಂದರು. ಆದರೆ ಗಾಂಧೀಜಿ ಸಭೆಯಿಂದ ಕದಲಿಲಿಲ್ಲ! ಗಾಂಧೀಜಿ ಈ ಸಭೆಯಿಂದ ತುಂಬಾ ಸಂತಸಗೊಂಡಿದ್ದರು. ಯಾಕೆಂದರೆ ಈ ಸಭೆಯ ಕಾರ್ಯ ಚಟುವಟಿಕೆಗಳು ಅವರ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದ್ದವು.

ಜನವರಿ ಇಪ್ಪತ್ತಾರರಂದು ಗಾಂಧೀಜಿಯವರು "ನಿಮ್ಮೊಡನೆ ಅವಶ್ಯ ಮಾತಾಡುವುದಿದೆ. ನಾಳೆ–ನಾಡಿದ್ದು ಮಾತಾಡುತ್ತೇನೆ" ಎಂದರು. ಜನವರಿ ಇಪ್ಪತ್ತೆಂಟರಂದು ಮತ್ತೆ ಅಂದರು: "ಸಮಯವೇ ಸಿಗುವುದಿಲ್ಲ. ನಿಮ್ಮೊಡನೆ ವಿಸ್ತಾರವಾಗಿ ಮಾತಾಡುವುದಿದೆ". ಇಪ್ಪತ್ತೊಂಬತ್ತರಂದು ಮತ್ತೆ ಹೇಳಿದರು: "ನಾಳೆ ನಿಮ್ಮೊಡನೆ ಅಗತ್ಯ ಮಾತಾಡುತ್ತೇನೆ. ಕೊನೆಗೂ ನಿಮ್ಮ ಪಕ್ಷಕ್ಕೂ ಹಾಗೂ ಕಾಂಗ್ರೆಸ್ ಬಗ್ಗೆ ಏನಾದರೂ ತೀರ್ಮಾನ ಮಾಡಲೇಬೇಕು. ನಾಳೆ ಸಾಯಂಕಾಲ ಅಗತ್ಯ ಬನ್ನಿ. ಮನಸು ಪೂರ್ತಿ ಮಾತಾಡೋಣ." ನಮ್ಮ ಪಕ್ಷ ಹಾಗೂ ಕಾಂಗ್ರೆಸ್‌ನ ಸಧ್ಯದ ರೂಢಿಗೂ ತಾಳಮೇಳ ಹೊಂದಲಿಕ್ಕಿಲ್ಲವೆಂದೇ ಗಾಂಧೀಜಿಯವರು ತಿಳಿದಿದ್ದರು. ಈ ಹಿನ್ನೆಲೆಯಲ್ಲಿ ಒಂದು ತೀರ್ಮಾನಕ್ಕೆ ಬರಬೇಕೆಂಬ ಗಾಂಧೀಜಿಯ ಆಲೋಚನೆ ಸಾಮಯಿಕವಾಗಿತ್ತು. ಹಾಗೂ ಅನುಕೂಲಕರವಾಗಿತ್ತು. ಮೂವ್ವತ್ತರಂದು ನಾನೊಂದು ಟ್ಯಾಕ್ಸಿಯಲ್ಲಿ ಕುಳಿತು, ಗಾಂಧೀಜಿಯವರನ್ನು ಕಾಣಲು ' ಬಿರ್ಲಾ ಭವನ' ದತ್ತ ಹೊರಟೆ ಆದರೆ ದಾರಿಯಲ್ಲಿಯೇ ಗಾಂಧೀಜಿಯವರ ಕಗ್ಗೊಲೆಯ ಸುದ್ದಿ ತಲುಪಿತು.

ಬಿರ್ಲಾ ಭವನ ತಲುಪಿದೆ: ಅಲ್ಲಿ ಆಗಲೇ ದೊಡ್ಡ ಜನಸಮೂಹ ಸೇರಿತ್ತು. ಅದರಲ್ಲಿ ಗಾಂಧೀಜಿ ಮಾತ್ರ ಇರಲಿಲ್ಲ. ಒಳಗೆ ಕೋಣೆಯಲ್ಲಿ ಅವರ ಮೃತಶರೀರ ಮಾತ್ರ ಇತ್ತು. ಆ ದಿನ ನಿಜವಾದ ಅರ್ಥದಲ್ಲಿ ನಾನು ಅನಾಥನಾದೆನೆಂದು ಮೊದಲ ಸಲ ನನಗೆ ಅನ್ನಿಸಿತು. ದೇಶದ ರಕ್ಷಕ ಕಣ್ಣೆದುರೇ ಸತ್ತು ಬಿದ್ದಿದ್ದ. ಹಾಗೂ ದೇಶದ ದೊರೆಗಳೆನಿಸಿಕೊಂಡವರು ಕಣ್ಣೀರು ಹರಿಸುತ್ತಿದ್ದರು.

ಗಾಂಧೀಜಿಯವರ ನೆಚ್ಚಿನ ಶಿಷ್ಯರಾದ ನೆಹರೂ, ಪಟೇಲರು ಅಧಿಕಾರದ ಗದ್ದುಗೆಯ ಮೇಲಿರುವಾಗಲೇ ಗಾಂಧೀಜಿವರ ಹತ್ಯೆ ನಡೆದಿತ್ತು. 'ದೇವರಲ್ಲಿ ನಂಬುಗೆ ಇಡುವ' ಬಗ್ಗೆ ಗಾಂಧೀಜಿ ಆಡಿದ ಮಾತು ನನಗೆ ನೆನಪಾಯಿತು. ದೇವರಲ್ಲಿ ಅಚಲ ಶ್ರದ್ಧೆ ಹೊಂದಿ, ಜೀವನದುದ್ದಕ್ಕೂ ಅಹಿಂಸೆಯ ಆರಾಧಕರಾಗಿದ್ದವರೇ ಇಂದು ಹಿಂಸೆಯ ಮೂಲಕ ಹತ್ಯೆಗೊಳಗಾದರೆಂದರೆ ಎಂಥ ವಿಪರ್ಯಾಸ!

ಗಾಂಧೀಜಿಯವರ ಮೃತ ಶರೀರವನ್ನು ನೋಡಿ ನಾನು ತತ್ತರಿಸಿ ಹೋದೆ: "ನೀವು ನಡು ನೀರಿನಲ್ಲೇ ನಾಡಿನ ಜನತೆಯನ್ನು ಕೈಬಿಟ್ಟು ಹೋದದ್ದೇಕೆ? ಹೀಗೇಕೆ ಮೋಸ ಮಾಡಿದಿರಿ?"

ಆದರೆ, ನನಗೆ ಉತ್ತರ ಕೊಡುವವರು ಯಾರು? ■

(ಸೌಜನ್ಯ : ಸ್ವಾತಂತ್ರ್ಯದ ಅಂತರ್ಜಲ ಕೃತಿಯಿಂದ ಆಯ್ದ ಲೇಖನದ ಸಂಕ್ಷಿಪ್ತ ಭಾಗ)








# ಇಂದೂ ಇರುವ ಗಾಂಧಿ

ಡಾ.ಯು.ಆರ್. ಅನಂತಮೂರ್ತಿ

**ಮಾತು ಮತ್ತು ಬರವಣಿಗೆಯಲ್ಲಿ ಮೋಹಕತೆ ಮತ್ತು ಸೂಜಿಗಲ್ಲಿನ ಆಕರ್ಷಣೆಯ ಗುಣವನ್ನು ತಂದಿತ್ತ ಡಾ. ಯು.ಆರ್. ಅನಂತಮೂರ್ತಿಯವರು ತಮ್ಮ ಚಿಂತನೆಗಳ ಮೂಲಕ ಕನ್ನಡದ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತನ್ನು ವಿಸ್ತರಿಸಿದವರು. 2007 ರಲ್ಲಿ ಉಡುಪಿಯ ಮಹಾತ್ಮ ಗಾಂಧಿ ಸ್ಮಾರಕ ಕಾಲೇಜಿನಲ್ಲಿ ಗಾಂಧಿ ಅಧ್ಯಯನ ಕೇಂದ್ರನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಮಾಡಿದ ಭಾಷಣದ ಸಂಕ್ಷಿಪ್ತ ಲೇಖನದ ರೂಪ**

ಗಾಂಧಿ ಹೇಳಿದ್ದು: "My Message is My life" "ನನ್ನ ಬದುಕೇ ನನ್ನ ಸಂದೇಶ" ಪ್ರಾಯಶ: ಗಾಂಧೀಜಿಯ ಸಮಕಾಲೀನರಾದ ಯಾರಿಗೂ My Message is My life ಎಂದು ಹೇಳುವುದಕ್ಕಾಗುತ್ತಿರಲಿಲ್ಲ. ಚರ್ಚಿಲ್‌ಗೆ ಆಗುತ್ತಿರಲಿಲ್ಲ. ರೂಸ್‌ವೆಲ್ಟ್‌ಗೂ ಆಗುತ್ತಿರಲಿಲ್ಲ. ಸ್ಟಾಲಿನ್‌ಗಂತೂ ಆಗುತ್ತಲೇ ಇರಲಿಲ್ಲ. ವಿಚಿತ್ರವಾದ ವಿಷಯ. ನಮ್ಮ ಕಾಲದ ಮಹಾನಾಯಕರಲ್ಲಿ ಯಾರದ್ದಾದರೂ ಬಯೋಗ್ರಫಿಯೇ ಮುಖ್ಯವಾಗುವುದಾದರೆ, ಆದರಲ್ಲೇ ಅರ್ಥಗಳಿವೆ ಎಂದಾದರೆ ಅದು ಗಾಂಧಿಯವರದು ಮಾತ್ರ.

ಗಾಂಧಿಯವರ ಜೀವನವೇ ಮಾದರಿ, ಇದು ಉಳಿದವರ ವಿಷಯದಲ್ಲಿ ನಿಜವಲ್ಲ. ನಮ್ಮ ವಿಷಯದಲ್ಲಿ ನಿಜವಲ್ಲ. ನಮ್ಮ ಜೀವನವೇ ಬೇರೆ. ನಾವು ಹೇಳುವುದೇ ಬೇರೆ. ಇಂಟೆಲೆಕ್ಚುಯಲ್ಸ್ ಎಂದು ತಿಳಿದುಕೊಂಡಿರುವ ನಾವಂತೂ 'ಇಂಟೆಲೆಕ್ಚುಯಲ್ ಫೇಡಮ್' ಪಡೆದುಬಿಟ್ಟಿರುತ್ತೇವೆ. ಅದು ತಪ್ಪು ಎಂದು ಹೇಳುತ್ತಿಲ್ಲ. ಅದು ಇಲ್ಲದೇ ಇದ್ದರೆ ವಿಚಾರಕ್ಕೆ ಅವಕಾಶವೇ ಇಲ್ಲ. ನನಗೊಬ್ಬ ಸ್ನೇಹಿತರಿದ್ದಾರೆ. ಮಾರ್ಟಿನ್ ಗ್ರೀನ್ ಎಂದು. ನಾನು ಅವರ ಶಿಷ್ಯನಾಗಿದ್ದೆ. ಬರ್ಮಿಂಗ್ ಹ್ಯಾಮಿನಲ್ಲಿ, ಗಾಂಧೀ ಬಗ್ಗೆ ನಾನು ಅವರ ಜೊತೆ



ಮಾತಾಡುತ್ತಿದ್ದೆ. ಆಮೇಲೆ ಅವರು ಬಹಳ ದೊಡ್ಡ ಜ್ಞಾನಿ ಆಗಿ ಗಾಂಧಿ ಆಂಡ್ ಟಾಲ್‌ಸ್ಟಾಯ್ ಎಂದು ನಾಲ್ಕೈದು ಪುಸ್ತಕ ಬರೆದು ಜಗದ್ವಿಖ್ಯಾತರಾದರು. ಒಮ್ಮೆ ಅವರು ಕೇಳಿದರು –'ಗಾಂಧಿ ಎಲ್ಲ ಸರಿ, ನನಗೆ ಭಯ ಎಂದರೆ There is no place for intellectual life in Gandi ಅಂತ ಆದುದರಿಂದ intellectual life ಅಂದರೆ to experiment with your own mind ಅಂದರೆ ಆಗ ನಾವು ಹುಡುಕುವುದು: ವಿಚಾರದ ಒಳಗಿರುವ ತಾರ್ಕಿತ ಪ್ರಮಾಣಿಕತೆ. ಆತ್ಮದ ಅನುಭವದ ಪ್ರಾಮಾಣಿಕತೆಯನ್ನು ಆಧರಿಸಿ ವಿಚಾರ ಮಾಡಬೆಕಾದ ಒತ್ತಾಯ ಅದಕ್ಕೆ ಇಲ್ಲ. ವಿಚಾರಕ್ಕೊಂದು ತಾರ್ಕಿತ ಪ್ರಾಮಾಣಿಕತೆ ಇರುತ್ತದೆ. ತರ್ಕದಲ್ಲೇ ಪ್ರಮಾಣವನ್ನು ಪಡೆದಿರುತ್ತದೆ. ಅದನ್ನು ಅನುಸರಿಸಿಕೊಂಡು ಹೋದರೆ ಅದು ಗೇಮ್ ಸಹ ಹೌದು. ಅದು ಆರ್ಟ್ ಸಹ ಹೌದು. ಫಿಲಾಸಫಿಯಲ್ಲಿ ಆಟದ ಗುಣ ಇದೆ. ಲೀಲೆಯ ಗುಣ ಇದೆ. ಅದಕ್ಕೂ ಅವಕಾಶ ಇಲ್ಲ ಗಾಂಧಿಯಲ್ಲಿ ಎಂದು ಅನ್ನಿಸಿತ್ತು ಅವರಿಗೆ. ಅಷ್ಟು ಅನ್ನಿಸುವ ಹಾಗೆ ಮಾಡುವುದರಿಂದಲೇ ಅವರು ಈ ಬುದ್ಧಿಜೀವಿಗಳಿಗೆ ಛಾಲೆಂಜ್ ಆದರು. ಇಲ್ಲದೇ ಇದ್ದರೆ ಬುದ್ಧಿಜೀವಿಗಳಿಗೆ ಛಾಲೆಂಜೇ ಇಲ್ಲ.

ಇದೊಂದು ರೀತಿ ಕ್ರಮ, ಅದೊಂದು ರೀತಿ ಕ್ರಮ ಅಂತ ಅವರು ತಮ್ಮ ಸಿಸ್ಟಮ್‌ನಲ್ಲಿ ಎಲ್ಲವನ್ನೂ ಅಳವಡಿಸಿಕೊಳ್ಳುವ ಕ್ರಮವನ್ನು ಧೀಮಂತರು ಹುಡುಕಿರುತ್ತಾರೆ. ನೀವು ಒಂದು ಸಿಸ್ಟಮ್‌ನಲ್ಲಿ ಗಾಂಧಿಯನ್ನು ಇಡಲು ಹೋದರೆ ಅವರು ಅದರಲ್ಲಿ ಸಿಗುವುದೇ ಇಲ್ಲ. ಆ ಸಿಸ್ಟಮ್‌ನಲ್ಲಿ ಸಿಗದೇ ಇರುವುದಕ್ಕೆ ಕಾರಣ ಆತನ ಆಳತೆಗೋಲೇ ವೈಚಾರಿಕತೆಯಲ್ಲಿರುವ ತಾರ್ಕಿಕತೆ ಅಲ್ಲ. ಆ ತಾರ್ಕಿಕತೆಯಲ್ಲಿ ಮಾತ್ರ ಕಾಣಬಹುದಾದ ಪ್ರಾಮಾಣಿಕತೆ ಅಲ್ಲ. ತನ್ನ ಸ್ವಂತ ಜೀವನದಲ್ಲಿ ಅನುಷ್ಠಾನಕ್ಕೆ ಎಷ್ಟು ತರುವುದಕ್ಕೆ ಸಾಧ್ಯ ಎನ್ನುವುದರ ಮೇಲೆ ಈ ತಾರ್ಕಿಕ ಪ್ರಾಮಾಣಿಕತೆ ಅವಲಂಬಿತವಲ್ಲ.

ನೀವು ಒಂದು ಸಿಸ್ಟಮ್‌ನಲ್ಲಿ ಗಾಂಧಿಯನ್ನು ಇಡಲು ಹೋದರೆ ಅವರು ಅದರಲ್ಲಿ ಸಿಗುವುದೇ ಇಲ್ಲ. ಆ ಸಿಸ್ಟಮ್‌ನಲ್ಲಿ ಸಿಗದೇ ಇರುವುದಕ್ಕೆ ಕಾರಣ ಆತನ ಆಳತೆಗೋಲೇ ವೈಚಾರಿಕತೆಯಲ್ಲಿರುವ ತಾರ್ಕಿಕತೆ ಅಲ್ಲ. ಆ ತಾರ್ಕಿಕತೆಯಲ್ಲಿ ಮಾತ್ರ ಕಾಣಬಹುದಾದ ಪ್ರಾಮಾಣಿಕತೆ ಅಲ್ಲ. ತನ್ನ ಸ್ವಂತ ಜೀವನದಲ್ಲಿ ಅನುಷ್ಠಾನಕ್ಕೆ ಎಷ್ಟು ತರುವುದಕ್ಕೆ ಸಾಧ್ಯ ಎನ್ನುವುದರ ಮೇಲೆ ಈ ತಾರ್ಕಿಕ ಪ್ರಾಮಾಣಿಕತೆ ಅವಲಂಬಿತವಲ್ಲ.





ತಾತ್ಕಾಲಿಕತೆಯಲ್ಲಿ ಸಿಕ್ಕುವ ಪ್ರಮಾಣ ಚಿರಕಾಲದಲ್ಲೂ ಒಂದು ಅಜೆಂಡಾ ಆಗಿ ಉಳಿಯಬೇಕು ಗಾಂಧಿಗೆ, ಅವರಿಗೆ ಮನುಷ್ಯನ ಬಗ್ಗೆ, ಮನುಷ್ಯನ ವರ್ತನೆ ಬಗ್ಗೆ ಹೇಗೆ ಅನ್ನಿಸುತ್ತಿತ್ತು ಎಂದರೆ he said something very wonderful. Human history is not long enough for us to conclude about what human beings potentially are. We have not lived long enough in history to know what human beings are truly capable of ಅಂತ. ಅಂದರೆ ಗಾಂಧಿಗೆ ಎಷ್ಟು ತಾತ್ಕಾಲಿಕ ಸದ್ಯತನ ಇತ್ತೋ ಅಷ್ಟೇ ಶಾಶ್ವತದ ನೆಲೆಯಲ್ಲೂ ಕೆಲವು ಸಾಧ್ಯತೆಗಳ ಯೋಜನೆ ಇತ್ತು. (ಇದು ಲೆನಿನ್‌ಗೂ ಇರಲಿಲ್ಲ. ಮಾವೋಗೂ ಇರಲಿಲ್ಲ. ಕಾರ್ಲ್‌ಮಾರ್ಕ್ಸ್‌ಗೂ ಇರಲಿಲ್ಲ–ಯಾರಿಗೂ ಇರಲಿಲ್ಲ. ಅಂದರೆ ಅವರ ಚಿಂತನ ಲೋಕದಲ್ಲಿ ಇದ್ದಿರಬಹುದು. existentially ಇರಲಿಲ್ಲ.) ಅಂದರೆ ತನ್ನ ಮೇಲೆ ಮಾಡಿಕೊಂಡ ಎಕ್ಸ್‌ಪೆರಿಮೆಂಟ್ಸ್ ಮೇಲೆ ಗಾಂಧಿ ಸತ್ಯದ ವ್ಯಾಖ್ಯಾನ ಮಾಡುವುದು ಕೊನೆಗೆ ತಾನು ಬ್ರಹ್ಮಚಾರಿಯಾಗಿ ಉಳಿದಿದ್ದೇನೋ ಇಲ್ಲವೋ ಎಂದು ತಿಳಿಯುವುದಕ್ಕೋಸ್ಕರ ಒಂದು ಹೆಣ್ಣುಮಗಳ ಜೊತೆ ಬೆತ್ತಲೆ ಮಲಗುವತನಕ ಹೋಗಿದ್ದರು ಗಾಂಧಿ. 'ನೀನು ಮಾಡುತ್ತಿರುವುದು ತಪ್ಪು' ಎಂದು ಕೃಪಲಾನಿಯಂತಹವರು ಹೇಳಿದಾಗ ಅವರಿಗೆ ತಪ್ಪು ಎಂದು ಗೊತ್ತಾಯಿತು.

ಮುಸ್ಲಿಮರು ತಮ್ಮ ಪ್ರಾಫೆಟ್‌ನ್ನು ದೇವರು ಅಂತ ತಿಳಿಯಬಾರದು ಎಂಬ ಕಾರಣಕ್ಕಾಗಿ ಫ್ರಾಫೆಟ್‌ನ ಹೆಸರು ಹೇಳಿದ ಕೂಡಲೇ ದೇವರ ಕರುಣ ಸದಾ ಅವರ ಮೇಲೆ ಇರಲಿ ಅಂತಾರೆ. ವಂಡರ್‌ಫುಲ್ ಅದು. ಯಾಕೆಂದರೆ ಅವನನ್ನು ದೇವರು ಆಗುವುದಕ್ಕೆ ಬಿಡಬಾರದು. ತಮ್ಮ ಗುರುವನ್ನು ದೇವರು ಆಗುವುದಕ್ಕೆ ಬಿಡಬಾರದು ಎನ್ನುವ ಈ ಹಠ ಇರುವ ಯಾವ ಬೇರೆ ಧರ್ಮವೂ ಪ್ರಪಂಚದಲ್ಲಿ ಇಲ್ಲ. ಗಾಂಧಿಯ ಬಗ್ಗೆ ಕೂಡ ಅದು ನಿಜ. ತಾನು ಕೇವಲ ಮನುಷ್ಯ ಎಂದು ತಿಳಿದು ಕೊನೆಯತನಕ ಬದುಕಿದರು ಅವರು. ಕೇವಲ ಮನುಷ್ಯನಾಗಿ ಮಹಾತ್ಮನಾದರು. ಮಾಹಾತ್ಮಾ ಅಂದ ಕೂಡಲೆ ಅವರು ಕೇವಲ ಮನುಷ್ಯ ಎನ್ನುವುದನ್ನು ಮರೆಯಬಾರದು. ಕೊನೆಯ ತನಕ ಅವರಿಗೆ ಸಿಟ್ಟು ಬರುತ್ತಿತ್ತು. ಬೇಸರ ಆಗುತ್ತಿತ್ತು.

ಕೊನೆಗಾಲದಲ್ಲಿ ಭಾರತ ಸ್ವತಂತ್ರ ಆಗುವ ಮುಂಚೆ ಹಿಂದ್ ಸ್ವರಾಜ್ ಬಗ್ಗೆ ನೆಹರೂಗೆ ಒಂದು ಪತ್ರ ಬರೆಯುತ್ತಾರೆ. ಈ ಪತ್ರದ ಒಂದು ಮಾತು ನನಗೆ ವಿಚಿತ್ರ ಅನಿಸುತ್ತದೆ. 'ನಿನಗೆ ನಾನು ಈ ಪತ್ರವನ್ನು ಹಿಂದೂಸ್ಥಾನಿಯಲ್ಲಿ ಬರೆಯಬೇಕೋ ಇಂಗ್ಲಿನಷ್‌ನಲ್ಲಿ ಬರೆಯಬೇಕೋ ಅಂತ ಗೊತ್ತಾಗುತ್ತಾ ಇಲ್ಲ' ಎನ್ನುತ್ತಾರೆ. (ನಾನು ಓದಿರುವುದು ಇಂಗ್ಲಿಷ್‌ನಲ್ಲಿ ಆದ್ದರಿಂದ ಅವರು ಇಂಗ್ಲಿಷ್‌ನಲ್ಲೇ ಬರೆದರೋ ತಿಳಿಯದು) ಅವರು ಹಿಂದುಸ್ಥಾನಿಯಲ್ಲಿ ಬರೆದಿದ್ದರೆ ನೆಹರೂಗೆ ಬಹುಶ: ತನ್ನ ಪತ್ರದ ಪ್ರಾಮುಖ್ಯತೆ ಅರ್ಥ ಆಗುತ್ತದೋ ಎಲ್ಲವೋ ಎನ್ನು ಅನುಮಾನ ಸಹ ಗಾಂಧಿಗೆ ಶುರುವಾದಂತೆ ನನಗೆ ತೋರುತ್ತದೆ.

'ನೋಡು ನೀನು ನನ್ನ **ಹಿಂದ್ ಸ್ವರಾಜ್**‌ನ್ನು ಗಂಭೀರವಾಗಿ ಗಮನಿಸಿರುವಂತೆ ನನಗೆ ತೋರುವುದಿಲ್ಲ. ನೀನು ಭಾರತದ ಭವಿಷ್ಯದ ನಾಯಕನಾಗುವವನು. ನನ್ನ ಕನಸನ್ನು ನಿಜಮಾಡಬೇಕಾದವನು'. (ನೆಹರೂರನ್ನೆ ತನ್ನ ಉತ್ತರಾಧಿಕಾರಿಯೆಂದು ಗಾಂಧಿ ಆಯ್ಕೆ ಮಾಡಿರುತ್ತಾರೆಯಾದ್ದರಿಂದ ಈ ಆರ್ತತೆಯಲ್ಲಿ ಗಾಂಧಿ ಬರೆಯುವುದು) ಅದಕ್ಕೆ ನೆಹರು ಉತ್ತರ ಬರೆಯುತ್ತಾರೆ – 'ನಮ್ಮ

**ಗಾಂಧಿಯವರ ಜೀವನವೇ ಮಾದರಿ, ಇದು ಉಳಿದವರ ವಿಷಯದಲ್ಲಿ ನಿಜವಲ್ಲ. ನಮ್ಮ ವಿಷಯದಲ್ಲಿ ನಿಜವಲ್ಲ. ನಮ್ಮ ಜೀವನವೇ ಬೇರೆ. ನಾವು ಹೇಳುವುದೇ ಬೇರೆ. ಇಂಟೆಲೆಕ್ಚುಯಲ್ಸ್ ಎಂದು ತಿಳಿದುಕೊಂಡಿರುವ ನಾವಂತೂ 'ಇಂಟೆಲೆಕ್ಚುಯಲ್ ಫ್ರೀಡಮ್' ಪಡೆದುಬಿಟ್ಟಿರುತ್ತೇವೆ.**

ಹಳ್ಳಿಗಳಲ್ಲಿ ನಮ್ಮ ಭವಿಷ್ಯ ಇರುವುದಲ್ಲ ನಮ್ಮ ಹಳ್ಳಿಗಳು ಮೂಢನಂಬಿಕೆಯ ಕೊಂಪೆಗಳು. ಭವಿಷ್ಯ ಇರುವುದು ಈ ಪಶ್ಚಿಮ ಪ್ರಣೀತ ಆಧುನಿಕತೆಯ ಜೊತೆಗೆ' ನೆಹರೂಗೂ ಒಂದು ಆದರ್ಶವಾದಿತ್ವ ಇರುವುದರಿಂದ 'ಇಡೀ ಪ್ರಪಂಚವೇ ಆತ್ಮಹತ್ಯೆಯ ದಾರಿಯಲ್ಲಿದ್ದರೆ ನಾವೇನು ಮಾಡುವುದಕ್ಕೆ ಸಾಧ್ಯ?' ಎಂತಲೂ ಬರೆಯುತ್ತಾರೆ. ಏನಾದರೂ ಮಾಡಲು ಸಾಧ್ಯ ಇದ್ದವರು ಏನೂ ಮಾಡಲು ಸಾಧ್ಯ ಇಲ್ಲ ಅಂತ ಬರೆಯುತ್ತಾರೆ. ಏನಾದರು ಮಾಡಬಹುದಿತ್ತು. ಯಾಕೆಂದರೆ Only a mass leader like Nehru **could have taken some action.**


ಗಾಂಧಿಗೂ ನೆಹರೂಗೂ ಹೀಗೆ ವಾಗ್ವಾದ ಇತ್ತು. ಹಾಗೆಯೇ ಗಾಂಧಿಗೆ ಟ್ಯಾಗೋರ್ ಜೊತೆಗೂ ಒಂದು ವಾಗ್ವಾದ ಇತ್ತು. ನಾನು ನ್ಯಾಷನಲ್ ಬುಕ್ ಟ್ರಸ್ಟ್‌ನ ಚೇರ್‌ಮನ್ ಆಗಿದ್ದಾಗ ಒಂದು ಪುಸ್ತಕ ಪ್ರಕಟಿಸಬೇಕೆಂದು ಆಸೆ ಪಟ್ಟಿದ್ದೆ. (ಆಮೇಲೆ ಅದು ಬಂತು.) **ಮಹಾತ್ಮಾ ಆಂಡ್ ದ ಪೊಯೆಟ್**–ಈ ಪುಸ್ತಕದ ಹೆಸರು. ಗಾಂಧಿ ಮತ್ತು ಟ್ಯಾಗೋರ್‌ರಿಗೆ ನಡೆದ ವಾಗ್ವಾದದ ಪುಸ್ತಕ ಬಹಳ ಅದ್ಭುತವಾದ ಪುಸ್ತಕ. ಎಲ್ಲ ವಿದ್ಯಾರ್ಥಿಗಳು ಓದಬೇಕಾದ ಒಂದು ಮೂಲಭೂತ ಪಠ್ಯ ಇದು. ನಮ್ಮ ರಾಷ್ಟದ ಸ್ವರೂಪ ಹೇಗಿರಬೇಕು. ನಮ್ಮ ಸಮಾಜದ ಸ್ವರೂಪ ಹೇಗಿರಬೇಕು ಎಂದು ಇಬ್ಬರು ಮಹಾನುಭಾವರು ಚರ್ಚಿಸುತ್ತಾರೆ– ಗಾಂಧಿಯನ್ನು ಮಹಾತ್ಮಾ ಅಂತ ಕರೆದಿದ್ದು ಟ್ಯಾಗೋರ್, ಟ್ಯಾಗೋರ್‌ರನ್ನು ಗುರುದೇವ್ ಅಂತ ಕರೆದಿದ್ದು ಗಾಂಧೀಜಿ. (ಆದರೆ ಒಳ್ಳೆಯ ಶಿಷ್ಯನಾಗಿ ನಡೆದುಕೊಳ್ಳುತ್ತಿರಲಿಲ್ಲ. ಗಾಂಧೀಜಿ) ಇವರು ಮಹಾತ್ಮಾ ಅಂತ ತಿಳಿದೂ ಜಗಳ ಆಡುತ್ತಿದ್ದರು ಟ್ಯಾಗೋರರು. ಈ ಭಿನ್ನತೆ ಇಬ್ಬರ ನಡುವಿನ ಸಂಬಂಧದಲ್ಲಿ ನಮಗೆ ಬಹಳ ಮುಖ್ಯವಾದದ್ದು. Mahatma and the poet ಓದುವಾಗ ಒಮ್ಮೊಮ್ಮೆ ಗಾಂಧಿಯೇ ಕವಿ ಅಂತ ಅನ್ನಿಸುತ್ತದೆ: ಟ್ಯಾಗೂರರು ಹೆಚ್ಚು ಪ್ರಾಕ್ಟಿಕಲ್ ಅಂತ ಅನ್ನಿಸುತ್ತದೆ.


ಇದನ್ನು ಯಾಕೆ ಹೇಳುತ್ತೇನೆ ಅಂದರೆ, ಗಾಂಧಿ ಮನುಷ್ಯ ಮಾತ್ರನಾಗಿ ಉಳಿದು ಯಾವುದೇ ವಿಶೇಷ ಶಕ್ತಿ ತನ್ನಲ್ಲಿಲ್ಲ ಅಂತ ತಿಳಿದು, ಆದರೆ ತಾಂತ್ರಿಕರಿಗೆ ಇರುವುದಕ್ಕಿಂತ ಹೆಚ್ಚಿನ ಶಕ್ತಿ ಪಡೆದರು. ನನಗೆ ರಾಮಚಂದ್ರ ಗಾಂಧಿ ಹೇಳುತ್ತಿರುತ್ತಾರೆ– ತಾಂತ್ರಿಕರ ಗುರಿ ಅಸಾಧ್ಯವಾದದ್ದನ್ನು ಸಾಧ್ಯವಾಗಿಸುವುದು. ಅದು ತಂತ್ರದ ಅಜೇಂಡಾ. ಗಾಂಧಿಗೆ ಒಂದು ತಾಂತ್ರಿಕನ ಗುಣ ಇತ್ತು. ಇಲ್ಲದಿದ್ದರೆ ಒಂದು ಹಿಡಿ ಉಪ್ಪನ್ನು ಅವರು ಎತ್ತಿ ಹಿಡಿದ ಕ್ಷಣವೇ ಇಡೀ ಬ್ರಿಟಿಷ್ ಸಾಮ್ರಾಜ್ಯ ಕುಸಿಯುವಂತೆ ಆಯಿತು. ಆಶೀಶ್ ನಂದಿ ಹೇಳಿದಂತೆ ನೆನಪು– ಇಂಡಿಯಾ ಸ್ವಾತಂತ್ರ ಪಡೆದದ್ದು ಆಗಸ್ಟ್, ಹದಿನೈದರಂದು ಮಾತ್ರವಲ್ಲ: ಗಾಂಧಿ ಒಂದು ಹಿಡಿ ಉಪ್ಪನ್ನು ಸಮುದ್ರದ ದಂಡೆ ಮೇಲೆ ನಿಂತು ಹಿಡಿದು ಎತ್ತಿದಾಗ. ಲಕ್ಷಾಂತರ ಜನರನ್ನು ಜೈಲಿಗೆ ಹಾಕಬೇಕಾಯಿತು. ಅವರು ಯಾರೂ ಪ್ರತೀಕಾರದ ಹಿಂಸೆಗೆ ಇಳಿಯಲ್ಲಿಲ್ಲ.

ಜನ ಎಲ್ಲೆಲ್ಲೂ ನೀರು ಕುದಿಸಿ ಉಪ್ಪನ್ನು ಮಾಡಿ ಕಾನೂನನ್ನು ಭಂಗ ಮಾಡುತ್ತಿದ್ದಾರೆ. ಆದರೆ ಈ ಎಲ್ಲರನ್ನೂ ಜೈಲಿಗೆ ಹಾಕುವುದೆಂದರೆ ಅಷ್ಟು ಜಾಗ ಎಲ್ಲಿದೆ? ಆದರೆ ಶಿಕ್ಷಿಸದಿದ್ದರೆ ಸರ್ಕಾರವೇ ಇಲ್ಲವೆಂದಂತೆ ಆಯಿತು. ಎಂಥಾ ತಂತ್ರಗಾರಿಕೆ ನೋಡಿ ಗಾಂಧಿಗೆ. ಒಂದು ರೀತಿಯ ಜಾಣತನವೆನ್ನಬಹುದೆ? ಕನ್ನಿಂಗ್ ಎನ್ನಬಹುದೆ? ಅದೂ ಇತ್ತು ಗಾಂಧಿಗೆ.

ಅವರು ಮನುಷ್ಯ ಮಾತ್ರದವರು ಅಂದೆ. ಅವರಿಗೆ ಅವರು ಹುಟ್ಟಿದ ಜಾತಿಯ ವೈಶ್ಯ ಗುಣ ಇತ್ತು. ಕೊನೆಯವರೆಗೂ ಅವರಲ್ಲಿ ಒಂದು ಗುಜರಾತಿ ಗುಣ ಇತ್ತು. ಕೊನೆವರೆಗೂ ಒಬ್ಬ ಲಾಯರ್ ಗುಣ ಇತ್ತು. ಇವೆಲ್ಲ ಇದ್ದು ಇವನ್ನು ಮೀರುತ್ತಲೇ ಇದ್ದರು. ಆದ್ದರಿಂದಲೇ ಇವರು ಮನುಷ್ಯ, ಆದರೂ ಇವರಲ್ಲಿ ಸುಳ್ಳಿಲ್ಲ ಅಂತ ಅನ್ನಿಸುವುದು. ಅವರ ಮಕ್ಕಳ ಜೊತೆ ಅವರ ಹೆಂಡತಿ ಜೊತೆ ಅವರು ಮಾಡಿದ ಕಾದಾಟಗಳಲ್ಲೂ ಇದನ್ನು ಕಾಣಬಹುದು.

ಆದರೆ ಗಾಂಧಿಗಿಂತ ಗಾಂಧೀಸಂನ್ನು ಅಕ್ಷರಶಃ ನಂಬಿದ್ದವರು ವಿನೋಬಾಬಾವೆ. ಗಾಂಧಿಯವರನ್ನು ಕಾರ್ಟೂನ್ ಮಾಡುವುದಾದರೆ ನಮಗೆ ಕಾಣುವುದು ವಿನೋಭಾಬಾವೆ. he Literally believed Gandhi. ಗಾಂಧಿ ಕಾಲ್ನಡಿಗೆಯಲ್ಲಿ ಹೋಗಿ ಸತ್ಯಾಗ್ರಹ ಮಾಡುತ್ತಿದ್ದರು. ಭಾವೆ ಇಡೀ ದೇಶವನ್ನು ಕಾಲ್ನಡಿಗೆಯಲ್ಲಿ ಸುತ್ತಿದ್ದರು. ಗಾಂಧಿ 2–3 ದಿವಸ ಮೌನ ವ್ರತ ಮಾಡುತ್ತಿದ್ದರು. ಇವರು ವರ್ಷಗಟ್ಟಲೇ ಮೌನವ್ರತ ಮಾಡಿದರು. ಬ್ರಹ್ಮಚರ್ಯದಲ್ಲೂ ಅಷ್ಟೆ. ಗಾಂಧಿಯ ಬ್ರಹ್ಮ ಚರ್ಯವೇ ಬೇರೆ ತರಹದ್ದು. ಕೃಪಲಾನಿಯವರು ವಯಸ್ಸಾದವರು– ಚಿಕ್ಕವಳಾಗಿದ್ದವಳನ್ನು ಮದುವೆಯಾಗಬೇಕು ಎಂದಾಗ ವಿನೋಬಾ said, 'no, this is immoral..' ಆದರೆ ಗಾಂಧಿ ಇಬ್ಬರೂ ಒಬ್ಬರಿಗೊಬ್ಬರು ಹಲುಬುವುದನ್ನು ನೋಡಿದಾಗ 'if you like each other so much then' ಆಗಿ ಅಂದರಂತೆ, ಅಂದರೆ ಗಾಂಧಿಗೆ ಒಂದು ಸಂಸಾರಿಯ ಗುಣ ಇತ್ತು. ಸಹನೆ ಇತ್ತು. It makes him a complex character. ನಮ್ಮಲ್ಲಿ ತತ್ಸಮಾನವಾಗಿ ಸಿಗುವ character ರಾಮ. ಅದಕ್ಕೆ ನೋಡಿ ಇವತ್ತಿಗೂ ನಾವು ರಾಮನ ವರ್ತನೆಗಳ ಬಗ್ಗೆ ಚರ್ಚೆ ಮಾಡುತ್ತಲೇ ಇದ್ದೇವೆ. ಅವನು ವಾಲಿಯನ್ನು ಹಿಂದಿನಿಂದ ಕೊಂದದ್ದು ಸರಿಯೋ? ಸೀತೆಯನ್ನು ಬೆಂಕಿಯಲ್ಲಿ ನಡಸಿದ್ದು ಸರಿಯೋ? ಅವನು ರಾವಣನ ತಮ್ಮ ವಿಭೀಷಣನ ಜೊತೆ ಒಪ್ಪಂದ ಮಾಡಿದ್ದು ಸರಿಯೋ? ಎಲ್ಲ ರೀತಿಯ ಪ್ರಶ್ನೆಗಳನ್ನು ಕೇಳಬಹುದು. ಅಂದರೆ ಅವನು ethical personality.





ಕೃಷ್ಣನ ಬಗ್ಗೆ ಯಾರಾದರೂ ಈ ರೀತಿಯ ಪ್ರಶ್ನೆ ಎತ್ತುವುದುಂಟೆ? ಅವನು ಏನು ಬೇಕಾದರೂ ಮಾಡಬಹುದು ಅವನಿಗೆ ದೈವತ್ವ ಲಭಿಸಿದೆ. ಆದರೆ ರಾಮನಿಗಿಲ್ಲ, ಲೋಹಿಯಾ ಅವರು ರಾಮ ಕೃಷ್ಣ ಶಿವ ಎನ್ನುವ ಅದ್ಭುತವಾದ ಲೇಖನ ಬರೆದಿದ್ದಾರೆ. ಅದರಲ್ಲಿ ಹೇಳ್ತಾರೆ – Rama is a personality of the ethical kind. ಹಾಗೆನೇ Gandhi is an ethical personality ಅದುದರಿಂದ ಇವತ್ತಿಗೂ ಅವರು ಚರ್ಚಾರ್ಹರಾಗಿಯೇ ಉಳಿದ್ದಾರೆ.

ಆಮೇಲೆ ಗಾಂಧಿಯಲ್ಲಿ ಉಪಾಯ ಅಂತ ಹೇಳಿದೆನಲ್ಲವೆ? ಅದೂ– vision (ದೃಷ್ಟಕೋನ) ನಮ್ಮಲ್ಲಿ ತಿಲಕರು ಬಹಳ ದೊಡ್ಡ ರಾಷ್ಟ್ರಪ್ರೇಮಿಗಳು. ಭಾರತವನ್ನು ಕೇವಲ ರಾಷ್ಟ್ರವಾಗಿ ನೋಡಬೇಕು. ಸದ್ಯಕ್ಕೆ ನಮಗಿರುವ ಎಲ್ಲ ಜಗಳಗಳನ್ನು ಬದಿಗಿಟ್ಟು ಮೊದಲು ಇದು ಸ್ವತಂತ್ರ್ಯವಾಗಲಿ ಎಂದರು. ಅಂಬೇಡ್ಕರು 'ಇಲ್ಲ ನೀವೇನಾದರೂ ಸ್ವತಂತ್ರರಾದರೆ– ಮೇಲ್ಜಾತಿಯವರು– ನಮ್ಮನ್ನು ಆಳಿ ಬ್ರಿಟಿಷರ ಜಾಗದಲ್ಲಿ ಕುಳಿತು ಬಿಡುತ್ತೀರಿ. ನಮಗದು ಬೇಕಾಗಿಲ್ಲ. ಮೊದಲು ಸಮಾಜ ಸುಧಾರಣೆಯಾಗಲಿ' ಎಂದರು. ಗಾಂಧಿ ಏನು ಮಾಡಿದರು ನೋಡಿ– ಇದೊಂದು ವಿಚಿತ್ರವಾದ ವಿಷಯ. ಒಂದು ದೇಶವನ್ನು ಏಕಕಾಲಕ್ಕೆ ಒಂದು ಸಮಾಜವಾಗಿಯೂ, ರಾಷ್ಟ್ರವಾಗಿಯೂ ನೋಡುವ ಶಕ್ತಿ ಗಾಂಧಿಗೆ ಇತ್ತು. ಇದನ್ನು ಮತ್ತೆ ಮತ್ತೆ ಹೇಳುತ್ತಿದ್ದೇನೆ. ನಾವೆಲ್ಲರೂ ಭಾರತವನ್ನು ರಾಷ್ಟ್ರವಾಗಿ ನೋಡಿದಾಗ ಸಮಾಜವಾಗಿ ನೋಡುವುದಿಲ್ಲ. ಸಮಾಜವಾಗಿ ನೋಡಿದಾಗ ರಾಷ್ಟ್ರವಾಗಿ

ನೋಡುವುದಿಲ್ಲ. ಸಮಾಜವಾಗಿ ಇಂಡಿಯಾವನ್ನು ನೋಡಿದಾಗ ಇಲ್ಲಿ ಯಾರು ಯಾರ ಮೇಲೆ ದಬ್ಬಾಳಿಕೆ ಮಾಡುತ್ತಾರೆ, ಹೆಂಗಸರ ಸ್ಥಿತಿ ಏನಾಗಿದೆ, ಇಲ್ಲಿ ಶೂದ್ರರು ಏನಾಗಿದ್ದಾರೆ, ಬಡವರು ಹೇಗಿದ್ದಾರೆ ಇವೆಲ್ಲ ನೋಡಬೇಕಾಗುತ್ತದೆ. ರಾಷ್ಟ್ರ ಎಂದು ನೋಡಿದಾಗ ನಾವೆಲ್ಲ ಒಬ್ಬನ ತುಳಿತಕ್ಕೆ ಒಳಗಾಗಿದ್ದೇವೆ. ಒಗ್ಗಟ್ಟಾಗಬೇಕು ಎಂದು ಹೇಳಬೇಕಾಗುತ್ತದೆ. ನೀವು ಬರೀ ರಾಷ್ಟ್ರೀಯವಾದಿಯಾಗಿದ್ದರೆ ಇಡೀ ದೇಶವನ್ನು ಒಟ್ಟು ಮಾಡುವುದಕ್ಕಾಗುತ್ತಿರಲಿಲ್ಲ. ಬಡಬಗ್ಗರು ಇದರಲ್ಲಿ ಒಳಗಾಗುತ್ತಿರಲಿಲ್ಲ. ಒಮ್ಮೆ ಅಮೆರಿಕನ್ ಜರ್ನಲಿಸ್ಟ್ ಬಂದು ಗಾಂಧಿಯನ್ನು what is your agenda? ಅಂತ ಕೇಳುತ್ತಾರೆ. ಏನು ಹೇಳಬೇಕು ಗಾಂಧಿ– 'ರಾಷ್ಟ್ರದಲ್ಲಿ ರಾಜಕೀಯ ಸ್ಥಿತ್ಯಂತರ ನನ್ನ ಅಜೆಂಡಾ' ಅಂತ ಹೇಳಬೇಕು. 'ಬ್ರಿಟಿಷರಿಂದ ಸ್ವಾತಂತ್ರ್ಯ ತೆಗೆದುಕೊಳ್ಳುವುದು ನನ್ನ ಅಜೆಂಡಾ' ಅಂತ ಹೇಳಬೇಕು. ಅವನ ಆಶ್ಚರ್ಯಕ್ಕೆ ಗಾಂಧಿ ಅದನ್ನು ಹೇಳುವುದೇ ಇಲ್ಲ. 'My agendas are three. ಮೊದಲನೆಯದು ಹಿಂದೂ ಮುಸ್ಲಿಂ ಯೂನಿಟಿ, ಎರಡನೆಯದು, removal of untouchability ಮೂರನೆಯದು, ಸ್ವದೇಶಿ'. ನಾಲ್ಕನೆಯದು ಯಾವುದು? ಅವರು ಹೇಳುವುದೇ ಇಲ್ಲ. ಯಾಕೆಂದರೆ ಈ ಮೂರು ಈಡೇರಿದರೆ ಬ್ರಿಟಿಷರಿಗೆ ಇಲ್ಲಿ ಇರುವ ಅಗತ್ಯವೇ ಇಲ್ಲ.

ನಿಜವೆಂದರೆ ಬ್ರಿಟಿಷರು ತಮ್ಮ ಸರಕು ಸಾಮಾನು ಮಾರುವುದಕ್ಕೆ ಬಂದವರು. ಅವರ ಉದ್ದೇಶ ಮಾರುಕಟ್ಟೆ ಹುಡುಕುವುದು. ಸ್ವದೇಶೀ ಚಳುವಳಿ ಮಾಡಿದಾಗ ಗಾಂಧಿ ಮ್ಯಾಂಚೆಸ್ಟರ್‌ಗೆ ಹೋಗುತ್ತಾರೆ. ಅಲ್ಲಿ ಮಿಲ್ಲುಗಳು ಮುಚ್ಚಿದ್ದವು. ಅವರು ಒಂದು ಮಿಲ್ಲಿಗೆ ಹೋಗಿ ಅಲ್ಲಿ ಕೆಲಸ ಕಳೆದುಕೊಂಡವರನ್ನು ಭೇಟಿಯಾಗಿ ನಮ್ಮ ಸ್ವದೇಶಿ ಚಳುವಳಿಯಿಂದ ನೀವು ಕೆಲಸ ಕಳೆದುಕೊಂಡಿದ್ದೀರಿ. ನಮಗೆ ನಿಮ್ಮ ಸಹಾನುಭೂತಿ ಬೇಕು ಅಂತ ಕೇಳುತ್ತಾರೆ. ಆ ಸಂದರ್ಭದಲ್ಲಿ ಕೆಲಸ ಕಳೆದುಕೊಂಡ ಒಂದು ಹಣ್ಣು ಹಣ್ಣು ಮುದುಕಿ ಬಂದು ಇವರಿಗೆ ಒಂದು ಮುತ್ತು ಕೊಡುತ್ತಾಳೆ. ಅದೊಂದು ಅದ್ಭುತ ದೃಶ್ಯ. ಇದು ಸ್ವದೇಶಿ. ಮ್ಯಾಂಚೆಸ್ಟರ್‌ನ ಕೆಲಸ ಕಳೆದುಕೊಂಡ ಮುದುಕಿಯನ್ನು ಪ್ರೀತಿಸಬಲ್ಲ ಸ್ವದೇಶಿ.

ಅವರು ಮೊದಲನೆಯ ದರ್ಜೆಯ ರೈಲಿನಲ್ಲಿ ಕುಳಿತಾಗ ಅವರನ್ನು ತಳ್ಳಿ ಹೊರಗೆ ಹಾಕಿದಾಗ ಅವರಿಗೆ ಬರೇ ಸಿಟ್ಟು ಬಂದಿದ್ದರೆ ಅವರು ಸಾವರ್ಕರ್ ಆಗುತ್ತಿದ್ದರು. ಆ ಸಿಟ್ಟಿನ ಜೊತೆಗೆ ಅವರಿಗೆ ನಮ್ಮ ದೇಶದಲ್ಲಿ ನಾವು ಕೂಡ ಬೇರೆಯವರಿಗೆ ಈ ತರ ಮಾಡುತ್ತೇವೆ ಅಂತ ಅನ್ನಿಸಿದ್ದರಿಂದ ಅವರು ಗಾಂಧಿ ಆದರು. ಒಂದೇ ಅನ್ನಿಸಿದ್ದರೆ ಬ್ರಿಟಿಷರ ವಿರುದ್ಧ ದಂಗೆಗೆ ಸಾಮಗ್ರಿಯಾಗುತ್ತಿತ್ತು. ತನ್ನನ್ನು ಕರಿಯ ಅಂತ ಹೊರಗೆ ಹಾಕಿದಾಗ, ನಾವು ಹೊಲೆಯ ಅಂತ ಹೊರಗಿಡುತ್ತೇವಲ್ಲ ಅಂತ ನೆನಪಾಗದಿದ್ದರೆ ಅವರು ಗಾಂಧಿ ಆಗುತ್ತಿರಲಿಲ್ಲ.

ಆದ್ದರಿಂದ ನಮಗೆ ರಾಷ್ಟ್ರ ಅಂದಾಗ ಸಮಾಜದ ನೆನಪಾಗಬೇಕು. ಸಮಾಜದ ಪ್ರಶ್ನೆ ಎತ್ತಿದಾಗ ರಾಷ್ಟ್ರದ ನೆನಪಾಗಬೇಕು. ತಿಲಕರು ಸತ್ತಾಗ ಬಹಳ ದೊಡ್ಡ ಪ್ರಮಾಣದಲ್ಲಿ ಅವರ ಶವ ಸಂಸ್ಕಾರ ಆಗುತ್ತದೆ. ಲಕ್ಷಾಂತರ ಜನ ಹೋಗುತ್ತಾರೆ. (ಕೆಲವರು ಹೇಳುತ್ತಾರೆ. ಮೊದಲ ಡಾಕ್ಯುಮೆಂಟರಿ ಸಿನೆಮಾ ಆದದ್ದು ತಿಲಕ್ ಸತ್ತಾಗ) ಆಗ ಒಬ್ಬ ಗಾಂಧಿಯವರ ಪತ್ರಿಕೆಯಾದ **ಹರಿಜನ್**‌ಗೆ ಒಂದು ಕಾಗದ ಬರೆಯುತ್ತಾನೆ. ಇದು ಏನೆಂದು ಹೇಳುವ ಮುಂಚೆ ವಿವರಣೆ ಬೇಕು–ಗೋಖಲೆ ಬಗ್ಗೆ. ಗೋಖಲೆ ಸ್ವಲ್ಪ ಲಿಬರಲ್ ವಾದಿ. ಗಾಂಧಿ ತಾನು ಗುರು ಅಂತ ತಿಳಿದುಕೊಂಡಿದ್ದು ಗೋಖಲೆಯನ್ನು ಮಾತ್ರ. ಗೋಖಲೆ ಉದ್ದದ ಕೋಟು ಹಾಕುತ್ತಿದ್ದರು. ಗಾಂಧಿ ಇದು ಯಾಕೆ ಅಂತ ತಮಾಷೆ ಮಾಡಿದರೆ ' ಇದು ನನಗೋಸ್ಕರ ಅಲ್ಲ ಜನಗಳಿಗೋಸ್ಕರ' ಎನ್ನುತ್ತಿದ್ದರಂತೆ. ವಯಸ್ಸಾದ ಕಾರಣ ಅವರಿಗೆ ಬಗ್ಗಿ ಈ ಉದ್ದನೆಯ ಕೋಟನ ಗುಂಡಿ ಹಾಕುವುದು ಕಷ್ಟ ಆಗುತ್ತಿತ್ತು. ಗಾಂಧಿ ಅವರ ಕೋಟಿನ ಎಲ್ಲಾ ಗುಂಡಿಗಳನ್ನು ಹಾಕುತ್ತಿದ್ದರಂತೆ, ಗೋಖಲೆ ಅಷ್ಟು ಹತ್ತಿರ ಅವರಿಗೆ.

ತಿಲಕರು ಸತ್ತಾಗ ಹರಿಜನ ಪತ್ರಿಕೆಗೆ ಯಾರೋ ಒಬ್ಬ ನನ್ನ ಹೆಸರು ಬಚ್ಚಿಟ್ಟು ಬರೆದ ಪತ್ರದ ಸಾರಾಂಶ ಇದು: 'ನೀನು ತಿಲಕ್‌ವಾದಿ ಆಗಬೇಕಿತ್ತು– ನೀನು ಸುಮ್ಮನೆ ಗೋಖಲೆಯ ಶಿಷ್ಯ ಅಂತ ಕರೆದುಕೊಳ್ಳುತ್ತಿಯಾ? ಅದು ಸುಳ್ಳು' ಗಾಂಧೀ ಇದಕ್ಕೆ ಹೀಗೆ ಉತ್ತರ ಬರೆಯುತ್ತಾರೆ 'ನೀವು ನಿಮ್ಮ ಹೆಸರನ್ನು ಬಚ್ಚಿಟ್ಟು ಯಾಕೆ ಬರೆದರೊ ಗೊತ್ತಿಲ್ಲ. ನಾನು ಸತ್ಯ ಹೇಳುತ್ತೇನೆ. ತಿಲಕರು ಬಹಳ ದೊಡ್ಡವರು. ಅವರ ಹತ್ತಿರ ಹೋದಾಗ ನನಗೆ ಗಾಬರಿ ಆಗುತ್ತಿತ್ತು. I never felt comfortable. ಆದರೆ ಗೋಖಲೆ ಜೊತೆ I felt very comfortable'.

ಈ ಮಾತುಗಳಿಗೆ ಪೂರಕವಾಗಿ ಲೋಹಿಯಾ ಹೇಳಿದ ಒಂದು ಘಟನೆ ನೆನಪಾಗುತ್ತದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಸೌತ್ ಆಫ್ರಿಕಾವನ್ನು ಬಿಳಿಯರ ಆಡಳಿತದಿಂದ ಈಗಿಂದೀಗಲೇ ಬಿಡುಗಡೆ ಮಾಡಬೇಕು ಅಂತ ಅವರು ಒಂದು ನಿರ್ಣಯ ಮಂಡಿಸಿದರಂತೆ. ಗಾಂಧೀ ಅದನ್ನು ವಿರೋಧಿಸಿದರು ಎಂದು ಲೋಹಿಯಾಗೆ ಶಾಕ್ ಆಯಿತು. ಮರುದಿನ ವಾಕ್ ಹೋಗುವಾಗ ಗಾಂಧಿ ಹೇಳಿದರಂತೆ– ಸದ್ಯಕ್ಕೆ ನಮಗೆ ಮಾಡಲು ಆಗದೇ ಇರುವುದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು emotional indulgence. ಅಥವಾ ರಾಜಕೀಯ ತೋರುಗಾಣಿಕೆಯಾಗಿಬಿಡುತ್ತದೆ. ನೈಜ ಕ್ರಾಂತಿಕಾರಕ ಸಮಾಧಾನಿಯೂ ಆಗಿರಬೇಕು. ಅದಕ್ಕೇ ಗೋಖಲೆ ಗಾಂಧಿಗೆ ತಿಲಕರಿಗಿಂತ ಹೆಚ್ಚು ಪ್ರಿಯರು.

ಆದರೆ ಒಂದು ತೀರ್ಮಾನಕ್ಕೆ ಬಂದದ್ದೇ ಗಾಂಧಿ ಅಚಲರು: ತನ್ನ ನಂಬಿಕೆಗೆ ತ್ರಿಕರಣಪೂರಕವಾಗಿ ಬದ್ಧರು. ತನ್ನ ಮಗ ರಾಜಗೋಪಾಲಾಚಾರ್ಯರ ಮಗಳನ್ನು ಮದುವೆಯಾಗುತ್ತೇನೆ ಅಂದಾಗ ಬೇಡ ಅಂದರು. ಯಾಕೆಂದರೆ ನಮ್ಮಲ್ಲಿ ಮೇಲ್ಜಾತಿಯವರ ಹೆಣ್ಣು ಮಕ್ಕಳನ್ನು ಕೆಳಜಾತಿಯವರು ತರಬಾರದು ಎಂಬ ಮಟ್ಟಿಗೆ ಅವರು traditional. ಆಮೇಲೆ ಹೀಗೆ ಮದುವೆ ಆಗುವುದು ಸರಿ ಅಂತ ಗೊತ್ತಾದಾಗ ಇನ್ನು ಇಂಟರ್‌ಕಾಸ್ಟ್ ಮದುವೆಗಳಿಗೆ ಮಾತ್ರ ತಾನು ಹೋಗುವುದು ಎಂದಿದ್ದರು. ನಾವು ಇಂಟೆಲೆಕ್ಚುಯಲ್ಸ್ –ನಾಲ್ಕೈದು ಸ್ಟೆಪ್ ತೆಗೆದುಕೊಂಡಂತೆ ಕಂಡಿದ್ದರೂ ನಲ್ಕೈದು ಸ್ಟೆಪ್ ಹಿಂದೆ ಹೋಗಿರುತ್ತೇವೆ. ಆಳುವವರು ಯಾರು ಅಂತ ನಾವು ನೋಡುತ್ತಿರುತ್ತೇವೆ. ಅವರಿಗೆ ಸರಿಯೆನ್ನಿಸುವಂತೆ ಇರಲು ಸ್ವಲ್ಪವಾದರೂ ಮಾತಾಡಿರುತ್ತೇವೆ. ಅದಕ್ಕೆ ನಾನು ಹೇಳಿದ್ದು– ಅವರು ಸಮಾಜ ಮತ್ತು ರಾಷ್ಟ್ರದ ಪ್ರಶ್ನೆಯನ್ನು ಒಬ್ಬ ಸಂಸಾರಿಯ ನೆಲೆಯಲ್ಲಿ ನೋಡುತ್ತಾ ಇದ್ದರು. ಆದುದರಿಂದಲೇ ಭಾರತದ ಎಲ್ಲ ಜನ ಅವರೊಂದಿಗೆ ಭಾಗಿಯಾಗುವುದು ಸಾಧ್ಯ ಆಯಿತು.

–ಮಾಹಿತಿ ಸೌಜನ್ಯ : ಮಾತು ಸೋತ ಭಾರತ ಕೃತಿಯಿಂದ ಆಯ್ದ ಲೇಖನದ ಸಂಕ್ಷಿಪ್ತ ಭಾಗ





# ಗಾಂಧಿ ಅಂಬೇಡ್ಕರ್

## – ಒಂದಿಷ್ಟು ಮಾತು



ದೇವನೂರು ಮಹಾದೇವ

**ಗಾಂಧಿ ಕಾಠಿಣ್ಯದ ತಂದೆಯಂತೆ, ಜೆ.ಪಿ. ಅಸಹಾಯಕ ತಾಯಿಯಂತೆ, ವಿನೋಭಾ ಮದುವೆಯಾಗದ ವ್ರತನಿಷ್ಠ ಅಕ್ಕನಂತೆ, ಲೋಹಿಯಾ ಊರೂರು ಅಲೆಯುವ ಮನೆ ಸೇರದ ಅಲೆಮಾರಿಗ, ಅಂಬೇಡ್ಕರ್ ತಾರತಮ್ಯಕ್ಕೆ ಒಳಗಾಗಿ ಮುನಿಸಿಕೊಂಡ ಮನೆಯ ಹೊರಗೆ ಇರುವ ಮಗ. ಇದು ನಮ್ಮ ಕುಟುಂಬ. ನಾವು ಇಲ್ಲಿನ ಸಂತಾನ. ಇದನ್ನು ಹೀಗಲ್ಲದೆ ಹೇಗೆ ನೋಡಬೇಕು? ಎಂಬ ಪ್ರಶ್ನೆಯೊಂದಿಗೆ ವರ್ತಮಾನದ ಭಾರತದ ರಾಜಕಾರಣದ ಬಿಕ್ಕಟ್ಟು ರೂಪಕ ಭಾಷೆಯಲ್ಲಿ ಬಣ್ಣಿಸಿದ ದೇವನೂರು ಮಹಾದೇವ ಅವರು ನಮ್ಮ ನಡುವಿನ ಬಹು ದೊಡ್ಡ ಸಾಕ್ಷಿ ಪ್ರಜ್ಞೆ. ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಮುಖಾಮುಖಿಯಾಗಿ ನಿಲ್ಲಿಸಿಕೊಂಡು ಮಾತು ಮತ್ತು ಬರೆವಣಿಗೆಯ ಕತ್ತಿ ಝಳಪಿಸುತ್ತಿದ್ದವರ ಎದೆಗೆ ನಾಟುವಂತೆ ಅವರು ಆಡಿದ ಮಾತಿನ ಬರಹದ ರೂಪವಿದು**

**ಗಾಂ**ಧಿಯವರ ನಡಿಗೆಯ ಪ್ರತಿ ಹೆಜ್ಜೆಯೂ ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವವನೊಬ್ಬ ಮಾಡುವ ಪ್ರಯತ್ನದಂತೆ ಕಾಣಿಸುತ್ತದೆ. ಅವರು ಮಾಡಿದ ಎಲ್ಲಾ ಕೆಲಸಗಳ ಆಳದ ತುಡಿತವು ತನ್ನ ಬಿಡುಗಡೆಗಾಗೇ, ತನ್ನ ಮೋಕ್ಷಕ್ಕಾಗೇ ಎಂಬಂತೆ ಇವೆ. ಗಾಂಧಿ ತಮ್ಮ ಆತ್ಮಕತೆಯ ಕೊನೆಯಲ್ಲಿ ಒಂದು ಕಡೆ 'ಸಕಲ ಜೀವಿಗಳಲ್ಲೂ ದೇವರನ್ನು ಕಾಣುವ ನಮ್ರ ಪ್ರಯತ್ನ ತಮ್ಮ ಜೀವನ' ಎಂಬರ್ಥದಲ್ಲಿ ಹೇಳಿಕೊಂಡಿದ್ದಾರೆ. ಈ ನುಡಿಗೆ ಪ್ರಜ್ಞಾಪೂರ್ವಕವಾಗಿ ನಡೆಯುತ್ತ, ಮುಂದಿಡುವ ಪ್ರತಿ ಹೆಜ್ಜೆಗಳನ್ನೂ ಪರೀಕ್ಷಿಸಿಕೊಳ್ಳುತ್ತ ನಡೆವವನಂತೆ ಗಾಂಧಿ ಕಾಣಿಸುತ್ತಾರೆ.

ಹೀಗೆ ನಡೆವವನಿಗೆ ಜಗತ್ತು ಹೇಗೆ ಕಾಣಿಸಬಹುದು? ಐಕ್ಯತೆ ದೈವದಂತೆ, ಭಿನ್ನತೆ ದೆವ್ವದಂತೆ, ಜಗತ್ತು ಒಂದು ಕುಟುಂಬದಂತೆ. ಹೀಗೆ ಭಾವಿಸಿದಾಗ ಮಾತ್ರವೆ 'ಉಪವಾಸ'ವನ್ನು 'ಸತ್ಯಾಗ್ರಹ'ವನ್ನಾಗಿ ಮಾಡಲು ಆಗುತ್ತದೆ. ಯಾಕೆಂದರೆ



ಉಪವಾಸವು ಸತ್ಯಗ್ರಹವಾಗಿ ಪರಿಣಮಿಸುವುದು ತನ್ನವನೊಡನೆ ಅಥವಾ ಎದುರಾಳಿ ತನ್ನವನೆಂಬ ಭಾವನೆ ಇದ್ದಲ್ಲಿ ಮಾತ್ರ.


ಇಂಥ ಗ್ರಹಿಕೆಯು ಈ ಸೆಮಿನಾರಿನಲ್ಲಿ ನಡೆಯುತ್ತಿರುವ ಸಂಸ್ಕೃತಿ ಪರಿಕಲ್ಪನೆಯನ್ನೂ ಕೂಡಾ ಹೀಗೆ ನೋಡುತ್ತಿತ್ತು: ಈ ಸಂಸ್ಕೃತಿ ಚರ್ಚೆಗಳು ಐಕ್ಯತೆ ಕಡೆಗೆ ಅಂದರೆ ದೈವದತ್ತ ಇಡುತ್ತಿರುವ ಹೆಜ್ಜೆಗಳೋ ಅಥವಾ ಭಿನ್ನತೆ ತಾರತಮ್ಯದ ಕಡೆಗೆ ಅಂದರೆ ದೆವ್ವದ ಕಡೆಗೆ ಇಡುತ್ತಿರುವ ಹೆಜ್ಜೆಗಳೋ ಎಂದು ನೋಡುತ್ತಿತ್ತು. ಒಂದು ಗುಡಿ, ಚರ್ಚ್, ಮಸೀದಿ, ಮಠಗಳಲ್ಲಿ ಭಿನ್ನತೆ ತಾರತಮ್ಯ, ಅಸ್ಪೃಶ್ಯತೆ ಇದ್ದರೆ ಅವರು ಪೂಜಿಸುತ್ತಿರುವುದು ದೆವ್ವವನ್ನು ಎಂಬುದು ಕಾಣುತ್ತಿತ್ತು. ಬಾಬರಿ ಮಸೀದಿ ಬೀಳಿಸಿದವರು ದೇವರ ನಾಮ ಜಪಿಸುತ್ತಿದ್ದರೂ ಭಿನ್ನತೆಗಾಗಿ ಆ ಕ್ರಿಯೆ ನಡೆದ ದೆಸೆಯಿಂದಾಗಿ ಅವರ ಎದೆಯೊಳಗೆ ದೆವ್ವ ಕುಣಿಯುವುದು ಕಾಣಿಸುತ್ತಿತ್ತು. ತಾರತಮ್ಯ ಅಂತರ ಹೆಚ್ಚಿಸುವ ಒಂದು ಕಾನೂನು ಅಥವಾ ಒಂದು ಕಾರ್ಯಕ್ರಮ ದೈವದಿಂದ ದೂರವಾಗುತ್ತಿರುವುದು ಪ್ರಕ್ರಿಯೆಯಾಗಿ ಕಂಡು ಅದಕ್ಕಾಗಿ ಅದನ್ನು ಪ್ರತಿಭಟಿಸಲು ಪ್ರೇರೇಪಿಸುತ್ತಿತ್ತು.

ಈಗ ದೈವ ಮತ್ತು ದೆವ್ವವನ್ನು ಕೈಬಿಟ್ಟು ಐಕ್ಯತೆ ಹಿಡಿದುಕೊಂಡು ಇಂದಿನ ಅಗತ್ಯವಾದ ಗಾಂಧಿ, ಅಂಬೇಡ್ಕರ್ ಬಳಿಗೆ ಬರುವೆ.

ಇಂದು ಗಾಂಧಿ ಮತ್ತು ಅಂಬೇಡ್ಕರ್ ಅವರ ಕೃತಿ ಮತ್ತು ವ್ಯಕ್ತಿತ್ವಗಳು ಪ್ರಭಾವಿಸುತ್ತಿರುವ ರೀತಿಗಳು ಬೇರೆ ಬೇರೆಯಾಗೇ ಇವೆ. ಇದನ್ನು ಅರ್ಥಮಾಡಿಕೊಳ್ಳಲು ಗೆಳೆಯ ಸಿದ್ಧಲಿಂಗಯ್ಯನವರ ಗ್ರಹಿಕೆ: ಅಜ್ಜ ಮೊಮ್ಮಗನಿಗೆ ಗಾಂಧಿಯ ಬಗ್ಗೆ ಹೇಳುತ್ತಾರೆ– 'ನಮ್ಮ ಕಾಲದಲ್ಲಿ ಮಹಾತ್ಮಾಗಾಂಧಿ ಅಂತ ಒಬ್ಬರು ಇದ್ದರು. ಅವರು ಬ್ರಿಟೀಷರನ್ನು ಓಡಿಸಿ ಸ್ವಾತಂತ್ರ್ಯವನ್ನು ತಂದುಕೊಟ್ಟರು. ನಾವು ಈಗ ಇರುವ ಸ್ಥಿತಿಗತಿಗೆ ಗಾಂಧಿನೇ ಕಾರಣ'. ಅದೇ ಅಂಬೇಡ್ಕರ್ ಬಗ್ಗೆ ಮೊಮ್ಮಗ ಅಜ್ಜನಿಗೆ ಹೇಳುತ್ತಾನೆ– 'ಅಜ್ಜಾ ನೀನು ಚಿಕ್ಕವನಿದ್ದಾಗ ಅಂಬೇಡ್ಕರ್ ಅಂತ ನಮ್ಮವರೊಬ್ಬರು ಇದ್ದರು, ಅವರು ನಮ್ಮ ಜನಾಂಗಕ್ಕಾಗಿ ತುಂಬಾ ಹೋರಾಡಿದರು. ನಾವು ಈಗ ಇರುವ ಸ್ಥಿತಿಗತಿಗೆ ಅಂಬೇಡ್ಕರ್ ಕಾರಣ.' ಗಾಂಧಿ ಬಗ್ಗೆ ಮಾಗಿದ ಹಣ್ಣಿಗೆ ಹೇಳುತ್ತದೆ! ಹಾಗಾಗಿ ಮೊದಲದರಲ್ಲಿ ನಿಧಾನತೆ ಇದ್ದರೆ ಎರಡನೆಯದರದಲ್ಲಿ ವೇಗ ಇದೆ. ಈ ನಡಿಗೆಯಿಂದಾಗಿ ಒಂದೇ ಆಶಯವು ಪರಸ್ಪರ ವಿರುದ್ಧವಾಗಿ ಕಾಣಲೂಬಹುದು. ದಲಿತರ ಮೊದಲ ವಿದ್ಯಾವಂತ ತಲೆಮಾರು ಗಾಂಧಿ ಅಂಬೇಡ್ಕರರ ಆಶಯಗಳ ನಾಡಿ ಹಿಡಿದು ಈ ಬಿಕ್ಕಟ್ಟಿನಿಂದ ಪಾರಾಗಿತ್ತು ಎಂದು ಕಾಣುತ್ತದೆ. ಯಾಕೆಂದರೆ ದಲಿತರ ನವಪೀಳಿಗೆ ಅಂಬೇಡ್ಕರ್ ಪೋಟೋ ಮಾತ್ರ ಇಟ್ಟುಕೊಂಡರೆ ದಲಿತರ ಹಿಂದಿನ ತಲೆಮಾರು ಗಾಂಧಿ ಮತ್ತು ಅಂಬೇಡ್ಕರ್ ಈ ಇಬ್ಬರ ಫೋಟೋಗಳನ್ನು ಇಟ್ಟುಕೊಂಡಿರುತ್ತಿತ್ತು.

ಹಾಗಾದರೆ ದಲಿತರ ಹಿಂದಿನ ತಲೆಮಾರು ಗಾಂಧಿ, ಅಂಬೇಡ್ಕರ್‌ರ ಜಗಳವನ್ನು ಹೇಗೆ ಕಂಡಿತ್ತು? ಮಕ್ಕಳ ಹಿತಕ್ಕಾಗಿ ಎಂದುಕೊಂಡು ಜಗಳಮಾಡುವ ಅಪ್ಪ ಅಮ್ಮನಂತೆ? ಹೀಗಲ್ಲದಿದ್ದರೆ ಈ ಇಬ್ಬರ ಫೋಟೋಗಳನ್ನು ಒಟ್ಟಿಗೆ ಇಟ್ಟುಕೊಳ್ಳುವುದು ಹೇಗೆ ಸಾಧ್ಯ? ಉದಾ: ಮಗುವನ್ನು ಕನ್ನಡ ಮಾಧ್ಯಮಕ್ಕೆ ಸೇರಿಸಬೇಕು ಅಂತ ಅಪ್ಪ ವಾದಿಸುತ್ತಾನೆ. ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಬೇಕು ಅಂತ ಅಮ್ಮ ವಾದಿಸುತ್ತಾರೆ. ಜಗಳವಾಗುತ್ತದೆ. ಆದರೆ ಜಗಳದಲ್ಲಿ ಏನಿದೆ? ಮಗುವಿನ ಹಿತವೇ ಅಲ್ಲವೇ? ಪೂನಾ ಒಪ್ಪಂದದಲ್ಲೂ ಏನಿದೆ? 'ನನ್ನಲ್ಲಿ ತಪ್ಪದೆ, ನಿಜ, ಹಾಗಂತ ಡೈವೋರ್ಸ್ ಕೊಡಬೇಡ' ಎಂಬುದು ತಾನೆ?

ಹಾಗೆ ಹಿಂದು ಧರ್ಮಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಗಾಂಧಿ ಮತ್ತು ಅಂಬೇಡ್ಕರ್‌ರನ್ನು ಪರಸ್ಪರ ವಿರೋಧಿಗಳನ್ನಾಗಿಸುತ್ತೇವೆ. ಅಂಬೇಡ್ಕರ್ ಅವರದು ತಾರ್ಕಿಕ ದೃಷ್ಟಿಕೋನವಾದರೆ ಗಾಂಧಿಯವರು ತರ್ಕಾತೀತ ದೃಷ್ಟಿಕೋನದವರು, ಹಾಗಾಗಿ ಸಮಕಾಲೀನರ ನಡುವೆ ಜಗಳವೂ ನಡೆಯಬಹುದು. ಇದನ್ನು ನಾವು ಪರಿಣಾಮದಲ್ಲಿ ನೋಡಬೇಕು. ಯಾಕೆ ಉಗ್ರ ಹಿಂದೂ ಗೋಡ್ಸೆ ಗಾಂಧಿಯನ್ನು ಕೊಂದ? ಗಾಂಧಿ ಸತ್ತಾಗ ಬ್ರಾಹ್ಮಣ ವಠಾರವು 'ವರ್ಣಸಂಕರ ಮಾಡುವ ಕಲ್ಕಿಯ ಅವತಾರ ಸಧ್ಯ ಕೊನೆಗೊಂಡಿತು' ಎಂದು ಯಾಕೆ ಸಮಾಧಾನಪಟ್ಟಿತ್ತು? ಹೀಗಾದರೆ ಗಾಂಧಿ ಹಿಂದೂ





ಧರ್ಮದಲ್ಲಿ ಮಾಡುತ್ತಿದ್ದುದಾದರೂ ಏನು? ಗಾಂಧಿ ಅಸಮಾನತೆಯ ಹಿಂದೂಧರ್ಮ ಎಂಬ ಬಚ್ಚಲ ಕೊಳಕು ನೀರನ್ನು ಭಟ್ಟಿ ಇಳಿಸುತ್ತ ತಿಳಿಗೊಳಿಸುತ್ತಿದ್ದರು. ಚಿಟ್ಟೆಯಾಗಲಾರದ ಬಚ್ಚಲು ಹುಳುಗಳಿಗೆ ಉಸಿರು ಕಟ್ಟಿತ್ತು. ಇದನ್ನು ಹೀಗಲ್ಲದೆ ಬೇರೆ ಯಾವ ರೀತಿ ಅರ್ಥಮಾಡಿಕೊಳ್ಳಲು ಸಾಧ್ಯ? ಕೊನೆ ಕೊನೆಯಲ್ಲಿ ಅಂತರ್ಜಾತೀಯ ಮದುವೆಗೆ ಮಾತ್ರ ಹೋಗಿ ಆಶೀರ್ವಾದಿಸುವ ನಿಲುವಿಗೆ ಬರುವ ಗಾಂಧಿಯನ್ನು ಮತ್ತೆ ಹೇಗೆ ಅರ್ಥಮಾಡಿಕೊಳ್ಳಬೇಕು?

ಹೀಗೆ ಕಾಣಿಸುತ್ತದೆ: ಹಿಂದೂ ಧರ್ಮ ಎಂಬ ಮನೆಯೊಳಗೆ ಭಿನ್ನಭಾವ ಜಾತಿ ತಾರತಮ್ಯದ ಕಂಬಗಳನ್ನು ಒಳಗೊಳಗೇ ಕೊಯ್ಯುವವನಂತೆ ಗಾಂಧಿ ಕಾಣಿಸುತ್ತಾರೆ. ಅದೇ ಅಂಬೇಡ್ಕರ್ ಹೊರಗಿನಿಂದ ಆ ಅಸಮಾನತೆಯ ಮನೆಗೆ ಕಲ್ಲೆಸೆಯುವವನಂತೆ ಕಾಣಿಸುತ್ತಾರೆ. ಈ ಪ್ರಕ್ರಿಯೆಯಿಂದಾಗಿ ಅಂಬೇಡ್ಕರ್ ಎಸೆದ ಕಲ್ಲು ಒಳಗಿದ್ದ ಗಾಂಧಿಗೂ ಬಿದ್ದು ರಕ್ತ ಚೆಲ್ಲಿರಬಹುದು ಇದನ್ನು ಕಂಡು ಹೊರಲೋಕವು ಗಾಂಧಿಗೂ, ಅಂಬೇಡ್ಕರ್‌ಗೂ ಮಾರಾಮಾರಿ ಹೊಡೆದಾಡ ಎನ್ನಬಹುದು. ಆದರೆ ಇಬ್ಬರೂ ಮಾಡುತ್ತಿದ್ದುದು ಹೆಚ್ಚೂಕಮ್ಮಿ ಒಂದೇ ಕೆಲಸವನ್ನಲ್ಲವೇ?

ಹೀಗಿದ್ದೂ ಗಾಂಧಿ ಯಾಕೆ ಅಪಾರ್ಥಕ್ಕೆ ಒಳಗಾದರು? ಒಂದು ಊಹೆ ಮಾಡುವೆ. ಗಾಂಧಿ ಅಸ್ಪೃಶ್ಯರನ್ನು ಮಕ್ಕಳು ಎಂಬಂತೆ ಭಾವಿಸಿ ವರ್ತಿಸುತ್ತಿದ್ದರು. ಈ ವರ್ತನೆಯನ್ನು ಉಲ್ಟಾ ಮಾಡಿದರೆ, ಅಂದರೆ ಗಾಂಧಿ ಅಸ್ಪೃಶ್ಯರನ್ನು ಪಿತೃಗಳೆಂಬಂತೆ ಭಾವಿಸಿ ವರ್ತಿಸಿದ್ದರೆ ಈ ಅಪಾರ್ಥದಿಂದ ತಪ್ಪಿಸಿಕೊಳ್ಳಬಹುದಿತ್ತು ಎಂದು ನನಗನ್ನಿಸುತ್ತದೆ. ಇದು ಮೇಲ್ನೋಟಕ್ಕೆ ಸರಳವಾಗಿ ಒಂದೇ ಎಂಬಂತೆ ಕಂಡರೂ ಈ ನೋಟವು ನಡಾವಳಿಯನ್ನೇ ಬದಲಿಸಿಬಿಡುತ್ತದೆ. ಉದಾಹರಣೆಗೆ ಅಸ್ಪೃಶ್ಯರಿಗೂ ಸವರ್ಣೀಯರಿಗೂ ಸ್ಪರ್ಧೆ ಸವಾಲು ಬಂದಾಗ– ಮಕ್ಕಳಂತೆ ಭಾವಿಸಿದ ಮನಃಸ್ಥಿತಿ ಇದ್ದರೆ 'ಎಲ್ಲಾ ನಾನು ಸಾಕಿದ ಕೊಬ್ಬೆ ಎಂದು ಕ್ರೋಧ, ಅಸಹನೆ ಉಂಟಾಗುತ್ತದೆ. ಅದೇ ತಂದೆತಾಯಿಯಂತೆ ಭಾವಿಸಿದ ಮನಃಸ್ಥಿತಿ ಇದ್ದರೆ 'ನನ್ನನ್ನು ಸಾಕಿದವನು: ನಾನೆ ಸೋತರೆ ಏನಾಯ್ತು?' ಎಂಬ ಭಾವನೆ ಉಂಟಾಗುತ್ತದೆ. ದಲಿತರು ಆದಿಮ ಜನಾಂಗವಾದ್ದರಿಂದ ಈ ಪಿತೃ ಭಾವನೆಯೇ ಚಾರಿತ್ರಿಕವಾಗೂ ಸರಿ ಅನ್ನಿಸುತ್ತದೆ.

ಇಂಥ ಗಾಂಧಿಯನ್ನು ದಲಿತರು ಹೇಗೆ ಸ್ವೀಕರಿಸಬೇಕು? ಗಾಂಧಿಗೆ ಮುಂದಿನ ಜನ್ಮದಲ್ಲಿ ತಾನು ಹರಿಜನನಾಗಿ ಹುಟ್ಟಬೇಕು ಎಂಬ ಆಸೆ ಇತ್ತಂತೆ, ಹುಟ್ಟಿದರೆ ಒಳ್ಳೆಯದು. ಹುಟ್ತಾರೋ ಇಲ್ವೋ ಗೊತ್ತಿಲ್ಲ. ಆದರೆ ಒಂದು ಮಾಡಬಹುದು–ಗಾಂಧಿ ಸಾಹಿತ್ಯವನ್ನು ದಲಿತನ ಒಡಲಿಗೆ, ಹಿತಾಸಕ್ತಿಗೆ ಎಷ್ಟು ಒಗ್ಗುತ್ತದೋ ಅಷ್ಟನ್ನು ಮಾತ್ರ ಸಂಪಾದಿಸಿ ಇಟ್ಟುಕೊಂಡರೆ ಅಲ್ಲಿಂದ ಗಾಂಧಿ ಮತ್ತೆ ಹುಟ್ಟುತ್ತಾನೆ. ಇಡೀ ಜಗತ್ತಿನ ಹಿತವೂ ಇದರೊಳಗೆ ಇರಬಹುದು.

ಹೀಗೆ ಮಾಡುವಾಗ ಒಂದು ಎಚ್ಚರ ಬೇಕು ನಿನ್ನೆಯ ಗಾಂಧಿ ಇಂದಿಗೆ ಬದಲಾಯಿಸಿರುತ್ತಾರೆ.  ಇಂದಿನ ಗಾಂಧಿ ನಾಳೆಗೆ ಬದಲಾಯಿಸಿರುತ್ತಾನೆ. ಈ ನಡಿಗೆಯ ಕ್ರಮದಲ್ಲೇ ಗಾಂಧಿಯ ಆಸೆ–ಚಿಂತನೆಗಳಿಗೂ ನಡಿಗೆ ಇದೆ. ಇಡೀ ಸಮುದಾಯವನ್ನು ತನ್ನ ಜತೆಯಲ್ಲೇ ಕರೆದೊಯ್ಯುವವನ ಕಷ್ಟ ಇದಾಗಿರಬಹುದು. ಇದರಿಂದಾಗಿ ಬೇಕಾದವರು, ಬೇಕಾದ್ದನ್ನು

**ಗಾಂಧಿಗೆ ಮುಂದಿನ ಜನ್ಮದಲ್ಲಿ ತಾನು ಹರಿಜನನಾಗಿ ಹುಟ್ಟಬೇಕು ಎಂಬ ಆಸೆ ಇತ್ತಂತೆ, ಹುಟ್ಟಿದರೆ ಒಳ್ಳೆಯದು. ಹುಟ್ತಾರೋ ಇಲ್ವೋ ಗೊತ್ತಿಲ್ಲ. ಆದರೆ ಗಾಂಧಿ ಸಾಹಿತ್ಯವನ್ನು ದಲಿತನ ಒಡಲಿಗೆ, ಹಿತಾಸಕ್ತಿಗೆ ಎಷ್ಟು ಒಗ್ಗುತ್ತದೋ ಅಷ್ಟನ್ನು ಮಾತ್ರ ಸಂಪಾದಿಸಿ ಇಟ್ಟುಕೊಂಡರೆ ಅಲ್ಲಿಂದ ಗಾಂಧಿ ಮತ್ತೆ ಹುಟ್ಟುತ್ತಾರೆ. ಇಡೀ ಜಗತ್ತಿನ ಹಿತವೂ ಇದರೊಳಗೆ ಇರಬಹುದು.**


ತೆಗೆದುಕೊಂಡು ಇದೇ ಗಾಂಧಿ ಎನ್ನುವ ಸಾಧ್ಯತೆಗಳು, ದುರುಪಯೋಗಗಳು ಹೆಚ್ಚಿವೆ. ಆದ್ದರಿಂದ ಗಾಂಧಿಯ ಗುರಿ ಹಾಗೂ ಗಾಂಧಿ ಇಟ್ಟ ಕೊನೆಯ ಹೆಜ್ಜೆಗಳ ಗುರುತು ಹಿಡಿದು ಗಾಂಧಿಯನ್ನು ಪುನರ್ ರೂಪಿಸಬೇಕು. ಇದಕ್ಕೆ ಲೋಹಿಯಾರ ವಿವೇಕ ಚಿಂತನೆ ಸಹಾಯಕವಾಗುತ್ತವೆ. ಹೀಗೆ ಗಾಂಧಿಗೆ ಲೋಹಿಯಾ ಕೂಡಿಸಿದ ಮೇಲೆ ಲೋಹಿಯಾಗೆ ಅಂಬೇಡ್ಕರ್ ಜೊತೆಗೂಡಿಸಿ ಒಂದು ಸಾಮರಸ್ಯ ಪಡೆಯಬಹುದು.

ಈ ಬೆಳಕು ದಸಂಸ, ರೈತಸಂಘದಂಥ ಸಂಘಟನೆಗಳಿಗೆ ಕಣ್ಣಾಗಬಹುದು, ಈ ಸಂಘಟನೆಗಳು ಇತ್ತೀಚಿನ ದಿನಗಳಲ್ಲಿ ಸಮುದಾಯಕ್ಕೆ ಚಾಲನೆ ಕೊಟ್ಟು ಒಂದು ಸುತ್ತು ನಡೆದು ಬಂದು, ಈಗ ಜಡವಾಗಿ ಸುಸ್ತಾಗಿ ಮುಂಗಾಣದೆ ನಿಂತಿವೆ. ಈಗ ಇವು ಪೊರೆ ಕಳಚಬೇಕಾಗಿದೆ. ಇಲ್ಲಿ ಒಂದು ಮಾತು ಈಗೀಗ ಬುದ್ಧ, ಬಸವ, ಅಲ್ಲಮ, ಗಾಂಧಿ ಇಂಥ ಮಾತುಗಳು ಹೆಚ್ಚಾಗಿ ಕೇಳಿಬರುತ್ತಿವೆ. ಇಂಥವರ ಹೆಸರು ಹೇಳುವಾಗ ಸದಾ ನೆನಪಿಟ್ಟುಗೊಳ್ಳಬೇಕಾದ್ದು ಏನೆಂದರೆ–ಬುದ್ಧ, ಬಸವ, ಅಲ್ಲಮ, ಗಾಂಧಿಯಂಥವರು ತಮ್ಮ ಶತ್ರು ತಮ್ಮ ಒಳಗೂ ಇದ್ದಾನೆ ಎಂದು ಭಾವಿಸಿ ಹೆಣಗುತ್ತಿದ್ದರು. ಆಸೆ, ದ್ವೇಷ, ಅಸೂಯೆ, ನಾನತ್ವ ಇಂಥವು ತಮ್ಮ ಒಳಗಿನ ಶತ್ರು ಎಂದು ಭಾವಿಸುತ್ತಿದ್ದರು. ಆದರೆ ಸಮಾನತೆಗಾಗಿ ಹೋರಾಡುವ ಸಂಘಟನೆಗಳು ತಮ್ಮ ಶತ್ರು ಹೊರಗೆ ಇದ್ದಾನೆ ಎಂದು ಮಾತ್ರ ಹೋರಾಡುತ್ತಿವೆ. ಇದು ಎಲ್ಲಿಗೆ ತಂದು ನಿಲ್ಲಿಸುತ್ತದೆ? ಇಂದಿನ ಭ್ರಷ್ಟಾಚಾರ ವಿರೋಧಿಯೇ ನಾಳಿನ ಭ್ರಷ್ಟ ಎಂಬಲ್ಲಿಗೆ ನಾವು ತಲುಪಿಬಿಡಬಹುದು. ಯಾವುದನ್ನು ನಾವು ಇಂದು ವಿರೋಧಿಸುತ್ತೇವೆಯೋ ನಾಳೆ ನಾವು ಅದೇ ಆಗಬಹುದಾದರೆ ಮಾಡಿದ್ದಾದರೂ ಏನು?

ಅದಕ್ಕಾಗಿ ನಾವು ಒಂದು ಮಧ್ಯಮ ಮಾರ್ಗ ಕಂಡುಕೊಳ್ಳಬೇಕಾಗಿದೆ. ನಮ್ಮ ಶತ್ರು ನಮ್ಮ ಒಳಗೂ ಅರ್ಧ ಇದ್ದಾನೆ, ನಮ್ಮ ಹೊರಗೂ ಅರ್ಧ ಇದ್ದಾನೆ–ಈ ತಿಳಿವು ಈ ಎಚ್ಚರ ದಸಂಸ ರೈತಸಂಘಕ್ಕೆ ಹೊಸ ನಡಿಗೆ ನುಡಿ ಕೊಡಬಹುದೆ? ಆಗ ಬಹಿರಂಗದ ಹೋರಾಟಕ್ಕೆ ಕೊಟ್ಟ ಕಾಲವನ್ನು, ತನ್ನ ಅಂತರಂಗದ ಶತ್ರು ನಿರುಕಿಸಿ ಅದನ್ನೂ ಚಿವುಟಿ ಹಾಗುವುದಕ್ಕೂ ಅಷ್ಟೇ ಕಾಲ ಕೊಡಬೇಕಾಗುತ್ತದೆ. ನಾವು ಯಾವ ವ್ಯಕ್ತಿ, ವಸ್ತು ಗುಣಗಳ ಬಗ್ಗೆ ಈಗ ಅಸಹನೆ ಪ್ರತಿಭಟನೆ ಮಾಡುತ್ತಿರುತ್ತೇವೆಯೋ ಅದು ನಮ್ಮೊಳಗೂ ಇರಬಹುದಾದ ಎಚ್ಚರ ನಮ್ಮದಾಗುತ್ತದೆ. ಇದಾಗುತ್ತದೆಯೆ?

ಅಥವಾ ಇದು ಬಿಟ್ಟು ಬೇರೆ ದಾರಿ ಇದೆಯೇ?

**( ಸೌಜನ್ಯ– ಎದೆಗೆ ಬಿದ್ದ ಅಕ್ಷರ ಕೃತಿಯಿಂದ ಆಯ್ದ ಲೇಖನ)**



# ಗಾಂಧಿ ಮತ್ತು ನಾಸ್ತಿಕ ಗೊ.ರಾ.

## ಮುಖಾಮುಖಿಯ ನೆನಪುಗಳು

"ಗಾಂಧೀಜಿಯವರನ್ನು ಸನಾತನವಾದಿ ಎಂದು ಹೀಗೆಳೆಯುವವರೆಗೆ ಆಂಧ್ರಪ್ರದೇಶದ ನಿರೀಶ್ವರವಾದಿ ಜಿ.ರಾಮಚಂದ್ರರಾವ್ ರವರು (ಗೋ.ರಾ.). ನಡೆಸಿದ ಪತ್ರ ವ್ಯವಹಾರ ಹಾಗೂ ಸಂವಾದವು ಗಾಂಧಿಯವರ ವಿಚಾರದಾರೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ಮಹಾತ್ಮನ ಜೊತೆಗಿನ ಒಡನಾಟವನ್ನು ಅವರು **"An Atheist with Gandhi"** ಎಂಬ ಕೃತಿಯಲ್ಲಿ ಅರ್ಥಪೂರ್ಣವಾಗಿ ದಾಖಲಿಸಿದ್ದಾರೆ. ಕನ್ನಡದ ಹಿರಿಯ ಲೇಖಕರೂ ಹಾಗೂ ನಿವೃತ್ತ ಶಿಕ್ಷಣ ಆಯುಕ್ತರಾದ ಶ್ರೀ ವೆಂಕಟೇಶ ಮಾಚಕನೂರು, ಇವರು ಈ ಕೃತಿಯನ್ನು "ಗಾಂಧಿಯೊಂದಿಗೆ ಒಬ್ಬ ನಾಸ್ತಿಕ" ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ."



**1945**ರ ಮಾರ್ಚ್ 30 ರಂದು ಬೆಳಗಿನ ಜಾವ ನಾಲ್ಕು ಗಂಟೆ ಆದಕೂಡಲೇ ಆಶ್ರಮ ನಿವಾಸಿ ಶ್ರೀ ಪ್ರಭಾಕರ ನನ್ನನ್ನು ಎಬ್ಬಿಸಿದರು. ಜೊತೆಗೆ ಅಂದು ಬೆಳಗಿನ ಐದು ಗಂಟೆಯ ಪ್ರಾರ್ಥನೆಯ ನಂತರ ಗಾಂಧೀಜಿ ನನ್ನೊಡನೆ ಮಾತನಾಡಲಿರುವುದಾಗಿ ತಿಳಿಸಿದರು. ಬಹಳ ನಿರೀಕ್ಷಿತ ಗಳಿಗೆಯೊಂದು ಬಂದುದಕ್ಕಾಗಿ ನನಗೆ ತುಂಬ ಸಂತೋಷವಾಯಿತು. ಬಹಳ ಆಶೆ ಮತ್ತು ಆತಂಕದ ನಿರೀಕ್ಷೆಯೊಂದಿಗೆ ನಾನು ಸಜ್ಜಾದೆ. ತಪ್ಪು ಗ್ರಹಿಕೆ ಮತ್ತು ಬಹಳ ದೋಷಣೆಗೆ ಒಳಗಾಗಿರುವ ವಿಷಯ ಕುರಿತು ದೊಡ್ಡ ಈಶ್ವರವಾದಿಯೊಂದಿಗೆ ನಾನು ಮಾತನಾಡಬೇಕಿತ್ತು. ಅವರು ನನ್ನನ್ನು ಏನು ಕೇಳಬಹುದು? ನಿರೀಶ್ವರವಾದ ಕುರಿತು ಅವರಲ್ಲಿರುವ ಪಕ್ಷಪಾತ ದೋರಣೆಯನ್ನು ಹೇಗೆ ನಿವಾರಿಸಬೇಕು? ನೀರೀಶ್ವರವಾದವನ್ನು ಅವರ ಮುಂದೆ ಹೇಗೆ ಪ್ರಸ್ತುತಪಡಿಸಬೇಕು? ಇವೇ ನನ್ನ ಆತಂಕದ ವಿಚಾರಗಳಾಗಿದ್ದವು. ನಿರೀಶ್ವರವಾದ ಸರಿ ಎಂದು ನನಗನಿಸಿತ್ತು. ನಿರೀಶ್ವರವಾದದ ಪರ ನಿಲುವು ಸ್ಪಷ್ಟಪಡಿಸಲು ನನಗೆ ಸುಸಂಧಿ ಒದಗಿ ಬಂದಿದ್ದಕ್ಕಾಗಿ ಸಂತೋಷವಾಗಿತ್ತು. ಸಮ್ಮಿಶ್ರ ಭಾವನೆಗಳೊಂದಿಗೆ ಆ ದಿನ ನಸುಕಿನಲ್ಲಿ ನಾನು ಗಾಂಧೀಜಿ ನಿವಾಸದ ಬಳಿ ಹೋದೆ.


ಗಾಂಧೀಜಿ ತಮ್ಮ ನಿವಾಸ ಹಿಂಭಾಗದಲ್ಲಿ ಕೆಳಗಿನ ಹಾಸಿಗೆ ಮೇಲೆ ಬಯಲಲ್ಲಿ ಪೂರ್ಣ ಕಾಲು ಚಾಚಿ ಮಿಶ್ರಮಿಸಿದ್ದರು. ನಾನು ಅವರಿಗೆ ವಂದಿಸಿದೆ. ತಮ್ಮ ಹಾಸಿಗೆ ಬಳಿ ಕೂಡ್ರಲು ನನಗೆ ಸೂಚಿಸಿದರು. ನಾನು ಕೂತೆ. ವಾತಾವರಣ ಪೂರಕವಾಗಿತ್ತು. ನನ್ನ ತಂದೆಯೊಂದಿಗೆ  ಹತ್ತಿರ ಕುಳಿತು ಚರ್ಚಿಸುವಂತೆ ನನಗನಿಸುತ್ತಿತ್ತು.

"ನಿರೀಶ್ವರವಾದ ನಿಮಗೆ ಏಕೆ ಬೇಕು, ಈಗ ನನಗೆ ಹೇಳಿ" ಎಂದು ಬಾಪೂಜಿ ಶಾಂತವಾಗಿ ಪ್ರೀತಿಯಿಂದ ಕೇಳಿದರು.

ಆ ಧ್ವನಿ ಮತ್ತು ಪ್ರಶ್ನೆಯ ರೀತಿ ನನ್ನನ್ನು ತಟ್ಟಿದವು. ನಿರೀಶ್ವರವಾದ ಅಂದರೆ ಏನು? ಅಥವಾ ನಿರೀಶ್ವರವಾದದ ಉಪಯೋಗ ಏನು? ಎಂಬಂತಹ ವಾಡಿಕೆಯ ಪ್ರಶ್ನೆ ಅದಾಗಿರಲಿಲ್ಲ. ಅಂತಹ ಪ್ರಶ್ನೆಗಳಿಗೆ ಕೇವಲ ಪಾಂಡಿತ್ಯದ ಉತ್ತರ ಬರುವುದು. 'ನಿಮಗೆ ನಿರೀಶ್ವರವಾದ ಏಕೆ ಬೇಕು' ಎಂಬ ಪ್ರಶ್ನೆಯಾಗಿತ್ತು. ಅದು ಬಾಪು ರೀತಿ ನನಗೆ ನೆನಪಿರುವಂತೆ ನಿರೀಶ್ವರವಾದ ಕುರಿತು ಅನೇಕ ಚರ್ಚೆಗಳಲ್ಲಿ ನನಗೆ ಯಾರೂ ಆ ರೀತಿ ಪ್ರಶ್ನೆ ಕೇಳಿದ್ದಿಲ್ಲ. ಆ ರೀತಿಯ ನೇರ ಒಂಟಿ ಪ್ರಶ್ನೆ ನನ್ನನ್ನು ಚಕಿತಗೊಳಿಸುವ ಬದಲು, ನನ್ನ ಹೃದಯಕ್ಕೆ ನೆಟ್ಟಿತು. ನಾನು ಹೃದಯ ಬಿಚ್ಚಿ ಮಾಡನಾಡಿದೆ.

ನಾನು ಆರಂಭಿಸಿದೆ: "ನಾನು ಕಳೆದ ವರ್ಷ ಕಲಕತ್ತಾದಲ್ಲಿದ್ದೆ. ಬರಗಾಲದಿಂದ ಬಸವಳಿದ ನಿರಾಶ್ರಿತರು ಪಾದಚಾರಿ ರಸ್ತೆಗಳ ಮೇಲೆ ನಿಧಾನವಾಗಿ ನಡೆಯುತ್ತಿದ್ದರು. ಅಲ್ಲಲ್ಲಿ ಕೆಲವರು ಸತ್ತು ಬಿದ್ದಿದ್ದರು. ತಿಂಡಿ ತಿನಿಸು, ಹಣ್ಣುಗಳನ್ನು ಮಾರುವ ಅಂಗಡಿಗಳ ಮುಂದೆಯೇ ಸತ್ತುಬಿದ್ದಿದ್ದರು. ಅದೇ ಪರಿಸ್ಥಿತಿಯಲ್ಲಿ ನಾಯಿ ಅಥವಾ ಹಸು ಇದ್ದರೆ ಅವು

ಕನ್ನಡಕ್ಕೆ–
ವೆಂಕಟೇಶ ಮಾಚಕನೂರು



ಹಸಿವೆಯಿಂದ ಸಾಯುತ್ತಿದ್ದವೆ? ಇಲ್ಲ. ಬೆದರಿಸಿರಿ, ಹೊಡೆಯಿರಿ, ಹೇಗೂ ಅವು ಪ್ರಯತ್ನಿಸಿ ತಮಗೆ ಬೇಕಾದ ಆಹಾರವನ್ನು ಅದೇ ಅಂಗಡಿಗಳಿಂದ ಪಡೆದು ತಮ್ಮ ಹಸಿವನ್ನು ನೀಗಿಕೊಳ್ಳುತ್ತಿದ್ದವು. ನಿರಾಶ್ರಿತರು ಹಾಗೆ ಏಕೆ ಮಾಡಲಿಲ್ಲ? ಅವರು ಪೋಲಿಸರಿಗೆ ಹೆದರಿರಲಿಕ್ಕಿಲ್ಲವೆಂದು ನನ್ನ ಭಾವನೆ. ನಿರಾಶ್ರಿತರು ಸಾವಿರಾರು ಸಂಖ್ಯೆಯಲ್ಲಿದ್ದರು. ಅವರೆಲ್ಲ ಒಟ್ಟಾಗಿ ಉಪಾಯ ಮಾಡುವ ಅಗತ್ಯವೂ ಇದ್ದಿಲ್ಲ. ಅವರಲ್ಲಿ ಒಂದಿಷ್ಟು ಜನ ಆ ಅಂಗಡಿಗಳಿಗೆ ಮುತ್ತಿಗೆ ಹಾಕಿದ್ದರೂ ಇಡೀ ಕಲಕತ್ತಾ ನಗರದ ಪೋಲಿಸರಿಗೂ ಅವರನ್ನು ತಡೆಯುವುದು ಶಕ್ಯವಿರಲಿಲ್ಲ. ಅವರನ್ನೆಲ್ಲ ಜೈಲಿನಲ್ಲಿ ಕೂಡಿಹಾಕಿದ್ದರೂ ಜೈಲಿನ ನಿಕೃಷ್ಟ ಊಟ ಕೂಡ ಹಸಿವೆಯಿಂದ ಸಾಯುವುದಕ್ಕಿಂತ ವಾಸಿಯಿತ್ತು. ಆದರೂ ನಿರಾಶ್ರಿತರು ನಿಸ್ಸಹಾಯಕರಾಗಿ ಅಂಗಡಿಗಳನ್ನು ಏಕೆ ಲೂಟಿ ಮಾಡಲಿಲ್ಲ? ಆ ನಿರಾಶ್ರಿತರೆಲ್ಲ ಅಂತಹ ಹೇಡಿಗಳಾಗಿದ್ದರೆ? ಅಥವಾ ಸಾರ್ವಜನಿಕ ಶಾಂತಿಗೆ ಭಂಗ ತರಬಾರದೆಂಬ ಉಚ್ಚ ನಾಗರಿಕ ಜವಾಬ್ದಾರಿ ಉಳ್ಳವರಾಗಿದ್ದರೆ ಅವರೆಲ್ಲ? ಇಲ್ಲ, ಅವರೆಲ್ಲ ನಾಗರಿಕ ಹಕ್ಕು ಕರ್ತವ್ಯಗಳ ಅರಿವಿಲ್ಲದ ಸಾಮಾನ್ಯ ಪ್ರಜೆಗಳಾಗಿದ್ದರು. ಅವರಿಗೆ ನಾಗರಿಕ ಹಕ್ಕು, ಕರ್ತವ್ಯಗಳ ಕನಿಷ್ಠ ಅರಿವಿದ್ದರೆ ಬಂಗಾಳದಲ್ಲಿ ಬರಗಾಲವೆಂಬುದೇ ಇರುತ್ತಿರಲಿಲ್ಲ."

"ಮತ್ತೊಂದು ದೃಷ್ಟಿಕೋನದಿಂದ ನೋಡಿದರೆ ಆ ಅಂಗಡಿ ಮಾಲಿಕರೆಲ್ಲ ತಮ್ಮದೇ ಜನ ತಮ್ಮ ಕಣ್ಮುಂದೆ ಹಸಿವೆಯಿಂದ ಬಳಲಿ ಸಾಯಲು ಬಿಡುವಷ್ಟು ಹೃದಯ ಹೀನರಾಗಿದ್ದರೆ? ಇಲ್ಲ. ಅವರು ನಿರಾಶ್ರಿತರಿಗೆ ನಡೆಸುತ್ತಿದ್ದ ಊಟದ ಕೇಂದ್ರಗಳಿಗೆ ಉದಾರವಾಗಿ ದೇಣಿಗೆ ನೀಡಿ ಅಂತ:ಕರಣದಿಂದ ಸಹಾಯ ಮಾಡಿದರು. ಪ್ರತಿ ದಿನ ನೀತಿ ತತ್ವದ ಗೀತೆಗಳನ್ನು ಹಾಡಿದರು."

"ನಿರಾಶ್ರಿತರು ಹೇಡಿಗಳಾಗಿರದಿದ್ದಲ್ಲಿ ತಮ್ಮ ಅಂಗಡಿ ಮಾಲಿಕರು ಕ್ರೂರಿಗಳಾಗಿರದಿದ್ದಲ್ಲಿ ಅಷ್ಟೊಂದು ಜನ ಹಸಿವೆಯಿಂದ ಏಕೆ ಸಾಯಬೇಕಿತ್ತು? ಇದಕ್ಕೆ ಕಾರಣ, ಜೀವನ ಕುರಿತು ಅವರ ತಾತ್ವಿಕ ನಿಲುವು ಕಾರಣವೆಂದು ನನಗೆ ಅನಿಸುತ್ತದೆ."

"ನಿರಾಶ್ರಿತರು ಮತ್ತು ಅಂಗಡಿ ಮಾಲಿಕರ ಜೀವನ ಕುರಿತು ದೃಷ್ಟಿಕೋನ ಒಂದೇ ಆಗಿದೆ." "ಇದು ನನ್ನ ಹಣೆಬರಹ ಅದು ಅವರ ಹಣೆಬರಹ, ದೇವರು ನನ್ನನ್ನು ಹೀಗೆ ಮಾಡಿದ, ದೇವರು ಅವನನ್ನು ಹಾಗೆ ಮಾಡಿದ್ದಾನೆ" ಎಂದು ಪ್ರತಿಯೊಬ್ಬರೂ ಅಂದುಕೊಂಡಿದ್ದಾರೆ. ಜೀವನ ಕುರಿತು ಅವರ ಸಾಮಾನ್ಯ ತಾತ್ವಿಕ ನಿಲುವಿನಿಂದಾಗಿ ಅವರ ಸಂಬಂಧದಲ್ಲಿ ಯಾವುದೇ ಬದಲಾವಣೆ ಇಲ್ಲದೇ ಕೆಲವರು ಹೊಟ್ಟೆ ತುಂಬ ಉಂಡರೆ, ಉಳಿದವರು ಹಸಿವೆಯಿಂದ ಸತ್ತರು. ನಿರಾಶ್ರಿತರು ತಮ್ಮ ತಾತ್ವಿಕ ನಂಬಿಕೆಯಿಂದಾಗಿ ಪ್ರಾಣಿಗಳಿಗಿಂತ ಭಿನ್ನವಾಗಿ ವರ್ತಿಸಿದರು."

"ಬಂಗಾಳದ ಬರಗಾಲದ ನಿಸ್ಸಹಾಯಕರ ಕುರಿತು ನಾನು ಹೇಳಿದ ಮಾತು ಅಸ್ಪಶ್ಯರಿಗೂ ಮತ್ತು ಇತರ ಕಪ್ಪು ವರ್ಣದವರಿಗೂ, ಬಿಳಿ ವರ್ಣದವರಿಗೂ, ಅನ್ವಯಿಸುತ್ತದೆ. ಅದೇ ತತ್ವಶಾಸ್ತ್ರ ಈ ಎಲ್ಲ ಸಂಬಂಧಗಳನ್ನು ಆಳುತ್ತದೆ."

"ಈ ರೀತಿಯ ತಾತ್ವಿಕ ಜೀವನ ವಿಧಾನದ ಪರಿಣಾಮಗಳೇನು? ಮನುಷ್ಯ ಪ್ರಾಣಿಗಳಿಗಿಂತ ಕಡೆಯಾಗಿದ್ದಾನೆ. ಚೆನ್ನಾಗಿ ಇರುವ ಬದಲು ಅವನು ರೋಗ ರುಜಿನಗಳಿಂದ ಸಾಯುತ್ತಿದ್ದಾನೆ. ಕೆಟ್ಟದ್ದನ್ನು ವಿರೋಧಿಸಲು ಅವನು ಬಲಹೀನನಾಗಿದ್ದಾನೆ. ಕೆಲವರ ಸುಖಕ್ಕಾಗಿ ಹಲವರು ಬಲಿಯಾಗುತ್ತಿದ್ದಾರೆ. ಸರ್ವಜನರ ಸುಖ ಬಯಸುವ, ಉದಾತ್ತ ನೈತಿಕ ಆಶಯಗಳುಳ್ಳ ನಮ್ಮ ಧ್ಯೆಯಗಳ ವಿಷಾದಕರ ವಾಸ್ತವ ಸಂಗತಿ ಇದಾಗಿದೆ. ದೇವರು, ದೈವದಲ್ಲಿಯ ನಂಬಿಕೆಯ ಜೀವನ ವಿಧಾನ, ಈಶ್ವರವಾದದ ಅನುಪಾಲನೆ, ಆದರ್ಶ ಮತ್ತು ನೈತಿಕ ಜೀವನ ವಿಧಾನವನ್ನು ವಿಫಲಗೊಳಿಸುವ ಮುಖ್ಯ ಕಾರಣಗಳೆಂದು ನಾನು ಹೇಳುತ್ತೇನೆ. ಈ ಅಸಮಾನ ಸಾಮಾಜಿಕ ಸಂಬಂಧಗಳ ವಿರುದ್ಧ, ತಾತ್ವಿಕ ನಿಲುವುಗಳ ವಿರುದ್ಧ, ನೋವು ಉಂಡವರು ಪ್ರತಿರೋಧ ಮಾಡಲು ಆರಂಭಿಸುವುದರಿಂದ ಅಸಮಾನತೆಯನ್ನು ಇನ್ನು ಮುಂದೆ ಸಂರಕ್ಷಿಸಿಕೊಂಡು ಹೋಗುವುದು ಸಾಧ್ಯವಿಲ್ಲ. ಶಾಂತಿ ಮತ್ತು ಪ್ರೀತಿಯ ಸ್ಥಳವನ್ನು ಯುದ್ಧ ಮತ್ತು ದ್ವೇಷಗಳು ಆಕ್ರಮಿಸುತ್ತಿವೆ."

"ನೀತಿ ಮತ್ತು ಆದರ್ಶವಾದ ಬೆಳೆಯಬೇಕೆಂದು ನಾನು ಬಯಸುತ್ತೇನೆ. ಆದರೆ ಅದು ದೇವರು ಮತ್ತು ದೈವದಲ್ಲಿಯ ನಂಬಿಕೆ, ಈಶ್ವರವಾದದಲ್ಲಿನ ತಾತ್ವಿಕ ಜೀವನ ವಿಧಾನ ಬದಲಾಗದೆ ಸಾಧ್ಯವಿಲ್ಲ. ಸಕಾರಾತ್ಮಕ ಶಬ್ದಗಳಲ್ಲಿ ಹೇಳುವುದಾದರೆ ನನಗೆ ನಿರೀಶ್ವರವಾದ ಬೇಕು. ಹಾಗಾದಲ್ಲಿ ಮಾತ್ರ ಮನುಷ್ಯ ದೇವರ ಮೇಲೆ ಅವಲಂಬಿತನಾಗುವುದು ಕಡಿಮೆಯಾಗಿ ತನ್ನ ಕಾಲುಗಳ ಮೇಲೆ ಬಲವಾಗಿ ನಿಲ್ಲಲು ಕಲಿಯುತ್ತಾನೆ. ಇಂತಹ ಕಾಲುಗಳ ಮೇಲೆ ಆರೋಗ್ಯಕರ ಸಾಮಾಜಿಕ ದೃಷ್ಟಿಕೋನ ಬೆಳೆಯುತ್ತದೆ. ಏಕೆಂದರೆ ನಿರೀಶ್ವರವಾದದಲ್ಲಿ ಮನುಷ್ಯ ಮನುಷ್ಯರ ನಡುವೆ ಸಾಮಾಜಿಕ, ಆರ್ಥಿಕ, ಅಸಮಾನತೆಗಳಿಗೆ ಕಾರಣಗಳಿಲ್ಲ. ಈಶ್ವರವಾದಿಗಳ ದಂಡು ಈವರೆಗೆ ಈ ಅಸಮಾನತೆಗಳನ್ನು ಯಾವುದೇ ಶಸ್ತ್ರಾಸ್ತ್ರಗಳಿಲ್ಲದೇ ಕಾಯ್ದುಕೊಂಡು ಬಂದಿದೆ. ದೇವರಲ್ಲಿನ ನಂಬಿಕೆ ಹೊರಟು ಹೋಗಿ, ಮನುಷ್ಯ ತನ್ನ ಕಾಲುಗಳ ಮೇಲೆ ತಾನು ನಿಲ್ಲತೊಡಗಿದರೆ, ಎಲ್ಲ ಮಾನವ ಕುಲ ಒಂದಾಗುತ್ತದೆ. ಸಮಾನ ಆಗುತ್ತದೆ. ಸಹ ಜೀವಿಗಳ ನಡುವೆ ಅಂತರ ಕಡಿಮೆ ಆಗಿ, ವ್ಯತ್ಯಾಸ ಮಾಯವಾಗಿ ಭಾವ ಸ್ಪಂದನಕ್ಕೆ ಆಸ್ಪದ ಆಗುತ್ತದೆ."

"ದೇವರೇ ಸತ್ಯವಾಗಿದ್ದರೆ ನಾನು ದೇವರನ್ನು ತೆಗೆದುಹಾಕುತ್ತಿದ್ದಿಲ್ಲ. ಆದರೆ ಹಾಗಿಲ್ಲ ದೇವರು ಮನುಷ್ಯ ಕಲ್ಪಿತ ಅಸತ್ಯ ಆಗಿದೆ. ಎಲ್ಲ ಅಸತ್ಯಗಳಂತೆ ಅದು ಕೂಡ ಮೊದಲು ಸ್ವಲ್ಪ ಪ್ರಯೋಜನಕಾರಿ ಆಗಿತ್ತು. ಆದರೆ ಕಾಲಾಂತರದಲ್ಲಿ ಎಲ್ಲ ಅಸತ್ಯಗಳಂತೆ ಅದು ಜೀವನವನ್ನು ಮಲಿನಗೊಳಿಸಿತು. ಆದ್ದರಿಂದ ಮನುಕುಲವನ್ನು ಭ್ರಷ್ಟ ಮುಕ್ತಗೊಳಿಸಿ ನೈತಿಕ ಮಟ್ಟ ಹೆಚ್ಚಿಸಲು ದೇವರಲ್ಲಿನ ನಂಬಿಕೆ ಹೋಗಲೇಬೇಕು."

ನೀರೀಶ್ವರನಾದ ವ್ಯಕ್ತಿಯ ಅತ್ಮ ವಿಶ್ವಾಸವನ್ನು ಹೆಚ್ಚಿಸಿ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಅಹಿಂಸಾತ್ಮಕವಾಗಿ ನೆಲೆಗೊಳಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ. ನಾನು ಎಲ್ಲಿ ತಪ್ಪಿದ್ದೇನೆ ಹೇಳಿ, ಬಾಪು ಎಂದೆ.

ಬಾಪುಜಿ ನನ್ನ ದೀರ್ಘ ವಿವರಣೆಯನ್ನು ತಾಳ್ಮೆಯಿಂದ ಕೇಳಿಸಿಕೊಂಡ ನಂತರ ಹಾಸಿಗೆಯಲ್ಲಿ ಎದ್ದು ಕುಳಿತು ನಿಧಾನವಾಗಿ ಹೇಳಿದರು "ಹೌದು, ನಿಮ್ಮ ಮಾತಿನಲ್ಲಿ ಆದರ್ಶ ಇದೆ. ನಿಮ್ಮ ನಿರೀಶ್ವರವಾದ ತಪ್ಪು, ನನ್ನ ಈಶ್ವರವಾದ ಸರಿ ಎಂದು ಹೇಳಲಾರೆ.



ನಾವು ಸತ್ಯದ ಅನ್ವೇಷಕರು. ನಾವು ತಪ್ಪುದಾರಿ ಹಿಡಿದದ್ದು ಗೊತ್ತಾದರೆ ಬದಲಾಯಿಸಿಕೊಳ್ಳುತ್ತೇವೆ. ಈ ರೀತಿ ಜೀವನದಲ್ಲಿ ಬಹಳ ಸಾರಿ ನಾನು ಬದಲಾಗಿದ್ದೇನೆ. ನೀವು ಕೆಲಸಗಾರರು ಎಂಬುದನ್ನು ನಾನು ಬಲ್ಲೆ. ನೀವು ಧರ್ಮಾಂಧರಲ್ಲ. ನೀವು ತಪ್ಪು ದಾರಿ ಹಿಡಿದದ್ದು ನಿಮಗೆ ತಿಳಿದರೆ ಬದಲಾಯಿಸಿಕೊಳ್ಳುತ್ತೀರಿ. ನೀವು ಧರ್ಮಾಂಧರಾಗದ ಹೊರತು ಯಾವುದೇ ಹಾನಿ ಇಲ್ಲ. ನೀವು ಸರಿ ಇದ್ದಿರೋ ಅಥವಾ ನಾನು ಸರಿ ಇದ್ದೇನೋ ಅನ್ನುವದನ್ನು ಪರಿಣಾಮಗಳು ಹೇಳಬೇಕು. ಆಗ ನಾನು ನಿಮ್ಮ ದಾರಿ ಹಿಡಿಯಬಹುದು. ಅಥವಾ ನೀವು ನನ್ನ ದಾರಿಗೆ ಬರಬಹುದು; ಅಥವಾ ಇಬ್ಬರೂ ಸೇರಿ ಮೂರನೆಯ ದಾರಿ ಹಿಡಿಯಬಹುದು. ನಿಮ್ಮ ಕೆಲಸವನ್ನು ನೀವು ಮುಂದುವರಿಸಿ, ನಿಮ್ಮ ವಿಧಾನ ನನ್ನ ವಿಧಾನಕ್ಕೆ ವಿರುದ್ಧವಾಗಿದ್ದರೂ ನಿಮಗೆ ನಾನು ಸಹಾಯ ಮಾಡುತ್ತೇನೆ."

ಗಾಂಧೀಜಿಯವರ ಉದಾರ ಮನಸ್ಸಿನಿಂದ ನನಗೆ ತುಂಬ ಸಂತೋಷವಾಯಿತು. ನಾನು ವಿನಂತಿಸಿದೆ. "ನೀವು ನನಗೆ ಪ್ರೋತ್ಸಾಹಿಸುತ್ತಿದ್ದೀರಿ. ಬಾಪು, ನಾನು ಹಿಡಿದ ದಾರಿಯಲ್ಲಿ ಇರಬಹುದಾದ ಅಪಾಯಗಳ ಬಗ್ಗೆ ನೀವು ನನ್ನನ್ನು ಎಚ್ಚರಿಸಬೇಕು. ನಿಮ್ಮ ಅನುಭವ ಮತ್ತು ಜ್ಞಾನಗಳಿಂದ ತನ್ನ ತಪ್ಪುಗಳು ಕಡಿಮೆ ಆಗಲು ಪ್ರಯೋಜನ ಆಗಬಹುದು."

ಬಾಪುಜಿ ಉತ್ತರಿಸಿದರು. "ತಪ್ಪು ಮಾಡುವುದು ತಪ್ಪಲ್ಲ, ತಪ್ಪೆಂದು ತಿಳಿದು ಯಾರೂ ತಪ್ಪು ಮಾಡಲಾರರು. ಆದರೆ ತಪ್ಪೆಂದು ತಿಳಿದರೂ ತಿದ್ದಿಕೊಳ್ಳದಿದ್ದರೆ ತಪ್ಪು. ತಪ್ಪು ಮಾಡಲು ನೀವು ಹೆದರುವಿರಾದರೆ ನೀವು ಏನನ್ನೂ ಮಾಡಲು ಹೆದರುವಿರಿ. ತಪ್ಪುಗಳು ಕಂಡು ಬಂದಾಗ ನೀವು ಅವುಗಳನ್ನು ಸರಿ ಪಡಿಸಿಕೊಳ್ಳಿ."

ನನ್ನ ಸಹೋದ್ಯೋಗಿಗಳ ನಡೆತೆಯಿಂದ ತಮಗೆ ಸಂತೋಷ ಆಗಿರುವುದಾಗಿ ಅವರು ನನಗೆ ಹೇಳಿದರು. ನಾನು ಅವರನ್ನು ಹೇಗೆ ಪ್ರಭಾವಿಸಿದ್ದೇನೆಂದು ಅರಿಯಲು ಅವರನ್ನು ಗಾಂಧೀಜಿ ಆಶ್ರಮಕ್ಕೆ ಕರೆಸಿದ್ದರು. ನನ್ನೊಂದಿಗೆ ಕಳೆದ ಮೂರು ತಿಂಗಳಿನಿಂದ ಅವರು ವಿಭಿನ್ನವಾಗಿ ವರ್ತಿಸಿದ್ದರೂ ನನ್ನ ಸಹದ್ಯೋಗಿಗಳ ಬಗ್ಗೆ ಅವರು ವಿಶೇಷ ಗಮನ ನೀಡಿದ ಬಗ್ಗೆ ನನಗೆ ಅರಿವಾಯಿತು.

ಆಮೇಲೆ ನೈತಿಕತೆ ಕುರಿತು ನನ್ನ ವಿಚಾರ ಏನೆಂದು ಅವರು ತಿಳಿಯಬಯಸಿದರು. "ನಾನು ಹೇಳಿದ್ದನ್ನು ಮಾಡುತ್ತೇನೆ ಮತ್ತು ಮಾಡಿದ್ದನ್ನು ಹೇಳುತ್ತೇನೆ, ನೈತಿಕ ನಡತೆ ಕುರಿತು ಅದು ನನ್ನ ವ್ಯಾಖ್ಯೆ ಮುಚ್ಚುಮರೆಗೆ ಅವಕಾಶವಿಲ್ಲ. ಮುಕ್ತ ನಡುವಳಿಕೆಯೆಲ್ಲವೂ ನೈತಿಕವೆ" ಎಂದು ನಾನು ಉತ್ತರಿಸಿದೆ. "ನಿಜವಾಗಿ ಗೌಪ್ಯ ಅನ್ನುವುದು ಪಾಪ" ಎಂದು ನಾನು ಹೇಳುತ್ತೇನೆ. ನೀವು ನಿರೀಶ್ವರವಾದಿ. ಪಾಪ ಶಬ್ದ ಬಳಸಲು ನಿಮಗೆ ಸಂಕೋಚ ಅನಿಸಬಹುದು" ಅಂದರು ಗಾಂಧೀಜಿ. ಮುಕ್ತವಾಗಿ ಬದುಕುವ ದಾರಿಯಲ್ಲಿ ತಾವು ಅನುಭವಿಸಿದ ಕೆಲವು ಕ್ಲಿಷ್ಟ ಅನುಭವಗಳನ್ನು ಅವರು ನನಗೆ ವಿವರಿಸಿದರು.

ನಾವು, ನಮ್ಮ ಗ್ರಾಮ ಕೇಂದ್ರಗಳಲ್ಲಿ ಶೌಚಾಲಯಗಳನ್ನು ಬಳಸುತ್ತಿದ್ದೇವೆಯೇ ಎಂದು ಕೇಳಿದರು. ನೈರ್ಮಲ್ಯದ ಸಮಸ್ಯೆ ಕುರಿತು ಹೇಳುತ್ತ "ಹರಿದ್ವಾರದಲ್ಲಿ ಗಂಗಾನದಿ ದಂಡೆಯಲ್ಲಿ ನನಗೆ ಶೌಚಕ್ಕೆ ಹೋಗಬೇಕಿತ್ತು. ಆದರೆ ಅಲ್ಲಿ ಸ್ವಚ್ಛ ಸ್ಥಳವೇ




ಇರಲಿಲ್ಲ. ಅಸ್ಪೃಶ್ಯತೆ ಆಚರಣೆ ಮತ್ತು ಮುಕ್ತ ಬಹಿರ್ದೆಶೆ ನಮ್ಮ ದೇಶದಲ್ಲಿನ ಎರಡು ನಿರ್ಲಜ್ಯ ಮಹಾಪಾಪಗಳು" ಅಂದರು.


ಮಾತನಾಡುವಾಗ ಒಮ್ಮೆ ಅವರು " ಕಾರ್ಯಕರ್ತರು ಹೆಸರು ಗಳಿಸಲು ಏಕೆ ಆತುರ ಪಡುತ್ತಾರೊ ತಿಳಿಯದು. ದಕ್ಷಿಣ ಆಫ್ರಿಕಾದಲ್ಲಿ ನಾನು ಐದು ವರ್ಷ ಅಡುಗೆಮನೆ ಮತ್ತು ಶೌಚಾಲಯದಲ್ಲಿ ತೊತ್ತಿನಂತೆ ದುಡಿದೆ" ಅಂದರು. ನಾನು ಮತ್ತೆ ಅವರೊಡನೆ ಸಲಹೆಗಾಗಿ ಯಾವಾಗ ಬೇಟಿ ಆಗಬಹುದೆಂದು ಕೇಳಿದೆ. " ನೀವು ನನ್ನ ಕುಟುಂಬದ ಸದಸ್ಯರು, ನನಗೆ ಬಿಡುವಿರುವುದನ್ನು ನೋಡಿಕೊಂಡು ಯಾವಾಗಲಾದರು ಬನ್ನಿ" ಎಂದ ಕೂಡಲೇ ಹೇಳಿದರು.

ನಾವು ಸುಮಾರು ಎಪ್ಪತ್ತು ನಿಮಿಷ ಮಾತನಾಡಿದ್ದೆವು. ವೇಳೆಯ ಮಿತಿ ಇರಲಿಲ್ಲ. ಅದು ಹೃದಯ ಸ್ಪರ್ಶಿ ಮಾತಾಗಿತ್ತು. ಬೇರೆ ಬೇರೆ ವಿಷಯಗಳ ಕುರಿತು ವೈಯಕ್ತಿಕ ಅನುಭವ, ಅಭಿಪ್ರಾಯಗಳು ವ್ಯಕ್ತವಾಗಿದ್ದವು. ಸಂದರ್ಶನದುದ್ದಕ್ಕೂ ನಾನು ಗಾಂಧೀಜಿಯವರಿಗೆ ಹತ್ತಿರವಾಗುತ್ತಿದ್ದೇನೆಂಬ ಭಾವನೆ ಉಂಟಾಗುತ್ತಿತ್ತು.

ಆನಂತರ ಅವರ ಕೆಲವು ಶಬ್ದಗಳು ನನ್ನ ಕಿವಿಯಲ್ಲಿ ಮಾರ್ದನಿಸುತ್ತಿದ್ದವು: "ನಾನು ನನ್ನ ಈಶ್ವರವಾದ ಸರಿ, ನಿಮ್ಮ ನಿರೀಶ್ವರವಾದ ತಪ್ಪು ಎಂದು ಹೇಳಲಾರೆ...... ನಿಮ್ಮ ವಿಧಾನ ನನಗಿಂತ ಭಿನ್ನವಾಗಿದ್ದರೂ ನಿಮಗೆ ನಾನು ಸಹಾಯ ಮಾಡುತ್ತೇನೆ..." ಅನ್ನುವ ಅವರ ಮಾತುಗಳು ಗಾಂಧೀಜಿಯ ಸಹನೆ ಮತ್ತು ಸದಾಚಾರಗಳನ್ನು ತೋರಿಸಿತು. "ನೀನು ತಪ್ಪು ಮಾಡಲು ಹೆದರಿದರೆ, ನಿನಗೆ ಏನೂ ಮಾಡಲಾಗುವುದಿಲ್ಲ" ಎಂಬ ಅವರ ಮಾತು ವಾಸ್ತವಿಕವಾಗಿ ನೇರ ಕ್ರಿಯೆಗೆ ಒತ್ತು ನೀಡುವಂತಿತ್ತು. ಅವರ ಮಾತುಗಳ ಮೆಲುಕು ಹಲವು ವಿಷಯಗಳಲ್ಲಿ ನನ್ನ ಸ್ವಭಾವ ಸುಧಾರಣೆಗೂ ಕಾರಣವಾಯಿತು.

ನಮ್ಮ ಚರ್ಚೆಯಲ್ಲಿಯ ಕೆಲವು ವಿಷಯಗಳ ಕುರಿತು ಗಾಂಧೀಜಿ ಆಳವಾಗಿ ಚಿಂತಿಸಿದಂತೆ ಕಂಡು ಬಂತು. ಚರ್ಚೆ ಕಾಲಕ್ಕೆ ಅವರ ಪ್ರತಿಕ್ರಿಯೆ ಮತ್ತು ವಿರಾಮಗಳಿಂದ ನನಗೆ ಹಾಗೆ ಕಂಡು ಬಂತು. ನಾನು ಅವರ ಮುಂದೆ ಮಂಡಿಸಿದ ನಿರೀಶ್ವರವಾದದಲ್ಲಿ, ದೇವರ ಅಸ್ತಿತ್ವ ನಿರಾಕರಿಸುವವರ ಸಾಮಾನ್ಯ ವಿಚಾರಧಾರೆಗಿಂತ ಗುಣಾತ್ಮಕ ಅಂಶಗಳಿರುವುದನ್ನು ಅವರು ಗಮನಿಸಿದರು.

**(ಗಾಂಧಿಯೊಂದಿಗೆ ಒಬ್ಬ ನಾಸ್ತಿಕ ಕೃತಿಯಿಂದ ಆಯ್ದ ಲೇಖನ)**



# ಮಹಾತ್ಮಾ ಗಾಂಧೀಜಿ ಮತ್ತು ಸಿನಿಮಾ

"ಗಾಂಧೀಜಿಯವರ ಪಾಲಿಗೆ ಸಿನಿಮಾ ಅವರ ಆಸಕ್ತಿಯ ವಿಷಯವಾಗಿರಲಿಲ್ಲ. ಆದರೆ, ಅವರ ಬದುಕು, ಹೋರಾಟ, ಚಿಂತನೆ ಇವುಗಳೆಲ್ಲವೂ ಜಗತ್ತಿನ ಸಿನಿಮಾರಂಗಕ್ಕೆ ಕಥಾ ವಸ್ತುಗಳಾದುದ್ದು ಮಾತ್ರ ವಿಶೇಷ. ಇಂತಹ ಅಪರೂಪದ ಸಂಗತಿಯನ್ನು ಭಾರತದ ಇತರೆ ಭಾಷೆಗಳನ್ನೂ ಒಳಗೊಂಡಂತೆ ಕನ್ನಡಚಿತ್ರರಂಗದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಹಾಗೂ ಬರೆಯುತ್ತಿರುವ ಲೇಖಕ ಡಾ.ಕೆ.ಪುಟ್ಟಸ್ವಾಮಿಯವರು ಜಗತ್ತಿನಾದ್ಯಂತ ಗಾಂಧಿ ಕುರಿತಂತೆ ತಯಾರಾದ ಚಲನಚಿತ್ರಗಳ ಅಪರೂಪದ ಮಾಹಿತಿಯನ್ನು ಇಲ್ಲಿ ದಾಖಲಿಸಿದ್ದಾರೆ."

ಡಾ. ಕೆ. ಪುಟ್ಟಸ್ವಾಮಿ





ತಮ್ಮ ಬದುಕು ಮತ್ತು ಹೋರಾಟಗಳಿಂದ ಇಪ್ಪತ್ತನೇ ಶತಮಾನದಲ್ಲಿ ಜಗತ್ತಿನ ಗಮನ ಸೆಳೆದ ಮೋಹನದಾಸ ಕರಮಚಂದ ಗಾಂಧೀ ಅವರು ಬದುಕಿದ್ದಾಗಲೇ 'ಮಹಾತ್ಮಾ' ಎಂದು ಕರೆಸಿಕೊಂಡವರು. ಅವರ ಬದುಕು ಮತ್ತು ಸಾಧನೆಯು ಯಾವುದೇ ಚಲನಚಿತ್ರಗಳಿಗೆ ವಸ್ತುವಾಗುವಷ್ಟು ಪ್ರಭಾವಶಾಲಿಯಾಗಿತ್ತು. ಹಾಗಾಗಿಯೇ ಜಗತ್ತಿನಾದ್ಯಂತ ಆಗ ತಾನೆ ಬೇರುಬಿಡುತ್ತಿದ್ದ ಚಲನಚಿತ್ರರಂಗ ಗಾಂಧೀಜಿಯ ಬಗ್ಗೆ ಕುತೂಹಲ ತಾಳಿದ್ದು ಸಹಜವಾಗಿತ್ತು.


ವಿಚಿತ್ರವೆಂದರೆ ಸಿನಿಮಾ ಮತ್ತು ಚಲನಚಿತ್ರರಂಗದ ಬಗ್ಗೆ ಗಾಂಧೀಜಿಯವರಿಗೆ ಒಳ್ಳೆಯ ಭಾವನೆ ಇರಲಿಲ್ಲ. ಅವು ಯುವಜನತೆಯ ಮನಸ್ಸನ್ನು ಕೆಡಿಸಿ ದಿಕ್ಕುತಪ್ಪಿಸುವ ಸಾಧನೆಗಳೆಂದು ನಂಬಿದ್ದರು. 1922ರಲ್ಲಿ ಬ್ರಿಟಿಷ್ ಸಿನಿಮಾಟೋಗ್ರಫಿ ಅಕಾಡೆಮಿಯು, ಚಲನಚಿತ್ರಗಳು ಸಮಾಜದ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಗಾಂಧೀಜಿಯ ಅಭಿಪ್ರಾಯ ಸಂಗ್ರಹಿಸಲು ಪ್ರಶ್ನಾವಳಿಯೊಂದನ್ನು ಕಳಿಸಿಕೊಟ್ಟಿತು. ಅದಕ್ಕೆ ಉತ್ತರವಾಗಿ ಗಾಂಧೀಜಿ "ಸಿನಿಮಾಗಳು ಜನರಿಗೆ ಶಿಕ್ಷಣ ಒದಗಿಸುತ್ತವೆಂದು ಹೇಳುವುದನ್ನು ಒಪ್ಪಲಾಗದು. ಅವು ಅನಿಷ್ಟಗಳು (Evils)" ಎಂಬ ಅರ್ಥದಲ್ಲಿ ತಮ್ಮ ಅಭಿಪ್ರಾಯ ದಾಖಲಿಸಿದರು. ಮತ್ತೆ ರಂಗೂನ್‌ನಲ್ಲಿ ಕಾರ್ಮಿಕರನ್ನು ಉದ್ದೇಶಿಸಿ (1928 ಸೆಪ್ಟೆಂಬರ್ 18) ಮಾತನಾಡುತ್ತಿದ್ದ ಗಾಂಧಿಯವರು "ಕುದುರೆ ಜೂಜಿನ ಅಡ್ಡೆ, ಮದ್ಯಪಾನ ಗೃಹ, ಜೂಜುಕಟ್ಟೆ, ವೇಶ್ಯಾಗೃಹಗಳಂತೆ. ಚಿತ್ರಮಂದಿರಗಳೂ ಸಮಾಜವನ್ನು ಹಾಳು ಮಾಡುತ್ತವೆ" ಎಂದು ಹೇಳಿದ್ದರು. ಅಹಮದಾಬಾದ್‌ನಲ್ಲಿ ಯುವಕರು ತಲೆಶೂಲೆಯಿಂದ ನರಳುತ್ತಿರುವುದಕ್ಕೆ ಅವರ ಸಿನಿಮಾ ಗೀಳು ಕಾರಣವೆಂದು 1932ರಲ್ಲಿ 'ಹರಿಜನ' ಪತ್ರಿಕೆಯಲ್ಲಿ ಬರೆದಿದ್ದರು.

ಸಿನಿಮಾ ಬಗೆಗಿನ ಗಾಂಧೀಜಿಯವರ ಈ ಅಭಿಪ್ರಾಯ ಅನೇಕ ಸೃಜನಶೀಲ ವ್ಯಕ್ತಿಗಳಿಗೆ ಸಹನೆಯಾಗಲಿಲ್ಲ. ತಿಲಕ್, ರವೀಂದ್ರನಾಥ ಟ್ಯಾಗೋರ್ ಮತ್ತು ಸರ್ದಾರ್ ಪಟೇಲ್ ಅವರು ಸಮಾಜಕ್ಕೆ ಶಿಕ್ಷಣ ನೀಡುವಲ್ಲಿ ಸಿನಿಮಾಗಳು ಮಹತ್ವ ಪಾತ್ರ ವಹಿಸುತ್ತವೆ ಎಂದು ಅಭಿಪ್ರಾಯ ವ್ಯಕ್ತಿಪಡಿಸುತ್ತಿದ್ದ ಕಾಲದಲ್ಲಿಯೇ ಗಾಂಧೀಜಿ ಅವರ ಅಭಿಪ್ರಾಯಗಳಿಗೆ ತದ್ವಿರುದ್ಧ ನಿಲುವನ್ನು ತಳೆದಿದ್ದರು. ಸಿನಿಮಾ ಬಗೆಗಿನ ಗಾಂಧಿಯವರ ಈ ಬಗೆಯ ಅವಹೇಳನದಿಂದ ನೊಂದ ಕೆ.ಎ. ಅಬ್ಬಾಸ್ ಅವರು ತಮ್ಮ 'ಫಿಲ್ಮ್ ಇಂಡಿಯಾ' ಪತ್ರಿಕೆಯಲ್ಲಿ ಅವರಿಗೊಂದು ಬಹಿರಂಗ ಪತ್ರವನ್ನು 1934ರಲ್ಲಿ ಬರೆದರು. ಅದರಲ್ಲಿ ಅಬ್ಬಾಸ್ ಅವರು ಗಾಂಧೀಜಿಯನ್ನು ಕುರಿತು "ಸಿನಿಮಾ ಬಗೆಗಿನ ಇಂಥ (ಋಣಾತ್ಮಕ) ಅಭಿಪ್ರಾಯ ನಿಮ್ಮಲ್ಲಿ ಹೇಗೆ ಹುಟ್ಟಿತೋ ಗೊತ್ತಿಲ್ಲ. ಬೇರೆ ಯಾರಾದರೂ ಆಗಿದ್ದರೆ ಅಂಥದ್ದನ್ನು ಉಪೇಕ್ಷಿಸಬಹುದಿತ್ತು. ಆದರೆ ನಿಮ್ಮ ಹೇಳಿಕೆ ಆಘಾತ ತಂದಿದೆ. ದಯಮಾಡಿ ಸಿನಿಮಾದಂತಹ ಕಲೆ ಉಳಿಯಲು, ಬೆಳೆಯಲು, ಸಮಾಜದ ಮೇಲೆ ಸತ್ಪರಿಣಾಮ ಬೀರಲು ಅವಕಾಶ ನೀಡಿ. ಬೇಕೆಂದರೆ, ಲೂಯಿ ಪಾಶ್ಚರ್, ಸಂತ ತುಕಾರಾಂ ಮೊದಲಾದ ಚಿತ್ರಗಳನ್ನು ನೋಡಿ. ನಿಮಗೆ ಸಿನಿಮಾ ಸಾಧ್ಯತೆಗಳು ತಿಳಿಯುತ್ತದೆ, ಎಂದು ಕೋರಿಕೊಂಡಿದ್ದರು. ಆದರೂ ಸಿನಿಮಾ ಬಗ್ಗೆ ಗಾಂಧೀಜಿ ಅವರಿಗೆ ಇದ್ದ ಅಭಿಪ್ರಾಯ ಕೊನೆಯವರೆಗೂ ಬದಲಾಗಲಿಲ್ಲ. ಅವರು ಬದುಕಿನಲ್ಲಿ ಎಂದೂ ಒಂದು ಸಾರ್ವಜನಿಕ ಪ್ರದರ್ಶನದಲ್ಲಿ ಸಿನಿಮಾ ವೀಕ್ಷಿಸಲಿಲ್ಲ. ನೋಡುವ ಬಯಕೆಯನ್ನೂ ವ್ಯಕ್ತಪಡಿಸಲಿಲ್ಲ. ಆದರೆ 1944ರಲ್ಲಿ ಮಲೇರಿಯಾದಿಂದ ಗುಣಮುಖರಾಗುತ್ತಿದ್ದ ಕಾಲದಲ್ಲಿ ಎರಡು ಚಿತ್ರಗಳನ್ನು ಅವರಿಗಾಗಿ ಪ್ರದರ್ಶಿಸಲಾಯಿತು. ಆದರೆ ಅವೆರಡೂ ಗಾಂಧೀಜಿಯವರಿಗೆ ರುಚಿಸಿದಂತೆ ಕಾಣಲಿಲ್ಲ.

ಆದರೆ ಗಾಂಧೀಜಿಯವರು ಚಲನಚಿತ್ರಗಳ ಬಗ್ಗೆ ವಿರೋಧವಿದ್ದರೂ, ಚಲನಚಿತ್ರರಂಗ ಅವರ ಬಗ್ಗೆ ಕುತೂಹಲ ತಳೆದದ್ದು ವಿಶಿಷ್ಟವಾದ ಸಂಗತಿ. 1922ರಲ್ಲಿ ಗಾಂಧೀಜಿಯವರನ್ನು ಬಂಧಿಸಿ ಜೇಲಿಗೆ ಕಳುಹಿಸುತ್ತಿದ್ದ ತುಣುಕೊಂದನ್ನು ಬ್ರಿಟಿಷ್ ಸರ್ಕಾರದ ಸುದ್ದಿ ವಿಭಾಗ ಚಿತ್ರಿಸಿ ಲಂಡನ್‌ನಲ್ಲಿ ಪ್ರದರ್ಶಿಸಿತ್ತು. ಮೂಕಿ ಚಿತ್ರವಾದ ಕಾರಣ "ಬ್ರಿಟಿಷ್ ಸರ್ಕಾರದ



ಗಾಂಧೀಜಿಯವರ ಬದುಕನ್ನು ಸಮಗ್ರವಾಗಿ ಅಲ್ಲದಿದ್ದರೂ, ಸಾರಸಂಗ್ರಹವಾಗಿ ಕಟ್ಟಿಕೊಟ್ಟು ಯಶಸ್ವಿಯಾದ ಚಿತ್ರಗಳಲ್ಲಿ ಅಗ್ರಗಣ್ಯವೆನಿಸಿದ ಚಿತ್ರವೆಂದರೆ 1982ರಲ್ಲಿ ಬಿಡುಗಡೆಯಾದ ಸರ್ ರಿಚರ್ಡ್ ಅಟೆನ್‌ಬರೋ ಅವರ "ಗಾಂಧಿ". ಅಟೆನ್‌ಬರೋ ಅವರು ದಶಕಗಳ ಕಾಲ ಗಾಂಧೀಜಿಯ ಜೀವನಕತೆಯನ್ನು ಅಧ್ಯಯನ ಮಾಡಿ ಚಿತ್ರಕತೆ ರೂಪಿಸಿಕೊಂಡರು.



ಎದುರಾಳಿಯನ್ನು ಜೈಲಿಗೆ ಹಾಕಲಾಯಿತು" ಎಂದು ಶೀರ್ಷಿಕೆ ನೀಡಿ ಪ್ರದರ್ಶಿಸಿದರು.

1934ರಲ್ಲಿ ಅಮೆರಿಕಾದ ಸುದ್ದಿ ಸಂಸ್ಥೆಯ ಚಿತ್ರೀಕರಣ ತಂಡವೊಂದು ಬೋರ್ಸಾಡ್ ಗ್ರಾಮದಲ್ಲಿ ತಂಗಿದ್ದ ಗಾಂಧೀಜಿಯವರನ್ನು ಸಂದರ್ಶನದ ಚಿತ್ರೀಕರಣ ನಡೆಸಿತು. ಅದಾಗಲೇ ಚಲನಚಿತ್ರಗಳಿಗೆ ಮಾತು ಬಂದಿತ್ತು. ಅದು ಗಾಂಧೀಜಿ ಮಾತನಾಡಿದ್ದನ್ನು ಸೆರೆ ಹಿಡಿದ ಮೊದಲ ಚಿತ್ರವಾಗಿತ್ತು. ಮುಂಡು ಉಟ್ಟು, ನಗ್ನ ಎದೆಯನ್ನು ತೋರಿಸುತ್ತಾ ಮೆಲುದನಿಯಲ್ಲಿ ಗಾಂಧೀಜಿ ಬಾಲ್ಯವಿವಾಹ, ಅಸ್ಪೃಶ್ಯತೆ, ಸಮಾಜಸೇವೆಯ ಬಗ್ಗೆ ಮಾತನಾಡಿ, ಕೊನೆಗೆ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆಗೂ ಸಿದ್ಧವಾಗಿರುವುದನ್ನು ದೃಢಪಡಿಸಿದರು.

ಜಗತ್ತಿನ ಚಲನಚಿತ್ರರಂಗದ ಅನೇಕ ಪ್ರಸಿದ್ಧ ವ್ಯಕ್ತಿಗಳು ಗಾಂಧೀಜಿಯ ಬಗ್ಗೆ ಕುತೂಹಲ ತಾಳಿದ್ದರು. ಅಂಥವರಲ್ಲಿ "ತೆರೆಯ ಮೇಲಿನ ಕವಿ" ಎಂದು ಜಗತ್ ಪ್ರಸಿದ್ಧನಾದ ಚಾರ್ಲಿ ಚಾಪ್ಲಿನ್ ಕೂಡ ಒಬ್ಬರು. 1931ರಲ್ಲಿ ಗಾಂಧೀಜಿ ದುಂಡುಮೇಜು ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್‌ಗೆ ತೆರಳಿದ್ದರು. ಅದೇ ವೇಳೆ ಅಮೆರಿಕಾದಿಂದ ಚಾರ್ಲಿ ಚಾಪ್ಲಿನ್ ತವರಿಗೆ ಮರಳಿದ್ದರು. ಲಂಡನ್‌ನ ಕಾರ್ಮಿಕರ ಬಡಾವಣೆಯೊಂದರಲ್ಲಿ ಗಾಂಧೀಜಿ ತಂಗಿರುವುದನ್ನು ತಿಳಿದ ಚಾಪ್ಲಿನ್ ಅವರ ಭೇಟಿಯನ್ನು ಆಪ್ತ ಸಹಾಯಕರಲ್ಲಿ ತಿಳಿಸಿದರು. ವಿಷಯ ತಿಳಿದ ನಂತರ "ಚಾಪ್ಲಿನ್ ಎಂದರೆ ಯಾರು?" ಎಂದು ಗಾಂಧೀಜಿ ಕೇಳಿದ ಪ್ರಶ್ನೆಗೆ ಸಹಾಯಕರು ವಿವರಣೆ ನೀಡಿದರು. ಗಾಂಧೀಜಿಯ ನಿಲುವುಗಳ ವಿಚಾರ ತಿಳಿದಿದ್ದ ಚಾಪ್ಲಿನ್ ಭೇಟಿಯಾದ ಕೂಡಲೇ ಪ್ರಶ್ನಿಸಿದ್ದು "ನೀವು ಯಾಕೆ ಯಂತ್ರಗಳನ್ನು ನಿರಾಕರಿಸುತ್ತೀರಿ" ಎಂದು. ಗಾಂಧೀಜಿ ಅದಕ್ಕೆ ಸುದೀರ್ಘ ವಿವರಣೆ ನೀಡಿದರು. ಜನಸಂಖ್ಯೆ ಹೆಚ್ಚು ಇರುವ ಭಾರತದಲ್ಲಿ ಎಲ್ಲರೂ ಆಹಾರ ಮತ್ತು ಉಡುಪನ್ನು ತಾವೇ ಸಂಪಾದಿಸಿಕೊಳ್ಳಬೇಕು. ಆದರೆ ಇಂಗ್ಲೆಂಡಿನ ಜವಳಿ ಕಾರ್ಖಾನೆಗಳು ಅಗತ್ಯಕ್ಕಿಂತಲೂ ಹೆಚ್ಚು ಬಟ್ಟೆಯನ್ನು ಉತ್ಪಾದಿಸಿ ಭಾರತದ ಜನರ ಮೇಲೆ ಹೇರುತ್ತಿರುವುದು ಒಂದು ಬಗೆಯ ಹಿಂಸೆ. ಜನರು ನಿರುದ್ಯೋಗಿಗಳಾಗುತ್ತಿದ್ದಾರೆ. ಬೃಹತ್ ಕೈಗಾರಿಕೆಗಳು ಹಿಂಸಾಕೂಪಗಳಾಗುತ್ತಿರುವುದನ್ನು ಚಾಪ್ಲಿನ್‌ಗೆ ಮನಗಾಣಿಸಿದರು. ಒಂದು ವೇಳೆ ಭಾರತ ಸ್ವತಂತ್ರವಾದರೂ, ಬೃಹತ್ ಕೈಗಾರಿಕೆಗಳನ್ನು ತಾವು ವಿರೋಧಿಸುವುದಾಗಿ ಸ್ಪಷ್ಟಪಡಿಸಿದರು.

ಗಾಂಧೀಜಿಯವರು ಸಿನಿಮಾಗಳನ್ನು ಎಷ್ಟೇ ವಿರೋಧಿಸಿದರೂ, ಚಲನಚಿತ್ರರಂಗ ಅವರ ಪರವಾಗಿ ಸ್ಪಂದಿಸಿದ್ದು ವಿಶೇಷವೆನಿಸುತ್ತದೆ. ವಿಚಿತ್ರವೆಂದರೆ ಭಾರತದ ಮೊದಲ ಮೂಕಿ ಕಥಾ ಚಿತ್ರ "ರಾಜಾ ಹರಿಶ್ಚಂದ್ರ"ದ ಕಥಾವಸ್ತು ಗಾಂಧೀಜಿಯವರನ್ನು ಪ್ರಭಾವಿಸಿದ ಸತ್ಯ ಹರಿಶ್ಚಂದ್ರನ ಕತೆಯನ್ನು ಆಧರಿಸಿತ್ತು. ತಮ್ಮ ಪ್ರಾರ್ಥನೆಯ ಸಭೆಗಳಲ್ಲಿ ಭಕ್ತಿ ಪಂಥದ ಸಂತರ ಭಜನೆ ಹಾಡುವುದನ್ನು ಗಾಂಧೀಜಿ ಕಡ್ಡಾಯಗೊಳಿಸಿದ್ದರು. ಸಂತರ ಬದುಕು ಮತ್ತು ಭಜನ್‌ಗಳು ಸಮಾಜದ ತಾರತಮ್ಯವನ್ನು ಧಿಕ್ಕರಿಸಿ ಸಮಾನತೆಗಾಗಿ ಹಂಬಲಿಸಿದ ಆಶಯಗಳನ್ನೊಳಗೊಂಡ ಕಾರಣ ಶ್ರೇಣೀಕೃತ ಭಾರತೀಯ ಸಮಾಜದಲ್ಲಿ ಸಮಾನತೆ ಸಾಧನೆಗೆ ಸಂತರ ಕೃತಿಗಳು ಅಗತ್ಯವೆಂದು ಅವರು ಮನಗಂಡಿದ್ದರು. 1932 ರಿಂದ ಭಾರತೀಯ ಭಾಷೆಗಳಲ್ಲಿ ಮಾತಿನ ಚಿತ್ರಗಳು ಆರಂಭವಾದವು. ವಿಚಿತ್ರವೆಂದರೆ 1932 ರಿಂದ 1950ರವರೆಗೆ ತಯಾರಾದ ಭಾರತೀಯ ಚಲನಚಿತ್ರಗಳಲ್ಲಿ ಭಕ್ತಿ ಪ್ರಧಾನ ಚಿತ್ರಗಳದ್ದೇ ಸಿಂಹಪಾಲು. ಕನ್ನಡದಲ್ಲಿಯೂ ಪುರಂದರ ದಾಸ, ಭಕ್ತ ಕಬೀರ್, ಹೇಮರೆಡ್ಡಿ ಮಲ್ಲಮ್ಮ, ಶಿವಶರಣೆ ನಂಬೆಯಕ್ಕ, ಭಕ್ತ ಕುಂಬಾರ, ಮೊದಲಾದ ಸಂತರ ಕತೆಯನ್ನಾಧರಿಸಿದ ಚಿತ್ರಗಳು ತೆರೆಕಂಡವು.

ಗಾಂಧೀಜಿ ಮತ್ತು ಚಲನಚಿತ್ರಗಳ ನಂಟನ್ನು ವಿಶ್ಲೇಷಿಸಿದಾಗ, ಮೂರು ವರ್ಗದ ಚಿತ್ರಗಳನ್ನು ಗುರುತಿಸಬಹುದು. ಒಂದು ಗಾಂಧೀಜಿಯವರ ಬದುಕನ್ನು ಆಧರಿಸಿದ ಸಾಕ್ಷ್ಯಚಿತ್ರಗಳು ಎರಡು ಗಾಂಧೀಜಿಯವರ ಬದುಕನ್ನು ಅಥವಾ ಬದುಕಿನ ಭಾಗವನ್ನು ಆಧರಿಸಿದ ಕಥಾಚಿತ್ರಗಳು. ಮೂರು ಗಾಂಧೀಜಿಯವರ ತತ್ವ, ಆದರ್ಶಗಳು ಮತ್ತು ನೀತಿಗಳನ್ನು ಬಿಂಬಿಸುವ ವಸ್ತುವುಳ್ಳ ಕಥಾಚಿತ್ರಗಳು.

ಗಾಂಧೀಜಿಯವರ ನಿಧನಾನಂತರ ಅವರ ಬದುಕನ್ನು ಬಿಂಬಿಸುವ ಚಲನಚಿತ್ರ ತಯಾರಿಸಬೇಕೆಂಬ ಒತ್ತಡ ಕೇಂದ್ರ ಸರ್ಕಾರದ ಮೇಲಿತ್ತು. ಆದರೆ, 1962ರಲ್ಲಿ ರಾಜ್ಯ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪ್ರಧಾನಿ ಪಂಡಿತ್ ಜವಾಹರಲಾಲ್‌ರವರು ಈ ಬಗ್ಗೆ ಸರ್ಕಾರದ ನಿಲುವು ಪ್ರಕಟಿಸಿದರು. "ಗಾಂಧೀಜಿಯವರ ಬದುಕು ಮತ್ತು ಆದರ್ಶಗಳನ್ನು ಚಲನಚಿತ್ರ ಮಾಧ್ಯಮದಲ್ಲಿ ಕಟ್ಟಿಕೊಡುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಅವರ ಬದುಕಿಗೆ ನ್ಯಾಯ ಒದಗಿಸುವ ಚಿತ್ರವೊಂದನ್ನು ರೂಪಿಸುವ ಸಾಮರ್ಥ್ಯ, ಪ್ರತಿಭೆ, ಸರ್ಕಾರದಲ್ಲಿಲ್ಲ" ಎಂದು ಹೇಳಿದರು.

1969ರಲ್ಲಿ ಗಾಂಧೀ ಪ್ರತಿಷ್ಠಾನ, ಕೇಂದ್ರ ಸರ್ಕಾರದ ಚಲನಚಿತ್ರ ವಿಭಾಗ (ಫಿಲಂ ಡಿವಿಜನ್) ಮೊದಲಾದ ಸಂಸ್ಥೆಗಳು ಗಾಂಧೀಜಿಯವರ ಜನ್ಮ ಶತಮಾನೋತ್ಸವದ ಅಂಗವಾಗಿ





ಚಲನಚಿತ್ರ ನಿರ್ಮಿಸುವ ಕಾರ್ಯಕ್ಕೆ ಇಳಿದವು. ಅವುಗಳ ಯತ್ನದ ಫಲವಾಗಿ, ಗಾಂಧೀಜಿಯವರಿದ್ದ ಚಲನಚಿತ್ರದ ತುಣುಕುಗಳನ್ನು ಸಂಗ್ರಹಿಸಿ ಅದರ ಆಧಾರದ ಮೇಲೆ ಚಿತ್ರಕತೆ ಬರೆದು "ಮಹಾತ್ಮರ ಜೀವನ; 1869–1948" ಎಂಬ ಬಹುಭಾಷೆಯ ಸಾಕ್ಷ್ಯಚಿತ್ರವೊಂದನ್ನು ತಯಾರಿಸಲಾಯಿತು. ಅಲ್ಲದೆ ವಿವಿಧ ಅವಧಿಯ ಆವೃತ್ತಿಗಳೂ ಬಿಡುಗಡೆಯಾದವು. ಅತ್ಯಂತ ದೀರ್ಘವಾದ ಚಿತ್ರ ಆರು ಗಂಟೆಯಷ್ಟು ದೀರ್ಘವಾಗಿತ್ತು. ಆದರೆ, ಈ ಚಿತ್ರದ ಬಗ್ಗೆ ಒಳ್ಳೆಯ ವಿಮರ್ಶೆಯಾಗಲೀ, ಜನರ ಮೆಚ್ಚುಗೆಯಾಗಲೀ ದೊರೆಯಲಿಲ್ಲ.

ಆದರೆ ಗಾಂಧೀಜಿಯವರು ಬದುಕಿದ್ದಾಗಲೇ ಅವರ ತತ್ವಾದರ್ಶಗಳನ್ನು ಪ್ರಚುರಪಡಿಸುವ ಚಿತ್ರಗಳು ಬೇರೆ ಬೇರೆ ಭಾಷೆಗಳಲ್ಲಿ ತಯಾರಾಗಿ ಯಶಸ್ವೀ ಪ್ರದರ್ಶನ ಕಾಣುತ್ತಿದ್ದವು. ಗಾಂಧೀಜಿಯ ಆದರ್ಶಗಳನ್ನು ತೆರೆಯ ಮೇಲೆ ಬದ್ಧತೆಯಿಂದ ತಂದು ಚಿತ್ರ ನಿರ್ಮಾಪಕರಲ್ಲಿ ತಮಿಳಿನ ಕೆ. ಸುಬ್ರಮಣ್ಯಂ ಅಗ್ರಗಣ್ಯರು. ಸ್ವತಃ ಗಾಂಧೀವಾದಿಯಾಗಿ, ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡಿದ್ದ ಸುಬ್ರಮಣ್ಯಂ ಅವರು 1934ರಲ್ಲಿಯೇ ಬ್ರಾಹ್ಮಣ ಜಾತಿಯ ವ್ಯಕ್ತಿಯೊಬ್ಬ ದಲಿತ ಹುಡುಗಿಯನ್ನು ಪೋಷಿಸುವ ಕಥಾ ಹಂದರದ 'ಸೇವಾ ಸದನಂ' (1938) ಚಿತ್ರವನ್ನು ಗಾಂಧೀಜಿಯವರಿಗೆ ಪ್ರಿಯವಾಗಿದ್ದ ವಿಧವಾ ವಿವಾಹ, ಬಾಲ್ಯ ವಿವಾಹದ ಅನಿಷ್ಟಗಳ ವಿರುದ್ಧದ 'ಬಾಲಯೋಗಿನಿ' 'ತ್ಯಾಗಭೂಮಿ' ಚಿತ್ರಗಳನ್ನು ನಿರ್ಮಿಸಿದರು. ಚಪ್ಪಲಿ ಹೊಲೆಯುವ ಚೇತ ಹರಿಭಕ್ತನಾಗಿ ಮೇಲ್ಪಂಕ್ತಿ ಹಾಕುವ ಕಥಾ ಹಂದರವಿದ್ದ "ಭಕ್ತ ಚೇತ" (1939) ನಿರ್ಮಿಸಿ ಸಂಪ್ರದಾಯಸ್ಥರನ್ನು ಎದುರು ಹಾಕಿಕೊಂಡಿದ್ದರು. ಇಲ್ಲಿಂದ ಆರಂಭವಾದ ಗಾಂಧೀಜಿಯ ತತ್ವಗಳ ಪ್ರಭಾವ ಭಾರತದ ಎಲ್ಲ ಭಾಷೆಗಳಲ್ಲೂ ಅನೇಕ ಚಿತ್ರಗಳನ್ನು ಪ್ರಭಾವಿಸಿರುವುದಕ್ಕೆ ಹೇರಳ ಉದಾಹರಣೆಗಳು ದೊರೆಯುತ್ತವೆ.

ಗಾಂಧೀಜಿಯವರ ಬದುಕಿನ ಒಂದು ಭಾಗವನ್ನು ಆಧರಿಸಿದ ಇಂಗ್ಲಿಷ್ ಚಲನಚಿತ್ರವೊಂದು 1963ರಲ್ಲಿ ತಯಾರಾಗಿ ಬಿಡುಗಡೆಯಾಯಿತು. ಅದುವೆ "ನೈನ್ ಅವರ್ಸ್ ಟು ರಾಮಾ". ಈ ಚಿತ್ರವು ಗಾಂಧೀಜಿಯ ಬದುಕಿನ ಕೊನೆಯ ನಿಮಿಷದ ಹಿಂದಿನ 9 ಗಂಟೆಗಳು, ಅವರ ಹಂತಕ ನಾಥರಾಮ ಗೋಡ್ಸೆಯ ಬದುಕಿನಲ್ಲಿ ನಡೆದ ಘಟನೆಗಳನ್ನು ಆಧರಿಸಿತ್ತು. ತನ್ನದೇ ಕಾದಂಬರಿಯನ್ನು ಆಧರಿಸಿ ನಿರ್ದೇಶಕ ಸ್ಟಾನ್ಲಿ ವೊಲ್ಪರ್ಟ್ ನಿರ್ಮಿಸಿದ ಈ ಚಿತ್ರದಲ್ಲಿ ಗಾಂಧೀಜಿಯ ಪಾತ್ರ (ಜೆ.ಜೆ. ಕಶ್ಯಪ್)ದ ಅವಧಿ ಕೆಲವೇ ನಿಮಿಷಗಳು. ಗೋಡ್ಸೆಯ ಹಿಂದಿನ ಬದುಕಿನ ವಿವರಗಳನ್ನೊಳಗೊಂಡ ಈ ಚಿತ್ರದಲ್ಲಿ ಗಾಂಧೀಜಿಯ ಪಾತ್ರವನ್ನು ಹೊರತುಪಡಿಸಿದರೆ, ಉಳಿದ ಪಾತ್ರಗಳನ್ನು ನಿರ್ವಹಿಸಿರುವವರೆಲ್ಲರೂ ವಿದೇಶೀ ಕಲಾವಿದರು. ವಿಚಿತ್ರ ಧ್ವನಿಯಲ್ಲಿ ಮಾತನಾಡುವ ಕಲಾವಿದರು; ಪತ್ತೇದಾರಿ ಸಿನಿಮಾದ ತಂತ್ರ: ಹಾಗಾಗಿ ವಿಮರ್ಶಕರು ಈ ಚಿತ್ರವನ್ನು ಕಟುವಾಗಿ ಟೀಕಿಸಿದರು.

ಗಾಂಧೀಜಿಯವರ ಬದುಕನ್ನು ಸಮಗ್ರವಾಗಿ ಅಲ್ಲದಿದ್ದರೂ, ಸಾರಸಂಗ್ರಹವಾಗಿ ಕಟ್ಟಿಕೊಟ್ಟು ಯಶಸ್ವಿಯಾದ ಚಿತ್ರಗಳಲ್ಲಿ ಅಗ್ರಗಣ್ಯವೆನಿಸಿದ ಚಿತ್ರವೆಂದರೆ 1982ರಲ್ಲಿ ಬಿಡುಗಡೆಯಾದ ಸರ್ ರಿಚರ್ಡ್ ಅಟೆನ್‌ಬರೋ ಅವರ "ಗಾಂಧಿ". ನೆಹರೂ ಅವರ ಜೀವಿತ ಕಾಲದಲ್ಲಿಯೇ ಗಾಂಧೀಜಿ ಬಗ್ಗೆ ಚಿತ್ರ ನಿರ್ಮಿಸುವ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದ ಅಟೆನ್‌ಬರೋ ಅವರು ದಶಕಗಳ ಕಾಲ ಗಾಂಧೀಜಿಯ ಜೀವನಕತೆಯನ್ನು ಅಧ್ಯಯನ


**ಗಾಂಧೀಜಿ ಮತ್ತು ಚಲನಚಿತ್ರಗಳ ನಂಟನ್ನು ವಿಶ್ಲೇಷಿಸಿದಾಗ, ಮೂರು ವರ್ಗದ ಚಿತ್ರಗಳನ್ನು ಗುರುತಿಸಬಹುದು. ಒಂದು ಗಾಂಧೀಜಿಯವರ ಬದುಕನ್ನು ಆಧರಿಸಿದ ಸಾಕ್ಷ್ಯಚಿತ್ರಗಳು ಎರಡು ಗಾಂಧೀಜಿಯವರ ಬದುಕನ್ನು ಅಥವಾ ಬದುಕಿನ ಭಾಗವನ್ನು ಆಧರಿಸಿದ ಕಥಾಚಿತ್ರಗಳು. ಮೂರು ಗಾಂಧೀಜಿಯವರ ತತ್ವ, ಆದರ್ಶಗಳು ಮತ್ತು ನೀತಿಗಳನ್ನು ಬಿಂಬಿಸುವ ವಸ್ತುವುಳ್ಳ ಕಥಾಚಿತ್ರಗಳು.**

ಮಾಡಿ ಚಿತ್ರಕತೆ ರೂಪಿಸಿಕೊಂಡರು. ಗಾಂಧೀಜಿಯ ಬಗ್ಗೆ ಗಾಢವಾದ ಅನುರಕ್ತಿಯನ್ನು ತಾಳಿದ್ದರೂ, ಎಲ್ಲಿಯೂ ಗಾಂಧೀಜಿಯನ್ನು ಅನಗತ್ಯವಾಗಿ ವೈಭವೀಕರಿಸದೆ ರಕ್ತ ಮಾಂಸಗಳಿಂದ ಈ ಭೂಮಿಯ ಮೇಲೆ ನಡೆದಾಡಿದ ಸಹಜ ವ್ಯಕ್ತಿಯೊಬ್ಬನ ಕತೆಯನ್ನು ಆಪ್ತವಾಗಿ ನಿರೂಪಿಸಿ ಯಶಸ್ವಿಯಾದರು. ಗಾಂಧೀಜಿಯ ಬದುಕನ್ನು ಹೇಳುತ್ತಲೇ, ಭಾರತದ ಸ್ವಾತಂತ್ರ್ಯ ಸಂಗ್ರಾಮ, ದೇಶ ವಿಭಜನೆಯ ಪಾಶವೀಯತೆ, ಆಕ್ರಂದನದ ದನಿಗಳನ್ನು ಹೆಣೆದ ಚಿತ್ರವಾಗಿ ಇದು ಗಮನ ಸೆಳೆಯಿತು. ಲಂಡನ್‌ನಲ್ಲಿ ಬ್ಯಾರಿಸ್ಟರ್ ಪದವಿ ಪಡೆದು, ಭಾರತದಲ್ಲಿ ಯಶಸ್ಸು ಕಾಣದೆ, ಕಕ್ಷಿದಾರನೊಬ್ಬನಿಗೆ ನೆರವಾಗಲು ದಕ್ಷಿಣ ಆಫ್ರಿಕಾಗೆ ತೆರಳುವ ಗಾಂಧಿ; ಆರಂಭದಲ್ಲಿಯೇ ವರ್ಣದ್ವೇಷಕ್ಕೆ ತುತ್ತಾಗಿ, ಅಸಮಾನತೆ ವಿರುದ್ಧ ಹೋರಾಡಲು ಸಂಕಲ್ಪಿಸುವ ದೃಶ್ಯದಿಂದ ಆರಂಭವಾಗಿ, ಅವರ ಹತ್ಯೆಯವರೆಗಿನ ಅವಧಿಯವರೆಗೆ ಗಾಂಧೀಜಿಯ ಬದುಕಿನ ಬಹುಮುಖ್ಯ ಘಟ್ಟಗಳನ್ನು ಚಿತ್ರ ನಿರೂಪಿಸುತ್ತದೆ. ಭಾರತ ಸರ್ಕಾರದ ಸಹಯೋಗದಲ್ಲಿ ನಿರ್ಮಾಣವಾದ ಈ ಚಿತ್ರ ವಿಶಾಲ ಭಿತ್ತಿಯಲ್ಲಿ, ಅಪಾರ ವೆಚ್ಚದಲ್ಲಿ ತಯಾರಾಯಿತು. ಗಾಂಧೀಜಿಯ ಬದುಕಿನ ಕಾಲದ ಪರಿಸರವನ್ನು ನಿರ್ಮಿಸಲು, ಬಳಸಿದ ಸ್ಥಳಗಳು, ವಾಹನಗಳು, ಉಡುಪು ಮತ್ತು ಇತರೆ ಪರಿಕರಗಳು ಚಿತ್ರಕ್ಕೆ ಸಹಜತೆಯನ್ನು ತಂದುಕೊಟ್ಟವು. ಗಾಂಧೀಜಿಯ ಪಾತ್ರಧಾರಿ ಇಂಗ್ಲೆಂಡ್‌ನ ನಟ ಬೆನ್‌ಕಿಂಗ್ಸ್‌ಲೇ ಅವರು ತಮ್ಮ ಪ್ರತಿಭೆಯಿಂದ ಗಾಂಧೀಜಿಯ ಪಾತ್ರಕ್ಕೆ ಜೀವ ತುಂಬಿದರು. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರು ಭಾರತೀಯ ಕೂಲಿ ಕಾರ್ಮಿಕರ ಹಕ್ಕುಗಳಿಗಾಗಿ ನಡೆಸಿದ ಹೋರಾಟ ಗೋಖಲೆಯವರ ಸಲಹೆಯಂತೆ ಭಾರತವನ್ನು ಪರಿಚಯಿಸಿಕೊಳ್ಳಲು ಅವರು ಮಾಡುವ ಭಾರತಯಾತ್ರೆ, ಕಾಂಗ್ರೆಸ್ ಸಂಸ್ಥೆಯನ್ನು ಸೇರಿ ಸಾರ್ವಜನಿಕ ಬದುಕಿಗೆ ಸೇರುವುದು, ಖಿಲಾಫತ್ ಚಳವಳಿ, ಚಂಪಾರಣ್ ಸತ್ಯಾಗ್ರಹ, ಜಲಿಯನ್ ವಾಲಾ ಬಾಗ್ ದುರಂತ, ದುಂಡು ಮೇಜು ಪರಿಷತ್ತು, ದಂಡಿ ಯಾತ್ರೆ, ಚೋರಿ ಚೋರ ದುರಂತ, ಚಲೇಜಾವ್ ಚಳವಳಿ, ಆಶ್ರಮಗಳ ಸ್ಥಾಪನೆ, ದೇಶ ವಿಭಜನೆ, ಭಾರತದ ಸ್ವಾತಂತ್ರ್ಯ ಕಲ್ಕತ್ತಾ ನಗರದಲ್ಲಿ ಗಾಂಧೀಜಿಯ ಉಪವಾಸ, ಗಾಂಧಿಯ ಹತ್ಯೆ ಮತ್ತು ಅಸ್ಥಿ ವಿಸರ್ಜನೆವರೆಗೆ ವ್ಯಾಪಿಸಿರುವ ಕಥಾಹಂದರದಲ್ಲಿ ನಿರ್ದೇಶಕರು ನಗೆಗಾರ ಗಾಂಧಿಗೂ, ಸಂಸಾರಿ ಗಾಂಧಿಗೂ ಎಡೆ (Space) ಕಲ್ಪಿಸಿದ್ದಾರೆ. ಆದುದರಿಂದ ಈ ಚಿತ್ರ ಗಾಂಧೀಜಿಯವರ ವ್ಯಕ್ತಿತ್ವವನ್ನು ಸಾರಸಂಗ್ರಹವಾಗಿ ಹಿಡಿದಿರುವ ಅಪರೂಪದ ಚಿತ್ರವೆನಿಸಿಕೊಂಡಿದೆ.

ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಹೋರಾಟಗಳ ಮೂಲಕ ತಮ್ಮ ವ್ಯಕ್ತಿತ್ವದಲ್ಲಿ ಪರಿವರ್ತನೆಯನ್ನು ಕಂಡುಕೊಂಡ ಗಾಂಧೀಜಿಯ ಬದುಕಿನ ಭಾಗವನ್ನು ನಿರೂಪಿಸಿರುವ ನಿರ್ದೇಶಕ ಶ್ಯಾಂ ಬೆನೆಗಲ್ ಅವರು "ದಿ ಮೇಕಿಂಗ್ ಆಫ್ ಮಹಾತ್ಮಾ" (1996) ಗಾಂಧೀಜಿಯ ಬದುಕನ್ನು ಆಧರಿಸಿದ ಮತ್ತೊಂದು ಗಮನಾರ್ಹ ಚಿತ್ರ. ಗಾಂಧೀಜಿಯನ್ನು ಜಗತ್ತು ಈಗ 'ಮಹಾತ್ಮಾ' ಎಂದು ಗುರುತಿಸುತ್ತದೆ. ಆದರೆ ಆ ಮಹಾತ್ಮನನ್ನು ರೂಪಿಸಿದ್ದು ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಕಳೆದ 21 ವರ್ಷಗಳ ಅವಧಿಯಲ್ಲಿ ನಡೆಸಿದ ಹೋರಾಟಗಳು ಎನ್ನುವುದನ್ನು ಈ ಚಿತ್ರ ಮನಗಾಣಿಸುತ್ತದೆ. ಗಾಂಧೀಜಿ ತಮ್ಮ ಅಹಿಂಸಾ ಚಳವಳಿ, ಅಸಹಕಾರ, ಸರಳ ಬದುಕು ಮತ್ತು ಅವರು ಮುಂದೆ ಪಾಲಿಸಿದ ಅನೇಕ ತಾತ್ವಿಕತೆಗಳನ್ನು ಪ್ರಯೋಗಿಸಿದ್ದು ಇಲ್ಲಿಯೇ. ಗಾಂಧೀಜಿಯವರ ವ್ಯಕ್ತಿತ್ವದ ಶಕ್ತಿ ಮತ್ತು ದೌರ್ಬಲ್ಯಗಳನ್ನು ಚಿತ್ರಿಸುತ್ತಲೇ, ದೌರ್ಬಲ್ಯಗಳನ್ನು ಮೀರುವ ವ್ಯಕ್ತಿಯಾಗಿ, ಹಿಂಸೆಯಿಲ್ಲದೆ ಸಂಗ್ರಾಮವನ್ನು ನಡೆಸುವ ನಾಯಕನಾಗಿ ರೂಪುಗೊಳ್ಳುವ ಮತ್ತು ವ್ಯಕ್ತಿಯೊಬ್ಬ ಹಾದುಹೋಗುವ ಪರಿವರ್ತನೆಯ ಹಂತಗಳನ್ನು ಈ ಚಿತ್ರವು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ.

'ಗಾಂಧಿ' ಮತ್ತು 'ಮೇಕಿಂಗ್ ಆಫ್ ಮಹಾತ್ಮಾ' ಚಿತ್ರಗಳನ್ನು ಹೊರತುಪಡಿಸಿದರೆ, ಗಾಂಧೀಜಿಯು ಬೇರೆ ಸಮಕಾಲೀನ ವ್ಯಕ್ತಿಗಳ ಬದುಕಿನಲ್ಲಿ ವಹಿಸುವ ಪಾತ್ರಗಳಿರುವ ಅನೇಕ ಚಿತ್ರಗಳಿವೆ. ನಿರ್ದೇಶಕ ಕೇತನ್ ಮೆಹ್ತಾ ಅವರು, ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಜೀವನ ಚರಿತ್ರೆಯನ್ನು ತೆರೆಗೆ ತಂದ 'ಸರ್ದಾರ್' (1993) ಚಿತ್ರದಲ್ಲಿ ಪಟೇಲ್ ಮತ್ತು ಗಾಂಧೀಜಿಯ ನಡುವಣ ರಾಜಕೀಯ ಮತ್ತು ವೈಯಕ್ತಿಕ ಸಂಬಂಧಗಳ ಚಿತ್ರಣವಿದೆ. ಇದು ಸರ್ದಾರರ ಜೀವನದ ಚಿತ್ರವಾದರೂ ಪ್ರಧಾನವಾಗಿ ಪಟೇಲ್ ಮತ್ತು ಗಾಂಧೀಜಿ ಇಬ್ಬರೂ ಭಾರತದ ಸ್ವಾತಂತ್ರ್ಯಕ್ಕಾಗಿ ಒಟ್ಟಾಗಿ ದುಡಿದ ಬಗ್ಗೆ ವಿವರಗಳಿವೆ. ಆರಂಭದಲ್ಲಿ ಗಾಂಧೀಜಿಯವರ ಅಹಿಂಸಾತ್ಮಕ ಮಾರ್ಗಗಳನ್ನು ಅಲ್ಲಗಳೆಯುವ ಪಟೇಲ್ ಕೊನೆಗೆ ಗಾಂಧೀಜಿಯ ಉಪನ್ಯಾಸವೊಂದನ್ನು ಕೇಳಿ ಅದರಿಂದ ಪ್ರಭಾವಿತರಾಗುತ್ತಾರೆ. ಭಾರತದ ಇಬ್ಬರು ಪುರುಷ ಶ್ರೇಷ್ಠರ ಸೈದ್ಧಾಂತಿಕ ನೆಲೆಗಳನ್ನು ಅರ್ಥಮಾಡಿಕೊಳ್ಳಲು ಈ ಚಿತ್ರ ನೆರವಾಗುತ್ತದೆ. ಸರ್ದಾರ್ ಆಗಿ ನಟ ಪರೇಶ್ ರವಾಲ್ ಮತ್ತು ಗಾಂಧೀಜಿ ಪಾತ್ರದಲ್ಲಿ ಅನು ಕಪೂರ್ ನಟನೆ ಸಹಜವಾಗಿದೆ.

ಸರ್ದಾರ್ ಸಿನಿಮಾದಷ್ಟೇ ಗಾಂಧೀಜಿಯ ಸೈದ್ಧಾಂತಿಕ ನೆಲೆಗಳನ್ನು ಒರೆಗೆ ಹಚ್ಚಿದ ಮತ್ತೊಂದು ಶ್ರೇಷ್ಠ ಚಿತ್ರವೆಂದರೆ ಜಬ್ಬಾರ್ ಪಟೇಲ್ ನಿರ್ದೇಶನದ "ಡಾ. ಬಾಬಾ ಸಾಹೇಬ್ ಅಂಬೇಡ್ಕರ್" (2000). ದಮನಕ್ಕೊಳಗಾದ ತಳಸಮುದಾಯಗಳ ಹಕ್ಕುಗಳಿಗೆ ಮತ್ತು ವಿಮೋಚನೆಗೆ ಹೋರಾಡಿದ ಡಾ. ಬಿ.ಆರ್. ಅಂಬೇಡ್ಕರ್ ಅವರ ಬದುಕನ್ನು ಸಾರಸಂಗ್ರಹವಾಗಿ ರೂಪಿಸಿದ ಅಪರೂಪದ ಚಿತ್ರವಿದು. ಅಂಬೇಡ್ಕರ್ ಅವರ ಶಿಕ್ಷಣ, ಹೋರಾಟ, ಸಂಘಟನೆಗಳ ಅನೇಕ ಘಟನೆಗಳನ್ನು ಸಮರ್ಥವಾಗಿ ನಿರೂಪಿಸುವ ಈ ಚಿತ್ರ ಚಾರಿತ್ರಿಕ 'ಪೂನಾ ಒಪ್ಪಂದ'ದ ಸಮಯದಲ್ಲಿ ನಡೆದ ಗಾಂಧಿ–ಅಂಬೇಡ್ಕರ್ ನಡುವಣ ಘಟನೆಗಳನ್ನು ಒಳಗೊಂಡಿದೆ. ಗಾಂಧೀಜಿಯವರ ನಿಲುವುಗಳನ್ನು ತಾತ್ವಿಕವಾಗಿ ವಿರೋಧಿಸುವ



ಅಂಬೇಡ್ಕರ್, ಕೊನೆಗೂ ಗಾಂಧೀಜಿಯ ಉಪವಾಸ ಸತ್ಯಾಗ್ರಹಕ್ಕೆ ಮಣಿಯುವ ಘಟನೆಯನ್ನು ನಿರ್ದೇಶಕರು ಸಂಯಮದಿಂದ ನಿರೂಪಿಸಿದ್ದಾರೆ. ಈ ಒಂದು ಘಟನೆಯನ್ನು ಹೊರತುಪಡಿಸಿದರೆ, ಈ ಚಿತ್ರದಲ್ಲಿ ಗಾಂಧಿಯ ಪಾತ್ರ ಇಲ್ಲವೆನ್ನಬಹುದು.

"ಗಾಂಧೀ, ಮೈ ಫಾದರ್" (2007) ಅಥವಾ 'ಗಾಂಧೀ, ನನ್ನ ತಂದೆ" ಚಿತ್ರವು ಗಾಂಧೀಜಿಯವರ ವ್ಯಕ್ತಿತ್ವದ ಮತ್ತೊಂದು ಮುಖವನ್ನು ಪರಿಚಯಿಸುವ ಚಿತ್ರ. ಇದು ಗಾಂಧೀಜಿಯ ಮಗ ಹರಿಲಾಲ್ ಗಾಂಧಿಯ ಜೀವನ ಕಥೆಯಾದರೂ ಗಾಂಧೀಜಿಯ ವ್ಯಕ್ತಿತ್ವ ಗಾಢವಾಗಿ ಆವರಿಸಿಕೊಂಡಿದೆ. 'ರಾಷ್ಟ್ರಪಿತ'ನಾದರೂ ತನ್ನ ದೃಷ್ಟಿಯಲ್ಲಿ ಗಾಂಧೀ ಅಪ್ಪನಾಗಲೂ ವಿಫಲವಾದದ್ದನ್ನು ಮಗ ಹರಿಲಾಲ್ ಗಾಂಧಿ ಸಮರ್ಥಿಸಿಕೊಳ್ಳುವ ವಿವರಗಳಿಂದ ಚಿತ್ರ ಕುತೂಹಲಕಾರಿಯಾಗಿದೆ. ವಿಮರ್ಶಕರು ಮತ್ತು ಪ್ರೇಕ್ಷಕರಿಂದ ಮಿಶ್ರ ಪ್ರತಿಕ್ರಿಯೆ ಪಡೆದ ಈ ಚಿತ್ರ ರಾಷ್ಟ್ರೀಯ ಪುರಸ್ಕಾರವನ್ನು ಪಡೆಯಿತು.

ಗಾಂಧೀಜಿಯವರ ಬದುಕಿನ ಕಾಲದಲ್ಲಿನ ಘಟನಾವಳಿಗಳನ್ನು ಆಧರಿಸಿದ ಅನೇಕ ಕಾಲ್ಪನಿಕ ಚಿತ್ರಗಳಲ್ಲಿ ಗಾಂಧೀಜಿಯ ಪಾತ್ರವಿರುವ ಚಿತ್ರಗಳೂ ಬಂದಿವೆ. ಅವುಗಳಲ್ಲಿ ಮುಖ್ಯವಾದದ್ದು ಕಮಲ್ ಹಾಸನ್ ರವರ 'ಹೇ ರಾಮ್' ಇದು ಗಾಂಧೀಜಿಯವರ ಹತ್ಯೆಗೆ ಕಾರಣವಾಗುವ ಘಟನೆಗಳನ್ನು ಒಳಗೊಳ್ಳುತ್ತಲೇ, ಅದನ್ನು ತಪ್ಪಿಸಲು ವಿಫಲ ಯತ್ನ ಮಾಡುವ ಸಾಕೇತ್‌ರಾಮ್ ಎಂಬ ವ್ಯಕ್ತಿಯ ಬದುಕಿನ ಕತೆಯನ್ನು ಆಧರಿಸಿದೆ. ಮಹಾತ್ಮಾ ಅವರ ನಿಜ ಆದರ್ಶಗಳನ್ನು ತಪ್ಪಾಗಿ ತಿಳಿದು ಹಾದಿ ತಪ್ಪುವ ಮತ್ತು ತಪ್ಪನ್ನು ಮನಗಂಡು ಪರಿವರ್ತನೆಯಾಗುವ ವ್ಯಕ್ತಿಯೊಬ್ಬನ ಕತೆ ಸಮರಸದ ಸಂದೇಶದ ಕತೆಯಾಗಿ ಗಮನ ಸೆಳೆಯಿತು.

ಸಮಕಾಲೀನ ಬಿಕ್ಕಟ್ಟುಗಳ ಸಂದರ್ಭದಲ್ಲಿ ಗಾಂಧೀಜಿ ಒಂದು ಆದರ್ಶವಾಗಿ, ಸಾಧನವಾಗಿ, ಆಶ್ವಾಸನೆಯಾಗಿ ಒದಗಿ ಬರುವ ಅನೇಕ ಬಗೆಯ ಚಿತ್ರಗಳು ಗಾಂಧೀಜಿಯನ್ನು ಜೀವಂತವಾಗಿರಿಸುವ ಪ್ರಯೋಗಗಳಾಗಿವೆ. "ಲಗೇ ರಹೋ ಮುನ್ನಾ ಬಾಯಿ" (2006), "ಮೈನೆ ಗಾಂಧೀ ಕೋ ನಹೀ ಮಾರಾ" ಮುಂತಾದವು ಈ ಬಗೆಯ ಚಿತ್ರಗಳು. ಇವು ಸಮಕಾಲೀನ ಆತ್ಮ ಸಾಕ್ಷಿಯನ್ನು ಪರೀಕ್ಷಿಸಲು ಗಾಂಧೀಜಿ ಒಂದು ಸಾಧನವಾಗಿ ಬಳಕೆಯಾಗುತ್ತಿರುವುದನ್ನು ಬಿಂಬಿಸುತ್ತವೆ.

ಹೀಗೆ ಸಿನಿಮಾಗಳ ಬಗ್ಗೆ ಗಾಂಧೀಜಿ ಅವರಿಗೆ ಪ್ರೀತಿಯಿಲ್ಲದಿದ್ದರೂ, ಸಿನಿಮಾರಂಗ ಗಾಂಧೀಜಿಯನ್ನು ಪ್ರೀತಿಯಿಂದ ಕಂಡು ತನ್ನ ಅನೇಕ ಅಭಿವ್ಯಕ್ತಿ ಕ್ರಮಗಳಲ್ಲಿ ಗಾಂಧೀಜಿಯನ್ನು ಬಳಸಿಕೊಂಡಿದೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010